
Kannada Prabha • Daily • Saturday • 09.05.2026 • Volume 60 • Issue 128 • Pages 20+12 • Price ₹7 Bengaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಬಿಎಸ್‌ವೈ ಸುವರ್ಣೋತ್ಸವ

ಸಕ್ರಿಯ ರಾಜಕಾರಣ ಪ್ರವೇಶಿಸಿ 50 ವರ್ಷ ತುಂಬಿದ ಹಿನ್ನೆಲೆ. ಚಿತ್ರದುರ್ಗದಲ್ಲಿ ಇಂದು ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ. 10 ಲಕ್ಷ ಜನರು ಭಾಗಿ

ಕನ್ನಡಪ್ರಭ ಜತೆ ಇಂದು 12 ಪುಟಗಳ ವಿಶೇಷ ಸಂಚಿಕೆ



ವಿವೇಕಾ ವಿದ್ಯಾ ಸಂಸ್ಥೆ (ರಿ.)
ಎಂ. ಶ್ರೀನಿವಾಸ್ ಎಜುಕೇಷನಲ್ & ಚಾರಿಟೇಬಲ್ ಟ್ರಸ್ಟ್ (ರಿ.)
ಹನಕೆರೆ, ಮಂಡ್ಯ ತಾಲ್ಲೂಕು, ಮಂಡ್ಯ ಜಿಲ್ಲೆ – 571404






2025 - 2026 ನೇ ಸಾಲಿನ SSLC ಪರೀಕ್ಷೆಯಲ್ಲಿ
100% RESULT

2026 - 2027 ನೇ ಸಾಲಿನ ಶಾಲಾ ದಾಖಲಾತಿ ಪ್ರಾರಂಭವಾಗಿದೆ.

Pre-Primary to Grade 10

ಸ್ಥಳೀಯ ಶಾಲಾ ಬಸ್ ಮತ್ತು ಹಾಸ್ಟೆಲ್ ಸೌಲಭ್ಯವಿದೆ
Local School Bus & Hostel facility Available

ITI ಕಾಲೇಜಿಗೆ ಪ್ರವೇಶಗಳು ಆರಂಭವಾಗಿವೆ!
ಈಗಲೇ ವಿಚಾರಿಸಿ (ಎಸ್ಎಸ್ಎಲ್ಸಿ ಪದವೀಧರರು ಅರ್ಹರು)

ನಾವು ಪ್ರಾಂಶುಪಾಲರನ್ನು, ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಿದ್ದೇವೆ (ಅರ್ಹತೆ TGT/PGT)

We are Hiring

Principal, Kannada, English, Hindi, Maths, Science & Social Teacher's FOR CLASS 1 TO 10TH

Teachers Qualification: TGT / PGT

Class 1 to 7: Any Degree, D.Ed, B.Ed
Class 8 to 10: Any Degree, PG with B.Ed,

Preferably: Resident Teacher for hostel-based teaching and supervision. Free food and accommodation provided.

Kindergarten Teacher - PUC/ any degree ,NST | PET Teacher - any degree with B.PEd/ M.PEd

Librarian | Art & Craft Teacher | Office Assistant (clerk) | Accountant | Bus Drivers
Watch Man (Day & Night Shift) | Cleaning Department | Attender | Cook | Scavengers

msinternationalpublicschool2@gmail.com
Hanakere, Mandya Taluk, Mandya - 571404.
+91 98450 41912 / +91 91485 76991
+91 96636 09416 / +91 98441 36279

Kannada Prabha • Daily • Saturday • 09.05.2026 • Volume 60 • Issue 128 • Pages 20+12 • Price ₹7 Bengaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



ಇಂದಿನ ಸ್ಪೆಷಲ್! ಪುಟದಲ್ಲಿಂದು

₹3000 ಕೋಟಿ ದಾಖಲೆ ಗಳಿಕೆ ಬೆನ್ನಲ್ಲೇ ಧುರಂಧರ್ 3ಕ್ಕೆ ಸಿದ್ಧತೆ?

'ಈ ವರ್ಷಾಂತ್ಯದ ಹೊತ್ತಿಗೆ ಸರ್ಪ್ರೈಸ್ ಕೊಡ್ತೀವಿ, ಇನ್ನೂ ಕೆಲಸ ಶುರು ಆಗಿಲ್ಲ, ಸದ್ಯಕ್ಕೆ ತಯಾರಿ ನಡೆಯುತ್ತಿದೆ.' ಭರ್ಜರಿ ₹3000 ಕೋಟಿ ಕಲೆಕ್ಷನ್ ಮಾಡಿರುವ ಧುರಂಧರ್ ಚಿತ್ರದ ಮತ್ತೊಂದು ಭಾಗದ ಬಗ್ಗೆ ಸಹ ನಿರ್ಮಾಪಕಿ ಜ್ಯೋತಿ ದೇಶಪಾಂಡೆ ಸುಳಿವು. 13

www.KannadaPrabha.in ಶನಿವಾರ 9.05.2026 • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ Kannada Prabha • Daily • Saturday • 09.05.2026 • Volume 60 • Issue 128 • Pages 20+12 • Price ₹7 Bengaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ



₹40 ಕೋಟಿ ತೆರಿಗೆ: ಜಾರ್ಖಂಡ್ ಬಿಹಾರ ವಲಯಕ್ಕೆ ಧೋನಿ ನಂ.1

ಪ್ರಸಕ್ತ ಹಣಕಾಸು ವರ್ಷದಲ್ಲಿ ₹40 ಕೋಟಿ ತೆರಿಗೆ ಪಾವತಿಸಿದ ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ. ಈ ಮೂಲಕ ಬಿಹಾರ, ಜಾರ್ಖಂಡ್ ತೆರಿಗೆ ವಲಯದಲ್ಲೇ ನಂ.1 ತೆರಿಗೆದಾರನೆಂಬ ಹಿರಿಮೆಗೆ ಜಾರ್ಖಂಡ್ ಮೂಲದ ಕ್ರಿಕೆಟಿಗ ಪಾತ್ರ. 12



ಅಸ್ಸಾಂ, ಬಂಗಾಳದಲ್ಲೂ ಬಿಜೆಪಿ ಮತ ಚೋರಿ: ರಾಹುಲ್ ಆರೋಪ ↘ 11



ಹನಿಟ್ರ್ಯಾಪ್ ಕುರಿತು ನಿಗಾ ಇಟ್ಟಿರಿ: ಆಟಗಾರರಿಗೆ ಬಿಸಿಸಿಐ ಎಚ್ಚರಿಕೆ! ↘12



ವಂದೇ ಮಾತರಂಗೆ ರಾಷ್ಟ್ರಗೀತೆ ರೀತಿ ರಕ್ಷಣೆ ಸರಿಯಲ್ಲ: ಓವೈಸಿ ↘11




ವೆಚ್ಚ ಕಡಿತ: ಏರಿಂಡಿಯಾದ ಸಿಬ್ಬಂದಿ ವೇತನ ಹೆಚ್ಚಳ ವಿಳಂಬ ↘ 11

ಬಿಎಸ್‌ವೈ ಸುವರ್ಣೋತ್ಸವ

ಇಂದಿನ ಸಂಚಿಕೆ ಜತೆ 12 ಪುಟಗಳ ವಿಶೇಷ ಪುರವಣಿ





ಚಿತ್ರದುರ್ಗದಲ್ಲಿಂದು ಬಿಎಸ್‌ವೈ ಅಭಿಮಾನೋತ್ಸಾಹ!

ಬಿಎಸ್‌ವೈ ರಾಜಕೀಯಕ್ಕೆ 50 ವರ್ಷ | ಮಧ್ಯಾಹ್ನ 12 ಗಂಟೆಗೆ ಬೃಹತ್ ಸಮಾವೇಶ | ಅಮಿತ್ ಶಾ ಭಾಗಿ

• **ರಮೇಶ್ ಬಿದರಕೆರೆ**
ಕನ್ನಡಪ್ರಭ ವಾರ್ತೆ ಚಿತ್ರದುರ್ಗ

ಕರ್ನಾಟಕದ ಜನಪ್ರಿಯ ಜನನಾಯಕ, ರೈತ ಪರ ಹೋರಾಟಗಾರ, ಕರ್ನಾಟಕದಲ್ಲಿ ಬಿಜೆಪಿ ಕಟ್ಟಿ ಬೆಳೆಸಿ, ದಕ್ಷಿಣ ಭಾರತದಲ್ಲಿ ಮೊದಲ ಸಲ ಬಿಜೆಪಿ ಸರ್ಕಾರ ಅಧಿಕಾರಕ್ಕೆ ತಂದ ನಾಯಕ ಬಿ.ಎಸ್.ಯಡಿಯೂರಪ್ಪ ರಾಜಕಾರಣಕ್ಕೆ ಬಂದು ಭರ್ತಿ ಅರ್ಧ ಶತಮಾನ ತುಂಬಿದ ಸಂತಸದ ಘಳಿಗೆಯನ್ನು ಸಾಕಾರಗೊಳಿಸಲು ಕೋಟೆನಾಡು ಚಿತ್ರದುರ್ಗದಲ್ಲಿ ಏ. 9ರಂದು ಆಯೋಜಿಸಿರುವ ಅಭಿಮಾನೋತ್ಸವದ ಸಿದ್ಧತೆಗಳು ಪೂರ್ಣಗೊಂಡಿವೆ.

ಚಿತ್ರದುರ್ಗದ ದಾವಣಗೆರೆ ರಸ್ತೆಯ ಶ್ರೀ ಮಾದಾರ ಚನ್ನಯ್ಯ ಗುರುಪೀಠದ ಹಿಂಭಾಗದಲ್ಲಿ 60 ಎಕರೆಗೂ ಹೆಚ್ಚು ಜಾಗದಲ್ಲಿ ಕಾರ್ಯಕ್ರಮಕ್ಕೆ ಕ್ಷಣಗಣನೆ ಆರಂಭವಾಗಿದೆ. ಇಡೀ ಕಾರ್ಯಕ್ರಮದ ಉಸ್ತುವಾರಿಯನ್ನು ಶಾಸಕ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ವಹಿಸಿಕೊಂಡಿದ್ದಾರೆ.

ತಂದೆಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಂಸದ ಬಿ.ವೈ.ರಾಘವೇಂದ್ರ ಅವರು ಟೊಂಕಕಟ್ಟಿ ನಿಂತಿದ್ದಾರೆ. ಮಧ್ಯಾಹ್ನ 12 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ↘ 13

1 ಲಕ್ಷ ಕುರ್ಚಿ ಸಮಾವೇಶದ ಪ್ರಧಾನ ವೇದಿಕೆ ಮುಂದಿರುವ ಆಸನ	**10 ಲಕ್ಷ ಜನ** ರಾಜ್ಯದ ವಿವಿಧೆಡೆಯಿಂದ ಕಾರ್ಯಕ್ರಮಕ್ಕೆ ಬರುವವರ ಸಂಖ್ಯೆ	**250** ಬಾಣಸಿಗರು ಊಟದ ತಯಾರಿಗೆ
200 ಶ್ರೀಗಳು ಸಮಾವೇಶದಲ್ಲಿ ಪಾಲ್ಗೊಳ್ಳಲಿರುವ ಮಠಾಧೀಶರು	**112 ಅಡಿ** ಅಭಿಮಾನೋತ್ಸವ ಕಾರ್ಯಕ್ರಮದ ವೇದಿಕೆಯ ಉದ್ದ	**2500** ಪೊಲೀಸರು ಭದ್ರತೆಗಾಗಿ ನಿಯೋಜನೆ

ಬಿಎಸ್‌ವೈ ಕಾರು ಪ್ರದರ್ಶನ

ದಶಕಗಳ ಹಿಂದೆ ಪಕ್ಷ ಕಟ್ಟುವಾಗ ಬಿಎಸ್‌ವೈ ಅವರು ರಾಜ್ಯ ಪ್ರವಾಸಕ್ಕೆ ಬಳಸುತ್ತಿದ್ದ ಅಂಬಾಸಿಡರ್ ಕಾರನ್ನು ಕಾರ್ಯಕ್ರಮ ನಡೆಸುವ ಸ್ಥಳದಲ್ಲಿ ಪ್ರದರ್ಶಿಸಲಾಗಿದೆ.

24 ತಮಟೆಗಳ ಬೃಹತ್ ಹಾರ

ಶುಕ್ರವಾರ ಚಿತ್ರದುರ್ಗದಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಪುರಪ್ರವೇಶ ವೇಳೆ ಮಾದಿಗ ಮುಖಂಡರು 40 ಅಡಿ ಎತ್ತರದ 24 ತಮಟೆಗಳಿದ್ದ ಹಾರ ಹಾಕಿದರು. ಮಹಿಳೆಯರು ಒನಕೆ ಹಿಡಿದು ಸ್ವಾಗತ ಕೋರಿದರು.

ಮೇ 15ರ ಒಳಗೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಸಂಭವ

ನವದೆಹಲಿ: ಕಚ್ಚಾತೈಲ ಬೆಲೆ ಗಗನಕ್ಕೇರಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಮೇ15ರೊಳಗೆ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಮಾಡಲಿದೆ ಎನ್ನಲಾಗಿದೆ. ಯುದ್ಧಾರಂಭದ ವೇಳೆ ಬ್ಯಾರೆಲ್‌ಗೆ 70 ಡಾಲರ್ ಇದ್ದ ಕಚ್ಚಾತೈಲ ಬೆಲೆ ಈಗ 110 ಡಾಲರ್‌ದಾಟಿದೆ. ವಿವರ ↘ 12

ಶೃಂಗೇರಿ ಅಂಚೆ ಮರುಮತ ಎಣಿಕೆ: ಕಾಂಗ್ರೆಸ್ ಸುಪ್ರೀಂಗೆ

ನವದೆಹಲಿ: ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತ ಮರು ಎಣಿಕೆ ಫಲಿತಾಂಶದ ವಿರುದ್ಧ ಇದೀಗ ಟಿ.ಡಿ.ರಾಜೇಗೌಡ ಸುಪ್ರೀಂ ಕೋರ್ಟ್ ಮೋರೆ ಹೋಗಿದ್ದಾರೆ. ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ವಿಚಾರಣೆ ಬರುವ ಸಾಧ್ಯತೆ ಇದೆ. ವಿವರ ↘ 8

ಪುದುಚೇರಿ ಸಿಎಂ ಆಗಿ ರಂಗಸ್ವಾಮಿ 13ಕ್ಕೆ ಪ್ರಮಾಣ

ಪುದುಚೇರಿ: ಪುದುಚೇರಿಯಲ್ಲಿ ಎನ್‌ಡಿಎ ಕೂಟದ ಎಐಎನ್‌ಆರ್‌ಸಿ ಪಕ್ಷದ ನಾಯಕ ರಂಗಸಾಮಿ ಶಾಸಕಾಂಗ ಪಕ್ಷದ ನಾಯಕನಾಗಿ ಪುನರಾಯ್ಕೆ ಆಗಿದ್ದಾರೆ. ಮೇ13ರಂದು ರಂಗಸಾಮಿ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸುವ ಸಾಧ್ಯತೆಯಿದೆ. ವಿವರ ↘ 11

ತೆಲಂಗಾಣ ಶಾಲೆಗಾಗಿ 800 ವರ್ಷ ಹಳೆಯ ಶಿವ ದೇಗುಲ ಧ್ವಂಸ

ವಾರಂಗಲ್: ಸರ್ಕಾರಿ ಶಾಲೆಯ ನಿರ್ಮಾಣಕ್ಕಾಗಿ ಕಾಕತಿಯ ಕಾಲದ 800 ವರ್ಷ ಪುರಾತನ ಶಿವನ ದೇಗುಲವೊಂದನ್ನು ಇಲ್ಲಿನ ಖಾನಾಪುರ ಮಂಡಲದ ಅಶೋಕ ನಗರದಲ್ಲಿ ಧ್ವಂಸಗೊಳಿಸಲಾಗಿದೆ. ಇದಕ್ಕೆ ಸ್ಥಳೀಯರ ಭಾರೀ ಆಕ್ರೋಶ. ವಿವರ ↘ 11

ಮಧ್ಯಪ್ರಾಚ್ಯ ಬಿಕ್ಕಟ್ಟು: ತೈಲ ಕಂಪನಿಗಳಿಗೆ 30000 ಕೋಟಿ ನಷ್ಟ

ನವದೆಹಲಿ: ಮಧ್ಯಪ್ರಾಚ್ಯ ಸಂಘರ್ಷದ ಬಳಿಕ ಕಚ್ಚಾತೈಲದ ಬೆಲೆ ಏರಿಕೆಯಾದರೂ ಸ್ಥಳೀಯವಾಗಿ ದರ ಏರಿಸದ ಹಿನ್ನೆಲೆಯಲ್ಲಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಮಾರ್ಚ್ ಬಳಿಕ 30000 ಕೋಟಿ ರು.ನಷ್ಟು ಭಾರೀ ನಷ್ಟ. ವಿವರ ↘ 11

ವಿಜಯಕ್ಕೆ 118 ಸಮಸ್ಯೆ!

4 ಶಾಸಕರ ಬೆಂಬಲದೊಂದಿಗೆ ರಾಜ್ಯಪಾಲರನ್ನು ಭೇಟಿಯಾದ ದಳಪತಿ
ಇನ್ನೂ 2 ಸ್ಥಾನ ಎಲ್ಲಿ ಎಂದ ಗೌರ್ನರ್ | ಪ್ರಮಾಣ ಬೋಧಿಸಲು ನಕಾರ
ಇಂದು ಶಪಥಗ್ರಹಣಕ್ಕೆ ಸಜ್ಜಾಗಿದ್ದ ವಿಜಯ್ ಬೆಂಬಲಿಗರಿಗೆ ತೀವ್ರ ನಿರಾಸೆ

• **ಪಿಟಿಐ** ಚೆನ್ನೈ

ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ ಹಾಗೂ ನಟ ವಿಜಯ್‌ಗೆ ತಮಿಳುನಾಡಿನ ಮುಖ್ಯಮಂತ್ರಿ ಆಗುವ ಯೋಗ ಇನ್ನೂ ತೂಗುಯ್ಯಾಲೆಯಲ್ಲಿದೆ. ಬಹುಮತಕ್ಕೆ ಬೇಕಾದ 118 ಶಾಸಕರ ಪಟ್ಟಿಯನ್ನು ಸಲ್ಲಿಸಲು ಪುನಃ ವಿಜಯ್ ವಿಫಲರಾಗಿದ್ದಾರೆ ಎನ್ನಲಾಗಿದೆ. ಹೀಗಾಗಿ ಶನಿವಾರ ಅವರು ಪ್ರಮಾಣ ವಚನ ಸ್ವೀಕರಿಸುವುದು ಅನುಮಾನವಾಗಿದೆ.

ಶುಕ್ರವಾರ ಸಂಜೆ ವಿಜಯ್ 3ನೇ ಬಾರಿಗೆ ರಾಜ್ಯಪಾಲ ರಾಜೇಂದ್ರ ಅರ್ಲೇಕರ್‌ರನ್ನು ಭೇಟಿ ಮಾಡಿ ಶಾಸಕರ ಬೆಂಬಲ ಪತ್ರ ಸಲ್ಲಿಸಿದರು. ಬಳಿಕ ಶನಿವಾರ ಬೆಳಿಗ್ಗೆ 11 ಗಂಟೆಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವ ನಿರೀಕ್ಷೆ ಇತ್ತು. ಆದರೆ ನಾಟಕೀಯ ವಿದ್ಯಮಾನದಲ್ಲಿ, ವಿಜಯ್ ಅವರು ಅಗತ್ಯ ಬಹುಮತಕ್ಕೆ ಬೇಕಾದ 118ರ ಬದಲು ಕೇವಲ 116 ಶಾಸಕರ ಬೆಂಬಲ ಪತ್ರ ಸಲ್ಲಿಸಿದ್ದು, ಇನ್ನೂ 2 ಸ್ಥಾನಗಳ ಕೊರತೆ ಎದುರಿಸುತ್ತಿದ್ದಾರೆ ಎಂದು ಗೊತ್ತಾಗಿದೆ. ಹೀಗಾಗಿ ಅವರನ್ನು ಸರ್ಕಾರ ರಚನೆಗೆ ಆಹ್ವಾನಿಸಲು ರಾಜ್ಯಪಾಲರು ನಿರಾಕರಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಡಿಸಿಎಂ ಸ್ಥಾನ ಕೋರಿದ ವಿಸಿಕೆ: 234 ಸ್ಥಾನಗಳ ಪೈಕಿ 108 ಸ್ಥಾನ ಗೆದ್ದಿರುವ ಟಿವಿಕೆಗೆ ಬಹುಮತಕ್ಕೆ 118 ಸ್ಥಾನ ಬೇಕಿತ್ತು. ಕಾಂಗ್ರೆಸ್‌ನ 5 ಶಾಸಕರು 3 ದಿನ ಹಿಂದೆ ಟಿವಿಕೆ ಬೆಂಬಲಿಸಿದ್ದರು. ↘ 13



ಶುಕ್ರವಾರ ರಾಜ್ಯಪಾಲ ಅರ್ಲೇಕರ್ ಅವರನ್ನು ಭೇಟಿ ಮಾಡಿ ಸರ್ಕಾರ ರಚನೆ ಹಕ್ಕು ಮಂಡಿಸಿದ ಟಿವಿಕೆ ಪಕ್ಷದ ಅಧ್ಯಕ್ಷ ವಿಜಯ್

ರಾಜ್ಯಪಾಲರ ವಿರುದ್ಧ ಸುಪ್ರೀಂಗೆ ವಿಜಯ್

ವಿಜಯ್‌ಗೆ ರಾಜ್ಯಪಾಲರು ಸರ್ಕಾರ ರಚನೆಗೆ ಆಹ್ವಾನ ನೀಡಿಲ್ಲ ಎಂದು ಟಿವಿಕೆ ನಾಯಕರೊಬ್ಬರು ಸುಪ್ರೀಂ ಕೋರ್ಟ್‌ಗೂ ಅರ್ಜಿ ಸಲ್ಲಿಸಿದ್ದಾರೆ.

ಟ್ರಬಲ್ ಶೂಟರ್ ಡಿಕೆಶಿ ಎಂಟ್ರಿ: 5 ಕಾಂಗ್ರೆಸ್ಸಿಗರು ಬೆಂಗ್ಳೂರಿಗೆ ಶಿಫ್ಟ್!



ಚೆನ್ನೈ: ತಮಿಳುನಾಡಿನಲ್ಲಿ ಹೊಸ ಸರ್ಕಾರ ರಚನೆ ಕಗ್ಗಂಟಾಗಿರುವಾಗಲೇ 'ಟ್ರಬಲ್ ಶೂಟರ್' ಖ್ಯಾತಿಯ ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರವೇಶವಾಗಿದೆ. ವಿಜಯ್ ಅವರ ಟಿವಿಕೆಗೆ ಬೆಂಬಲ ಪ್ರಕಟಿಸಿರುವ ಕಾಂಗ್ರೆಸ್ಸಿನ ಎಲ್ಲ 5 ಶಾಸಕರನ್ನು ಡಿಕೆಶಿ ಬೆಂಗಳೂರಿಗೆ ಕರೆಸಿಕೊಂಡಿದ್ದಾರೆ. ಕುದುರೆ ವ್ಯಾಪಾರ ತಪ್ಪಿಸಲು ಅವರನ್ನು ಕರ್ನಾಟಕ ಡಿಸಿಎಂ ಡಿ.ಕೆ. ಶಿವಕುಮಾರ್ ಬೆಂಗಳೂರಿಗೆ ಕರೆಸಿಕೊಂಡು ರೆಸಾರ್ಟ್ ಒಂದರಲ್ಲಿ ಆಶ್ರಯ ಒದಗಿಸಿದ್ದಾರೆ. ಈ ಹಿಂದೆ ಮಹಾರಾಷ್ಟ್ರ ಸರ್ಕಾರ ರಚನೆ, ಗುಜರಾತ್, ಒಡಿಶಾ ರಾಜ್ಯಸಭೆ ಚುನಾವಣೆ ಸಂದರ್ಭದಲ್ಲೂ ಡಿಕೆಶಿ ಟ್ರಬಲ್ ಶೂಟರ್ ಪಾತ್ರ ನಿರ್ವಹಿಸಿದ್ದರು.

ರಾಜ್ಯಪಾಲರು ಯಾಕೆ ಒಪ್ಪುತ್ತಿಲ್ಲ?

ಚೆನ್ನೈ: ಏಕೈಕ ದೊಡ್ಡ ಪಕ್ಷಕ್ಕೆ ರಾಜ್ಯಪಾಲರು ಸರ್ಕಾರ ರಚನೆಗೆ ಆಹ್ವಾನಿಸಬೇಕು ಎಂಬ ನಿಯಮ ಇದೆ. ಇಲ್ಲಿ ವಿಜಯ್ ಮೊದಲು ಸರ್ಕಾರ ರಚನೆಗೆ ಹಕ್ಕು ಮಂಡಿಸುವಾಗ ತಮ್ಮದು 'ಏಕೈಕ ದೊಡ್ಡ ಪಕ್ಷ' ಎಂದು ಹೇಳಿ 108 ಶಾಸಕರ ಬೆಂಬಲ ಪತ್ರ ಕೊಟ್ಟಿದ್ದರೆ ಸಾಕಿತ್ತು. ಅದನ್ನು ರಾಜ್ಯಪಾಲರು ಮನ್ನಿಸುವ ಸಾಧ್ಯತೆ ಇತ್ತು ಎಂದು ತಜ್ಞರು ಹೇಳಿದ್ದಾರೆ. 'ಆದರೆ ಅವರು ಕಾಂಗ್ರೆಸ್‌ನ 5 ಶಾಸಕರ ಬೆಂಬಲ ಸೇರಿ 112 ಶಾಸಕರ ಬೆಂಬಲ ಪತ್ರ ನೀಡಿದರು. ಇದು 'ಮೈತ್ರಿ ಸರ್ಕಾರ ರಚನೆಯ ಹಕ್ಕು ಮಂಡನೆ' ಎಂದು ಗೌರ್ನರ್ ಭಾವಿಸಿದರು. ಹೀಗಾಗಿ 'ಮೈತ್ರಿ ಸರ್ಕಾರ ರಚನೆಗೆ 118 ಶಾಸಕರ ಬೆಂಬಲ ಬೇಕು' ಎಂದು ವಿಜಯ್‌ರನ್ನು ವಾಪಸು ಕಳಿಸಿದರು' ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಕಾಂಗ್ರೆಸ್ಸಿಂದ ನಮ್ಮನ್ನು ದೂರದಲ್ಲಿ ಕೂರಿಸಿ: ಸಂಸತ್‌ಗೆ ಡಿಎಂಕೆ!

ಸ್ಪೀಕರ್‌ಗೆ ಕನಿಮೋಳಿಯಿಂದ ಪತ್ರ
ಇಂಡಿ ಕೂಟಕ್ಕೂ ವಿದಾಯ ಸಂಭವ

ಚೆನ್ನೈ: ಟಿವಿಕೆ ಜತೆ ಕಾಂಗ್ರೆಸ್ ಪಕ್ಷದ ಮೈತ್ರಿ ಬಹುಕಾಲದ ಮಿತ್ರ ಡಿಎಂಕೆಯನ್ನು ಸಿಟ್ಟಿಗೆಬ್ಬಿಸಿದ್ದು ರಾಷ್ಟ್ರದಲ್ಲೇ ಮೈತ್ರಿ ಕಡಿತಕ್ಕೆ ಮುಂದಾದಂತಿದೆ. ಇದರ ಮೊದಲ ಸಂಕೇತವಾಗಿ ಗುರುವಾರ ನಡೆದ ಡಿಎಂಕೆ ಸಭೆಯಲ್ಲಿ ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಗಿದೆ. ಇನ್ನೊಂದು ಕಡೆ, 'ಲೋಕಸಭೆಯಲ್ಲಿ ಕಾಂಗ್ರೆಸ್ ಜತೆ ಇನ್ನು ನಾವು ಕೂರಲ್ಲ. ಪ್ರತ್ಯೇಕ ಆಸನ ವ್ಯವಸ್ಥೆ ಮಾಡಿ' ಎಂದು ಸದನದ ಸ್ಪೀಕರ್‌ಗೆ ಡಿಎಂಕೆ ಸಂಸದೆ ಕನಿಮೋಳಿ ಪತ್ರ ಬರೆದಿದ್ದಾರೆ. ಕಾಂಗ್ರೆಸ್ ಜತೆ ಡಿಎಂಕೆ ಮೈತ್ರಿ ಕಡಿದುಕೊಂಡರೆ ವಿಪಕ್ಷಗಳ ಇಂಡಿಯಾ ಕೂಟದಿಂದ ಕೂಡ ಅದು ಹೊರಬಂದಂತೆ ಎನ್ನಲಾಗುತ್ತಿದೆ.



ಸ್ಟಾಲಿನ್‌ಗೆ ಬೇಸರ: ಕಾಂಗ್ರೆಸ್ ನಡೆ ಬಗ್ಗೆ ಮಾತನಾಡಿದ ಡಿಎಂಕೆ ನಾಯಕರೊಬ್ಬರು, ಪಕ್ಷದ ನಾಯಕ ಎಂ.ಕೆ. ಸ್ಟಾಲಿನ್ ತೀವ್ರ ಬೇಸರಗೊಂಡಿದ್ದಾರೆ ಎಂದಿದ್ದಾರೆ. 'ಕೇಂದ್ರ ಸಚಿವ ರವನೀತ್ ಸಿಂಗ್ ಬಿಟ್ಟು, ಕಾಂಗ್ರೆಸ್‌ನಿಂದ ಬಿಜೆಪಿಗೆ ಸೇರ್ಪಡೆಗೊಂಡಿದ್ದಕ್ಕಾಗಿ ಅವರನ್ನು ನೀವು (ರಾಹುಲ್ ಗಾಂಧಿ) ದೇಶದ್ರೋಹಿ ಎಂದು ಕರೆದಿದ್ದೀರಿ. ↘ 13

ಡಿಎಂಕೆಗೇಕೆ ಸಿಟ್ಟು?

- ಹಲವು ವರ್ಷಗಳಿಂದ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಕಾಂಗ್ರೆಸ್ ಜತೆ ಮೈತ್ರಿ ಹೊಂದಿದ್ದ ಡಿಎಂಕೆ
- ಆದರೆ ತ.ನಾಡು ಚುನಾವಣೆ ಬಳಿಕ ವಿಜಯ್‌ರ ಟಿವಿಕೆ ಪಕ್ಷ ಬೆಂಬಲಿಸಿದ್ದ ಕಾಂಗ್ರೆಸ್
- ಕಾಂಗ್ರೆಸ್‌ನ ಈ ನಡೆ ಬಗ್ಗೆ ಡಿಎಂಕೆ ಮೈತ್ರಿಕೂಟದ ಸಭೆಯಲ್ಲಿ ಸಿಎಂ ಸ್ಟಾಲಿನ್ ಕಿಡಿ
- ಕಷ್ಟದ ಸಮಯದಲ್ಲಿ ಹಲವು ಬಾರಿ ಬೆಂಬಲಿಸಿದ್ದರೂ ಇದೀಗ ಕಾಂಗ್ರೆಸ್ ಕೈಕೊಟ್ಟ ಆರೋಪ
- ಹೀಗಾಗಿ ಲೋಕಸಭೇಲಿ ಪ್ರತ್ಯೇಕ ಸ್ಥಾನಕ್ಕಾಗಿ ಸ್ಪೀಕರ್ ಡಿಎಂಕೆ ನಾಯಕರ ಮನವಿ
- ಶೀಘ್ರವೇ ಕಾಂಗ್ರೆಸ್ ನೇತೃತ್ವದ ಇಂಡಿಯಾ ಕೂಟಕ್ಕೂ ಡಿಎಂಕೆ ವಿದಾಯ ಹೇಳುವ ಸಂಭವ

ಐಪಿಎಲ್ ಫೈನಲ್ ಸ್ಥಳಾಂತರ ಹಿಂದಿದೆ ರಾಜಕೀಯ: ಡಿಕೆಶಿ

ಉಚಿತ ಟಿಕೆಟ್ ಕಾರಣ ಶಿಫ್ಟ್ ವಾದ ಬೋಗಸ್
ಗುಜರಾತ್ ಲಾಭಕ್ಕಾಗಿ ಫೈನಲ್ ಸ್ಥಳ ಬದಲು

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ಐಪಿಎಲ್ ಫೈನಲ್ ಪಂದ್ಯ ಅಹಮದಾಬಾದ್‌ಗೆ ಸ್ಥಳಾಂತರಿಸಿರುವ ವಿಚಾರದಲ್ಲಿ ಬಿಸಿಸಿಐ ಸುಳ್ಳು ಹೇಳುತ್ತಿದೆ. ರಾಜಕೀಯ ಪ್ರಭಾವ ಬಳಸಿ ಫೈನಲ್ ಪಂದ್ಯ ಸ್ಥಳಾಂತರಿಸಿದ್ದು ಗುಜರಾತ್‌ನ ಲಾಭಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕಿಡಿಕಾರಿದ್ದಾರೆ. ಜೊತೆಗೆ ಬೆಂಗಳೂರಿನಲ್ಲಿ ಐಪಿಎಲ್ ಪಂದ್ಯ ವೀಕ್ಷಿಸಲು ಶಾಸಕರಿಗೆ ತಲಾ 2 ಟಿಕೆಟ್ ನೀಡುತ್ತಿದ್ದರು ಎಂದು ಹೇಳಿದ್ದಾರೆ. ವಿವರ ↘ 8

ರಾಜ್ಯ ಸರ್ಕಾರದಿಂದ 1650 ಐಪಿಎಲ್ ಟಿಕೆಟ್‌ಗೆ ಬೇಡಿಕೆ?

ಉಳಿದ ಟಿಕೆಟ್ ರಿಯಾಯಿತಿ ದರಕ್ಕೆ ಕೋರಿಕೆ
10000 ಎಕ್ಸ್ಟ್ರಾ ಟಿಕೆಟ್ ಬಗ್ಗೆ ಬಿಸಿಸಿಐ ಸ್ಪಷ್ಟನೆ



ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ, ಬಿಸಿಸಿಐ ಬಳಿ ಬೇಡಿಕೆ ಇಟ್ಟಿದ್ದ ಐಪಿಎಲ್ ಫೈನಲ್‌ನ 10000 ಹೆಚ್ಚುವರಿ ಟಿಕೆಟ್ ಪೈಕಿ ಶಾಸಕರು, ಸರ್ಕಾರ, ತಜ್ಞರ ಸಮಿತಿಗೆ ಕೊಡಬೇಕಿದ್ದದ್ದು 1650 ಉಚಿತ ಟಿಕೆಟ್. ಉಳಿದ ಟಿಕೆಟ್‌ಗಳನ್ನು ಕ್ಲಬ್‌ಗಳಿಗೆ, ಅವರ ಕುಟುಂಬ ಸದಸ್ಯರಿಗೆ ನೀಡಲು ರಿಯಾಯಿತಿ ದರದಲ್ಲಿ ನೀಡುವಂತೆ ರಾಜ್ಯ ಕ್ರಿಕೆಟ್ ಸಂಸ್ಥೆ ಮನವಿ ಮಾಡಿತ್ತು ಎಂದು ಬಿಸಿಸಿಐ ಮೂಲಗಳು ತಿಳಿಸಿದ್ದಾಗಿ ಪಿಟಿಐ ಸುದ್ದಿಸಂಸ್ಥೆ ವರದಿ ಮಾಡಿದೆ. ವಿವರ ↘ 8

ಪ.ಬಂಗಾಳಕ್ಕೆ ಸುವೇಂದು ಮೊದಲ ಬಿಜೆಪಿ ಸಿಎಂ

ದೀದಿ ಸೋಲಿಸಿದವಗೆ ಗಾದಿ: ಇಂದು ಪ್ರಮಾಣ
ಮೋದಿ, ಶಾ ಭಾಗಿ | ಮಹಿಳೆ ಸೇರಿ 2 ಡಿಸಿಎಂ?



ಕೋಲ್ಕತಾ: ಪಶ್ಚಿಮ ಬಂಗಾಳ ಬಿಜೆಪಿ ಶಾಸಕಾಂಗ ಪಕ್ಷದ ನಾಯಕನಾಗಿ ಸುವೇಂದು ಅಧಿಕಾರಿ ಅವರನ್ನು ಶುಕ್ರವಾರ ಆಯ್ಕೆ ಮಾಡಲಾಗಿದೆ. ಅವರು ಶನಿವಾರ ಬೆಳಗ್ಗೆ 11 ಗಂಟೆಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಬ್ರಿಗೇಡ್ ಪರೇಡ್ ಮೈದಾನದಲ್ಲಿ ನಡೆಯುವ ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಇತರರು ಭಾಗಿಯಾಗಲಿದ್ದಾರೆ. ವಿವರ ↘ 11


0 | ಎಸ್‌ಐಆರ್ ವಿರೋಧಿಸಿ ಸಂಪುಟದಲ್ಲಿ ನಿರ್ಣಯ ಕೈಗೊಳ್ಳಲು ಸಂಘಟನೆಗಳ ಪ್ರತಿನಿಧಿಗಳಿಂದ ಆಗ್ರಹ

ಬಂಗಾಳದಲ್ಲಿ SIRಗೆ ಸೋತ ಮೇಡಂ: ರಾಜ್ಯದಲ್ಲಿ ಕೈ ಅಲರ್ಟ್

ವಿವಿಧ ಸಂಘಟನೆಗಳು, ಸಚಿವರ ಜತೆ ಸರ್ಕಾರದ ಮಹತ್ವದ ಸಭೆ | ಸೂಕ್ತ ಮುನ್ನೆಚ್ಚರಿಕೆ ಕೈಗೊಳ್ಳುವ ಕುರಿತು ಚರ್ಚೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಚುನಾವಣಾ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆಯಿಂದ (ಎಸ್‌ಐಆರ್) ತಾವು ಸೋಲು ಕಾಣಬೇಕಾಯಿತು ಎಂದು ತೃಣಮೂಲ ಕಾಂಗ್ರೆಸ್ ಅಧಿನಾಯಕಿ ಮಮತಾ ಬ್ಯಾನರ್ಜಿ ಹೇಳುತ್ತಿರುವಾಗಲೇ, ಎಸ್‌ಐಆರ್‌ನಿಂದ ಉಂಟಾಗಿರುವ ಅನಾಹುತಗಳ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಶುಕ್ರವಾರ ಸಭೆ ನಡೆದಿದೆ. ರಾಜ್ಯದಲ್ಲಿ ಸೂಕ್ತ ಮುನ್ನೆಚ್ಚರಿಕೆ ವಹಿಸಿ ಅರ್ಹರ ಮತದಾನದ ಹಕ್ಕು ಸಂರಕ್ಷಿಸಬೇಕು ಎಂದು ಚರ್ಚಿಸಲಾಗಿದೆ.



ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿ ಪ್ರಮುಖ ಸಚಿವರು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಎಸ್‌ಐಆರ್ ಜಾರಿಗೆ ಈಗಾಗಲೇ ಮ್ಯಾಪಿಂಗ್ ಶುರುವಾಗಿದ್ದು, ಇದರಲ್ಲಿ ಸಾಕಷ್ಟು ಲೋಪದೋಷಗಳಿವೆ. ಆದರೂ ಈ ಬಗ್ಗೆ ಸರ್ಕಾರ ಇನ್ನೂ ವಿರೋಧ ವ್ಯಕ್ತಪಡಿಸಿಲ್ಲ. ಪಶ್ಚಿಮ ಬಂಗಾಳ ಸೇರಿ ಎಸ್‌ಐಆರ್ ನಡೆದಿರುವ 10 ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶದಲ್ಲಿ 7 ಕೋಟಿ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಹೀಗಾಗಿ ರಾಜ್ಯದಲ್ಲಿ ಎಸ್‌ಐಆರ್‌ಗೆ ತೀವ್ರ ವಿರೋಧ ವ್ಯಕ್ತಪಡಿಸಿ ಸಂಪುಟದಲ್ಲಿ ನಿರ್ಣಯ ಕೈಗೊಳ್ಳುವಂತೆ ಮುಖ್ಯಮಂತ್ರಿ ಅವರನ್ನು ವಿವಿಧ ಸಂಘಟನೆಗಳ ಪ್ರತಿನಿಧಿಗಳು ಒತ್ತಾಯಿಸಿದರು.

ಕೇಂದ್ರ ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್ ಬಗ್ಗೆ ಎಲ್ಲಾ ರಾಜ್ಯಗಳಲ್ಲೂ ಆಕ್ಷೇಪ ವ್ಯಕ್ತವಾಗಿದೆ. ಪಶ್ಚಿಮ ಬಂಗಾಳದಲ್ಲಿ 90 ಲಕ್ಷ ಮತದಾರರನ್ನು ಪಟ್ಟಿಯಿಂದ ಕಿತ್ತು ಹಾಕಿದ್ದು, 27 ಲಕ್ಷ ಮತದಾರರ ಪರಿಶೀಲನಾ ಅರ್ಜಿ ಬಾಕಿ ಇರುವಾಗಲೇ ಎಲೆಕ್ಷನ್ ಮುಗಿದು ಹೋಗಿದೆ. ↘ 13

- ಪಶ್ಚಿಮ ಬಂಗಾಳದಲ್ಲಿ ಭಾರೀ ವಿವಾದಕ್ಕೆ ಕಾರಣವಾಗಿದ್ದ ಮತಪಟ್ಟಿ ಪರಿಷ್ಕರಣೆ ಪ್ರಕ್ರಿಯೆ
- ರಾಜ್ಯದಲ್ಲೂ ಪರಿಷ್ಕರಣೆಗೆ ಪೂರ್ವ ಪ್ರಕ್ರಿಯೆಗಳಿಗೆ ಚುನಾವಣಾ ಆಯೋಗದ ಸಿದ್ಧತೆ ಶುರು
- ಈ ಹಿನ್ನೆಲೆಯಲ್ಲಿ ಸಿಎಂ, ಡಿಸಿಎಂ ಜೊತೆಗೆ ವಿವಿಧ ಸಂಘಟನೆಗಳಿಂದ ಸಮಾಲೋಚನೆ
- ರಾಜ್ಯದಲ್ಲಿ ಪರಿಷ್ಕರಣೆ ತಡೆ ಇಲ್ಲವೇ ಪ್ರಕ್ರಿಯೆ ಮೇಲೆ ತೀವ್ರ ನಿಗಾಕ್ಕೆ ಸರ್ಕಾರಕ್ಕೆ ಮನವಿ
- ಶಾಸಕರ ಜೊತೆಗೆ ಚರ್ಚಿಸಿ ಮತ್ತೊಮ್ಮೆ ನಿಮ್ಮೊಂದಿಗೆ ಸಮಾಲೋಚಿಸುವೆ: ಸಭೆಗೆ ಸಿಎಂ

ಪಶ್ಚಿಮ ಬಂಗಾಳದಲ್ಲಿ ಏನಾಗಿತ್ತು?

- ಕೆಲವು ತಿಂಗಳ ಹಿಂದೆ ಪಶ್ಚಿಮ ಬಂಗಾಳದಲ್ಲಿ ಕೇಂದ್ರ ಚುನಾವಣಾ ಆಯೋಗ ಸಮಗ್ರ ಮತಪಟ್ಟಿ ಪರಿಷ್ಕರಣೆ ಮಾಡಿತ್ತು
- ಆಗ ಅಕ್ರಮ ಬಾಂಗ್ಲಾ ವಲಸಿಗರು ಸೇರಿ 90 ಲಕ್ಷ 'ಅಕ್ರಮ' ಮತದಾರರ ಹೆಸರನ್ನು ಡಿಲೀಟ್ ಮಾಡಿತ್ತು
- ಇವರೆಲ್ಲ ಟಿಎಂಸಿ ಬೆಂಬಲಿಗರು, ಬೇಕುಬೇಕೆಂದೇ ಇವರ ಹೆಸರು ಡಿಲೀಟ್ ಎಂದು ಮಮತಾ ಆರೋಪ
- ಆದರೆ ಇವರಲ್ಲಿ ಅಕ್ರಮ ಬಾಂಗ್ಲಾ ವಲಸಿಗರೇ ಹೆಚ್ಚು ಎಂದು ಕೇಂದ್ರ ಸರ್ಕಾರ, ಬಿಜೆಪಿಯ ಸಮರ್ಥನೆ
- ಪರಿಷ್ಕರಣೆಯಿಂದ ಮತದಾರರ ಮೂಲಭೂತ ಹಕ್ಕಿಗೆ ಚ್ಯುತಿ ಎಂದು ಮಮತಾ ಸುಪ್ರೀಂ ಕೋರ್ಟ್‌ಗೆ
- ಆದರೆ ಮಮತಾ ವಾದ ತಳ್ಳಿಹಾಕಿದ ಸುಪ್ರೀಂ ಕೋರ್ಟ್. ಮತಪಟ್ಟಿ ಪರಿಷ್ಕರಣೆಗೆ ಅನುಮೋದನೆ
- ಈಗ ಬಂಗಾಳದಲ್ಲಿ ದೀದಿಗೆ ಭಾರಿ ಸೋಲು. ಪರಿಷ್ಕರಣೆಯೂ ಸೋಲಿಗೆ ಕಾರಣ ಎಂಬ ಆರೋಪ
- ಹೀಗಾಗಿ ಕರ್ನಾಟಕ ಸೇರಿ ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ವಿವಿಧ ರಾಜ್ಯಗಳಲ್ಲಿ ಎಸ್‌ಐಆರ್‌ಗೆ ವಿರೋಧ

ಜೂ.20ರಿಂದ 24ರೊಳಗೆ ಪಂಚಪಾಲಿಕೆ ಚುನಾವಣೆ?

ಒಂದು ವಾರದಲ್ಲಿ ಎಲೆಕ್ಷನ್ ದಿನ ಘೋಷಣೆ
ಎಲೆಕ್ಷನ್ ಮುಂದೂಡಲಾಗದು: ಸಂಗ್ರೇಶಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸುಪ್ರೀಂಕೋರ್ಟ್ ಸೂಚನೆಯಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಜೂ.20ರಿಂದ 24ರವರೆಗೆ ಚುನಾವಣೆ ನಡೆಸುವುದು ಅನಿವಾರ್ಯ. ಈ ಅವಧಿಯಲ್ಲೇ ಮತದಾನ ನಡೆಯಲಿದೆ ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ತಿಳಿಸಿದರು. ಶುಕ್ರವಾರ ಜಿಬಿಎ ಮುಖ್ಯ ಆಯುಕ್ತ ಸೇರಿದಂತೆ 5 ನಗರಪಾಲಿಕೆಗಳ ಆಯುಕ್ತರು ಹಾಗೂ ಅಧಿಕಾರಿಗಳ ಸಮಾಲೋಚನಾ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಚುನಾವಣಾ ದಿನಾಂಕ ಪ್ರಕಟಣೆ ಮಾತ್ರ ಬಾಕಿ ಇದೆ. ಅದನ್ನು ಒಂದು ವಾರದೊಳಗೆ ನಿಗದಿಪಡಿಸಲಾಗುವುದು. ಜಿಬಿಎ ವತಿಯಿಂದ ಚುನಾವಣೆ ಸ್ವಲ್ಪ ಮುಂದೂಡುವಂತೆ ಮನವಿ ಬಂದಿದ್ದರೂ, ಜೂ.30ರೊಳಗೆ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಸುಪ್ರೀಂ ಕೋರ್ಟ್ ಸ್ಪಷ್ಟ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಅದನ್ನು ಮುಂದೂಡುವ ಅಧಿಕಾರ ಇಲ್ಲ ಎಂದು ಹೇಳಿದರು. ವಿವರ ↘ 4



ಸುಪ್ರೀಂ ಸೂಚನೆ ಇದೆ: ಆಯೋಗ

Kannada Prabha • Daily • Saturday • 09.05.2026 • Volume 60 • Issue 128 • Pages 20+12 • Price ₹7 Bengaluru

ಕನ್ನಡಪ್ರಭ

ನೇರ.ದಿಟ್ಟ.ನಿರಂತರ

ಇಂದು ಅಭಿಮಾನೋತ್ಸವ | ಚಿತ್ರದುರ್ಗಕ್ಕೆ ಮಾಜಿ ಸಿಎಂ ಪ್ರವೇಶ

ಬಿಎಸ್‌ವೈಗೆ ಅದ್ದೂರಿ ಸ್ವಾಗತ

ಪೂರ್ಣಕುಂಭ ಹೊತ್ತು, ಕೈಯಲ್ಲಿ ಒನಕೆ ಹಿಡಿದು ಸ್ತ್ರೀಯರಿಂದ ಸಂಭ್ರಮ
'ಮಿನಿ ದಸರಾ' ಮಾದರಿಯಲ್ಲಿ ಕರುನಾಡಿನ ಜಾನಪದ ನೃತ್ಯಗಳ ವೈಭವ
ಸೇಬು, ತಮಟೆ ಹಾರ ಹಾಕಿ, ಹೂವುಮಳೆ ಸುರಿಸಿ ಬಿಎಸ್‌ವೈ ಮೆರವಣಿಗೆ

• **ಕನ್ನಡಪ್ರಭ ವಾರ್ತೆ** ಚಿತ್ರದುರ್ಗ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ರಾಜಕೀಯ ಜೀವನಕ್ಕೆ ಐವತ್ತು ವರ್ಷ ಸಂದ ಹಿನ್ನೆಲೆಯಲ್ಲಿ ಚಿತ್ರದುರ್ಗದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿರುವ 'ಬಿಎಸ್‌ವೈ ಅಭಿಮಾನೋತ್ಸವ'ದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಯಡಿಯೂರಪ್ಪ ಅವರು ಶುಕ್ರವಾರ ಚಿತ್ರದುರ್ಗಕ್ಕೆ ಆಗಮಿಸಿದಾಗ ಕೋಟೆ ನಾಡಿನ ಜನ ಅದ್ದೂರಿಯಾಗಿ ಸ್ವಾಗತ ಕೋರಿದರು. 'ಮಿನಿ ದಸರಾ' ಮಾದರಿಯಲ್ಲಿ ಮೆರವಣಿಗೆ ಮಾಡಿದ್ದು ವಿಶೇಷವಾಗಿತ್ತು.

ಬಿಎಸ್‌ವೈ ಅದ್ದೂರಿ ಪುರಪ್ರವೇಶ: ಸಂಜೆ ನಾಲ್ಕು ಗಂಟೆಗೆ ಯಡಿಯೂರಪ್ಪ ಚಿತ್ರದುರ್ಗ ಪುರಪ್ರವೇಶ ಮಾಡಬೇಕಿತ್ತು. ಆದರೆ ಬಿಎಸ್‌ವೈ ಆಗಮನ ಆದಾಗ ಸೂರ್ಯ ನಿಧಾನವಾಗಿ ಮೋಡದಿಂದ ಮರೆಯಾಗುತ್ತಿದ್ದ. ಇದೇ ಗೋಧೂಳಿ ಸಮಯದಲ್ಲಿ ನೇರವಾಗಿ ಪುಷ್ಪಾಲಂಕೃತ ವಾಹನ ಏರಿದ ಯಡಿಯೂರಪ್ಪ ಅವರು ನೆರೆದಿದ್ದ ಅಭಿಮಾನಿ ಸಮೂಹದತ್ತ ಕೈ ಬೀಸಿದರು. ರಾಜಕೀಯ ನಾಯಕರು ಹಾಗೂ ರೈತರು ಗಾಳಿಯಲ್ಲಿ ಹಸಿರು ಶಾಲು ಬೀಸಿ ಯಡಿಯೂರಪ್ಪ ಅವರ ರೈತ ಪರ ಹೋರಾಟದ ನೆನಪು ಮಾಡಿದರು. ಸಾವಿರಕ್ಕೂ ಹೆಚ್ಚು ಮಂದಿ ಕೈಯಲ್ಲಿ ನೇಗಿಲು ಎತ್ತಿ ಹಿಡಿದು ಮೆರವಣಿಗೆಗೆ ಒಕ್ಕಲುತನದ ಸ್ಪರ್ಶ ನೀಡಿದರು. ಕ್ರೇನ್ ಸಹಾಯದಿಂದ ಬಿಎಸ್‌ವೈ ಅವರ ಮೇಲೆ ಹೂ ಮಳೆಗರೆಯಲಾಯಿತು.

ಯಡಿಯೂರಪ್ಪ ಅವರು ಪುಷ್ಪಾಲಂಕೃತ ಸಾರೋಟ್‌ನಲ್ಲಿ ಸಾಗಬೇಕಿತ್ತು. ಆದರೆ ಅವರ ಜೊತೆಗೆ ಬಹಳಷ್ಟು ನಾಯಕರು ಸಾಗುವುದು ಕಷ್ಟವೆಂಬ ಕಾರಣಕ್ಕೆ ವಾಹನವೊಂದಕ್ಕೆ ಪುಷ್ಪಾಲಂಕಾರ ಮಾಡಿ ಅದರಲ್ಲಿ ಬಿಎಸ್‌ವೈ ಅವರ ಮೆರಣಿಗೆ ನಡೆಸಲಾಯಿತು. ↘ 13



ಶುಕ್ರವಾರ ಚಿತ್ರದುರ್ಗ ನಗರ ಪ್ರವೇಶಿಸಿದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರಿಗೆ ಅದ್ದೂರಿ ಸ್ವಾಗತ

ಕನ್ನಡಪ್ರಭ
ಶನಿವಾರ 9.05.2026

ಗರಿಷ್ಠ 33°c | ಕನಿಷ್ಠ 22°c

ನಗರದಲ್ಲಿ ಇಂದು **ಪೆಟ್ರೋಲ್-ಡೀಸೆಲ್** ದರ

ಪೆಟ್ರೋಲ್	ಡೀಸೆಲ್
102.92	90.99



ಮಹಿಳಾ ಮೀಸಲಾತಿ ಮಸೂದೆಯನ್ನು ಸಂಸತ್‌ನಲ್ಲಿ ಪುನಃ ಮಂಡಿಸಬೇಕು ಎಂದು ಆಗ್ರಹಿಸಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಕಾರ್ಯಕರ್ತರು ಸ್ವಾತಂತ್ರ್ಯ ಉದ್ಯಾನವನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಪ್ರತಿಭಟನೆ

ಮಹಿಳಾ ಮೀಸಲಾತಿ ಮಸೂದೆಯನ್ನು ಮತ್ತೆ ಮಂಡಿಸಲು ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಹಿಳಾ ಮೀಸಲಾತಿ ಮಸೂದೆ ಸಂಸತ್‌ನಲ್ಲಿ ಪುನಃ ಮಂಡಿಸಬೇಕೆಂದು ಆಗ್ರಹಿಸಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾನೇತೃತ್ವದಲ್ಲಿ ಕಾರ್ಯಕರ್ತರು ಶುಕ್ರವಾರ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾತನಾಡಿದ ಪಕ್ಷದ ರಾಷ್ಟ್ರೀಯ ಕಾರ್ಯಾಧ್ಯಕ್ಷ ಡಾ.ಎಂ.ವೆಂಕಟಸ್ವಾಮಿ, ಮಹಿಳಾ ಮೀಸಲಾತಿ ಮಸೂದೆಗೆ ಸಂಸತ್‌ನಲ್ಲಿ ಸೋಲಾಗಿರುವುದು ದುರ್ದೈವದ ಸಂಗತಿಯಾಗಿದೆ. ಈ ಮಸೂದೆ ಪರವಾಗಿ ಪಕ್ಷದಿಂದ ದೇಶಾದ್ಯಂತ ವಿಶೇಷ ಜಾಗೃತಿ ಅಭಿಯಾನವನ್ನು ನಡೆಸಲಾಗುವುದು. ಮಸೂದೆಯನ್ನು ಸಂಸತ್‌ನಲ್ಲಿ ಮರು ಮಂಡನೆ ಮಾಡಬೇಕು ಎಂದು ರಾಷ್ಟ್ರಪತಿಗಳು ಪ್ರಧಾನಿ ಗಳಿಗೆ ಸೂಚಿಸಬೇಕು ಎಂದು ಮನವಿ ಮಾಡಿದರು. ಮಸೂದೆ ವಿರುದ್ಧ ಮತ ಚಲಾಯಿಸಿರುವ ವಿರೋಧ ಪಕ್ಷಗಳ ಮಹಿಳಾ ವಿರೋಧಿ ಮನಸ್ಥಿತಿ ಜಗಜ್ಜಾಹೀರಾಗಿದೆ. ಮಹಿಳೆಯರ ಪರ ಎಂದು ಹೇಳುವ ಕಾಂಗ್ರೆಸ್ ಪಕ್ಷ ಸಹ ವಿರೋಧ ವ್ಯಕ್ತಪಡಿಸಿದ್ದು ಸರಿಯಲ್ಲ. ಇನ್ನುಳಿದ ಪಕ್ಷಗಳೂ ಆತ್ಮಾವಲೋಕನ ಮಾಡಿಕೊಂಡು ತಮ್ಮ ನಿರ್ಧಾರ ಬದಲಿಸಬೇಕು ಎಂದು ಒತ್ತಾಯಿಸಿದರು.



ಈಜೀಪುರ ಮೇಲ್ಸೇತುವೆ ಅಕ್ಟೋಬರ್‌ಗೆ ಪೂರ್ಣ

ಬೆಂಗಳೂರು: ಈಜೀಪುರ ಮೇಲ್ಸೇತುವೆ ಕಾಮಗಾರಿ ತ್ವರಿತಗತಿಯಲ್ಲಿ ಸಾಗಿದ್ದು ಅಕ್ಟೋಬರ್ ಅಂತ್ಯದೊಳಗೆ ಸಾರ್ವಜನಿಕರಿಗೆ ಮುಕ್ತವಾಗಲಿದೆ.

ಯೋಜನೆ ಮುಖ್ಯ ಎಂಜಿನಿಯರ್ ಡಾ. ರಾಘವೇಂದ್ರ ಪ್ರಸಾದ್ ಶುಕ್ರವಾರ ಕಾಮಗಾರಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ಈಜೀಪುರ-ಕೇಂದ್ರೀಯ ಸದನ ಮೇಲ್ಸೇತುವೆ ಕಾಮಗಾರಿ ಅಂತಿಮ ಹಂತದಲ್ಲಿದ್ದು, ಕಳೆದ ಫೆಬ್ರವರಿಯಲ್ಲಿ ಸೆಂಟ್ ಜಾನ್ಸ್ ಆಸ್ಪತ್ರೆ ಸಮೀಪದಲ್ಲಿದ್ದ ಅತ್ಯಂತ ಜಟಿಲ ವಾದ 'ಪೋರ್ಟಲ್ ಫ್ರೇಮ್' ಯಶಸ್ವಿಯಾಗಿ ನಿವಾರಿ ಸಲಾಗಿದೆ. ಪ್ರಸ್ತುತ ಕಾಮಗಾರಿಗೆ ಮತ್ತಷ್ಟು ವೇಗ ನೀಡಲಾ ಗಿದ್ದು, ಪ್ರಮುಖ ಮೇಲ್ಸೇತುವೆ ಕಾಮ ಗಾರಿ ಅಕ್ಟೋಬರ್ ಅಂತ್ಯದೊಳಗೆ ಪೂರ್ಣಗೊಳಿಸಿದ ಬಳಿಕ ರ್‍ಯಾಂಪ್‌ಗಳು ಹಾಗೂ ಇನ್ನಿತರೆ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗಾಗಿ ಮುಗಿಸಿ, ಈ ವರ್ಷವೇ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದರು. 203ಕೋಟಿ ರು.ವೆಚ್ಚದ 2.38 ಕಿ.ಮೀ. ಉದ್ದದ ಈ ಮೇಲ್ಸೇತುವೆಯು ಸಾರ್ವಜನಿಕರಿಗೆ ಮುಕ್ತವಾದಲ್ಲಿ ಸಂಚಾರ ಸಮಸ್ಯೆ ಇಲ್ಲದೆ ಸಾಗಬಹು ದಾಗಿದೆ. 2017ರಲ್ಲಿ ಸೇತುವೆ ಕಾಮಗಾರಿ ಆರಂಭವಾಗಿತ್ತು.

ಸುದ್ದಿ ಸಿಂಚನ

ಪಾರ್ಕಿಂಗ್ ವಿಚಾರಕ್ಕೆ ಕಾರು ಮಾಲೀಕರಿಂದ ಬೀದಿ ಜಗಳ

ಬೆಂಗಳೂರು: ಪಾರ್ಕಿಂಗ್ ವಿಚಾರವಾಗಿ ಎರಡು ಕಾರುಗಳಲ್ಲಿದ್ದ ಜನರು ಬೀದಿ ಜಗಳ ಮಾಡಿಕೊಂಡಿರುವ ಘಟನೆ ಶೇಷಾದ್ರಿಪುರದ ನೆಹರು ಸರ್ಕಲ್ ಬಳಿ ಶುಕ್ರವಾರ ನಡೆದಿದೆ. ನೆಹರು ಸರ್ಕಲ್‌ನ ಹೋಟೆಲ್‌ಗೆ ತೆರಳುವಾಗ ಕಾರುಗಳ ಪಾರ್ಕಿಂಗ್ ವಿಚಾರವಾಗಿ ಜಗಳವಾಗಿದೆ. ಕೊನೆಗೆ ಅಲ್ಲಿದ್ದ ಸೆಕ್ಯುರಿಟಿ ಗಾರ್ಡ್‌ಗಳು ಮಧ್ಯಪ್ರವೇಶಿಸಿ ಜಗಳ ಬಿಡಿಸಿದ್ದಾರೆ. ತನಗೆ ನಿಂದಿಸಿದರು ಎಂದು ಕೆರಳಿ ಮತ್ತೊಂದು ಕಾರಿನಲ್ಲಿದ್ದವರ ಮೇಲೆ ಬೆಂಜ್ ಕಾರಿನ ಮಾಲಿಕ ದರ್ಪ ತೋರಿದ್ದಾನೆ ಎಂದು ಆರೋಪಿಸಲಾಗಿದೆ. ಈ ಸಂಬಂಧ ಪೊಲೀಸರಿಗೆ ದೂರು ಕೊಡುವುದಾಗಿ ಹೇಳಿ ಕಾರಿನಲ್ಲಿದ್ದವರು ತೆರಳಿದ್ದಾರೆ. ಆದರೆ ಯಾವುದೇ ದೂರು ಬಂದಿಲ್ಲ ಎಂದು ಶೇಷಾದ್ರಿಪುರ ಪೊಲೀಸರು ತಿಳಿಸಿದ್ದಾರೆ.

ಕುಂಬ್ಳೆ ರಸ್ತೆ ಬಳಿ ಹಿಟ್ ಅಂಡ್ ರನ್‌ಗೆ ವ್ಯಕ್ತಿ ಬಲಿ

ಬೆಂಗಳೂರು: ರಸ್ತೆಯಲ್ಲಿ ಹೋಗುತ್ತಿದ್ದ ವ್ಯಕ್ತಿಯೊಬ್ಬರು ಹಿಟ್ ಅಂಡ್ ರನ್‌ಗೆ ಬಲಿಯಾದ ಘಟನೆ ಕಬ್ಬನ್ ಪಾರ್ಕ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶುಕ್ರವಾರ ನಸುಕಿನಲ್ಲಿ ನಡೆದಿದೆ. ಶ್ರೀನಿವಾಸ್ (55) ಮೃತ ವ್ಯಕ್ತಿ. ಕೃತ್ಯ ಎಸಗಿ ಪರಾರಿಯಾಗಿರುವ ಕಾರು ಪತ್ತೆಗೆ ಪೊಲೀಸರು ತನಿಖೆ ನಡೆಸಿದ್ದಾರೆ. ಅನಿಲ್ ಕುಂಬ್ಳೆ ರಸ್ತೆ ಸಮೀಪ ನಸುಕಿನಲ್ಲಿ ಶ್ರೀನಿವಾಸ್ ಅವರು ನಡೆದುಕೊಂಡು ಹೋಗುವಾಗ ಈ ಅವಘಡ ಸಂಭವಿಸಿದೆ. ಮೃತರ ಬಗ್ಗೆ ಹೆಚ್ಚಿನ ವಿವರ ಕಲೆ ಹಾಕಲಾಗುತ್ತಿದೆ. ಘಟನಾ ಸ್ಥಳದ ಸುತ್ತಮುತ್ತಲಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಆಧರಿಸಿ ಕಾರು ಪತ್ತೆ ಹಚ್ಚಲಾಗಿದ್ದು, ಶೀಘ್ರದಲ್ಲೇ ಆರೋಪಿ ಚಾಲಕನನ್ನು ಬಂಧಿಸುತ್ತೇವೆ ಎಂದು ಪೊಲೀಸರು ಹೇಳಿದ್ದಾರೆ.

ಚಿಕಿತ್ಸೆಗೆ ಬಂದಿದ್ದ ಮಹಿಳೆಯ ಚಿನ್ನಾಭರಣ ಕದ್ದ ಖಾಸಗಿ ಆಸ್ಪತ್ರೆ ಸಿಬ್ಬಂದಿ ಬಂಧನ

ಬೆಂಗಳೂರು: ಚಿಕಿತ್ಸೆ ಸಲುವಾಗಿ ಆಸ್ಪತ್ರೆಗೆ ಬಂದಿದ್ದ ಮಹಿಳಾ ರೋಗಿಯಿಂದ ಚಿನ್ನಾಭರಣ ಕಳವು ಮಾಡಿದ್ದ ಖಾಸಗಿ ಆಸ್ಪತ್ರೆಯ ಸ್ವಚ್ಛತಾ ವಿಭಾಗದ ಸ್ವಚ್ಛತಾ ಕೆಲಸಗಾರಳೊಬ್ಬಳನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ವಡ್ಡರಪಾಳ್ಯದ ವನಜಾ ಬಂಧಿತಳಾಗಿದ್ದು, ಇತ್ತೀಚೆಗೆ ಬೆನ್ನು ನೋವಿನ ಸಂಬಂಧ ಶಸ್ತ್ರ ಚಿಕಿತ್ಸೆಗೆ ಬಂದಿದ್ದ ಸ್ವಪ್ನಾ ಎಂಬುವರಿಗೆ ಸೇರಿದ ಆಭರಣಗಳನ್ನು ಆಕೆ ಕಳವು ಮಾಡಿದ್ದಳು. ಈ ಬಗ್ಗೆ ಸಂತ್ರಸ್ತೆ ನೀಡಿದ ದೂರಿನ್ವಯ ವನಜಾಳ ಬಂಧನವಾಗಿದೆ. ಆರೋಪಿಯಿಂದ ಕದ್ದ ಚಿನ್ನಾಭರಣ ಜಪ್ತಿಗೆ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೂರು ದಿನಗಳ ಹಿಂದಷ್ಟೇ ಖಾಸಗಿ ಆಸ್ಪತ್ರೆಯಲ್ಲಿ ವನಜಾ ಕೆಲಸಕ್ಕೆ ಸೇರಿದ್ದಳು. ಹಣದ ದುರಾಸೆಗೆ ಬಿದ್ದು ಕಳ್ಳತನ ಮಾಡಿ ಈಗ ಜೈಲುವಂತಾಗಿದೆ. ಶಸ್ತ್ರ ಚಿಕಿತ್ಸೆ ವೇಳೆ ಸಪ್ನ ಅವರು ಬಿಚ್ಚಿಟ್ಟಿದ್ದ ಆಭರಣಗಳು ನಾಪತ್ತೆಯಾಗಿದ್ದವು. ಈ ಬಗ್ಗೆ ಸಿಸಿಟಿವಿ ಕ್ಯಾಮೆರಾ ಪರಿಶೀಲಿಸಿದಾಗ ವನಜಾ ಕೈ ಚಳಕ ಬೆಳಕಿಗೆ ಬಂದಿದೆ ಎಂದು ಪೊಲೀಸರು ಹೇಳಿದ್ದಾರೆ.

ಜಿಂಕೆ ಬೇಟೆಯಾಡಿ ಮಾಂಸ ಸಾಗಾಟ: ಆರೋಪಿ ಸೆರೆ

ಬೆಂಗಳೂರು ದಕ್ಷಿಣ: ಜಿಂಕೆ ಬೇಟೆಯಾಡಿ ಮಾಂಸ ಸಾಗಿಸುತ್ತಿದ್ದ ಆರೋಪದ ಮೇಲೆ ಓರ್ವ ಆರೋಪಿಯನ್ನು ಶುಕ್ರವಾರ ಬನ್ನೇರುಘಟ್ಟ ವನ್ಯಜೀವಿ ವಲಯ ವ್ಯಾಪ್ತಿಯ ಅಧಿಕಾರಿಗಳು ಬಂಧಿಸಿದ್ದಾರೆ. ತಟಗುಪ್ಪೆ ಗ್ರಾಮದ ಫಿಲಿಪ್ ಸಿಜೋನ್ ಬಂಧಿತ ಆರೋಪಿ. ಶುಕ್ರವಾರ ಬೆಳಗ್ಗೆ ಅರಣ್ಯ ಪ್ರದೇಶದಲ್ಲಿ ಜಿಂಕೆ ಬೇಟೆಯಾಡಿ ಸಾಗಿಸುತ್ತಿದ್ದ ಓರ್ವ ಆರೋಪಿಯನ್ನು ಸೆರೆ ಹಿಡಿದಿದ್ದಾರೆ. ಮತ್ತೋರ್ವ ಆರೋಪಿ ಪರಾರಿಯಾಗಿದ್ದಾನೆ. ಈ ಕಾರ್ಯಾಚರಣೆ ಯಲ್ಲಿ ಬನ್ನೇರುಘಟ್ಟ ಉಪ ವಲಯ ಅರಣ್ಯ ಸಂರಕ್ಷಣಾ ಧಿಕಾರಿ ಸಂತೋಷ್ ಕುಮಾರ್ ಸಹಾಯಕ ಅರಣ್ಯ ಸಂರಕ್ಷಣಾ ಧಿಕಾರಿ ರವಿಕುಮಾರ್, ವಲಯ ಅರಣ್ಯಾಧಿಕಾರಿ ಹರ್ಷವರ್ಧನ್, ಮಹೇಶ್, ವಿನಯ್ ಕುಮಾರ್, ಗಣೇಶ ಗೌಡ, ಸೂರ್ಯ ಕುಮಾರ್‌ಭಾಗಿಯಾಗಿದ್ದರು.

ಜೂ.20ರಿಂದ 24ರೊಳಗೆ ಜಿಬಿಎ ಚುನಾವಣೆ

11 ವರ್ಷ ಬಳಿಕ ಪಾಲಿಕೆ ಚುನಾವಣೆಗೆ ಮುಹೂರ್ತ | ಅಧಿಕೃತ ದಿನಾಂಕ ಘೋಷಣೆ ಬಾಕಿ | ಚುನಾವಣಾ ಆಯುಕ್ತ ಸಂಗ್ರೇಶಿ ಮಾಹಿತಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸುಪ್ರೀಂಕೋರ್ಟ್ ಸೂಚನೆಯಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಜೂ.20ರಿಂದ 24ರವರೆಗೆ ಚುನಾವಣೆ ನಡೆಸುವುದು ಅನಿವಾರ್ಯ. ಈ ಅವಧಿಯಲ್ಲೇ ಮತದಾನ ನಡೆಯಲಿದೆ ಎಂದು ರಾಜ್ಯ ಮುಖ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ ತಿಳಿಸಿದರು.

ಶುಕ್ರವಾರ ಜಿಬಿಎ ಮುಖ್ಯ ಆಯುಕ್ತ ಸೇರಿದಂತೆ 5 ನಗರಪಾಲಿಕೆಗಳ ಆಯುಕ್ತರು ಹಾಗೂ ಅಧಿಕಾರಿಗಳ ಸಮಾಲೋಚನಾ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಚುನಾವಣಾ ದಿನಾಂಕ ಪ್ರಕಟಣೆ ಮಾತ್ರ ಬಾಕಿ ಇದೆ. ಅದನ್ನು ಒಂದು ವಾರದೊಳಗೆ ನಿಗದಿಪಡಿಸಲಾಗುವುದು. ಜಿಬಿಎ ವತಿಯಿಂದ ಚುನಾವಣೆ ಸ್ವಲ್ಪ ಮುಂದೂಡುವಂತೆ ಮನವಿ ಬಂದಿದ್ದರೂ, ಜೂ.30ರೊಳಗೆ ಚುನಾವಣೆ ಪ್ರಕ್ರಿಯೆ ಪೂರ್ಣಗೊಳಿಸಬೇಕೆಂದು ಸುಪ್ರೀಂ ಕೋರ್ಟ್ ಸ್ಪಷ್ಟ ಆದೇಶ ನೀಡಿರುವ ಹಿನ್ನೆಲೆಯಲ್ಲಿ ಅದನ್ನು ಮುಂದೂಡುವ ಅಧಿಕಾರ ಇಲ್ಲ ಎಂದು ಹೇಳಿದರು.

ಜೂ.24ರೊಳಗೆ ಸರ್ಕಾರಿ ಪ್ರಾಯೋಜಿತ ಕಾರ್ಯಕ್ರಮಗಳಿದ್ದರೆ ಅವುಗಳನ್ನು ಶೀಘ್ರ ಮುಗಿಸಲು ಸೂಚನೆ ನೀಡಲಾಗಿದೆ. ಯಾವ ದಿನ ಮತದಾನ ನಡೆಸಬೇಕು ಎಂಬುದನ್ನು ಶೀಘ್ರದಲ್ಲೇ ಅಂತಿಮಗೊಳಿಸಲಾಗುವುದು. ಜಿಬಿಎ ಯಾವ ಸಮಸ್ಯೆಯನ್ನೇ ಹೇಳಿದರೂ, ನಿಗದಿತ ಅವಧಿಯೊಳಗೆ ಚುನಾವಣೆ ನಡೆಸುವುದು ಅನಿವಾರ್ಯ ಎಂದು ಖಚಿತಪಡಿಸಿದರು.



5 ಪಾಲಿಕೆಗಳ ರಚನೆ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಪ್ರಕರಣಗಳು ಬಾಕಿ ಇರುವಾಗಲೇ ಈ ರೀತಿ ಚುನಾವಣೆ ನಡೆಸಲು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರಿಸಿದ ಆಯುಕ್ತರು, ನಾನು ಇಲ್ಲಿಗೆ ಇತ್ತೀಚೆಗೆ ಬಂದಿದ್ದೇನೆ. ನನಗೆ ಹೈಕೋರ್ಟ್ ವಿಷಯ ತಿಳಿದಿಲ್ಲ. ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸುತ್ತಿರುವುದಾಗಿ ತಿಳಿಸಿದರು.

ಪಾಲಿಕೆಯಿಂದ ಚುನಾವಣೆ ಮುಂದೂಡಲು ಮನವಿ ಪತ್ರ ತಂದಿದ್ದರಾದರೂ ಇದು ಮನವಿ ಪತ್ರಗಳನ್ನು ಸ್ವೀಕರಿಸುವ ಸಭೆಯಲ್ಲ. ಬದಲಿಗೆ ಕೋರ್ಟ್ ಆದೇಶದಂತೆ ಚುನಾವಣೆ ನಡೆಸುವುದು ಅನಿವಾರ್ಯವಾಗಿದೆ ಎಂದು ಮನವರಿಕೆ ಮಾಡಿಕೊಟ್ಟಿದ್ದಾಗಿ ಅವರು ತಿಳಿಸಿದರು.

ಜಿಬಿಎ ನಿಯಮದ ಪ್ರಕಾರ ಚುನಾವಣೆ ನಡೆಸಲು ಸಮಿತಿಯ ಎಲ್ಲಾ ಸದಸ್ಯರೊಂದಿಗೆ ಸಭೆ ಕರೆದು ನಂತರ ಚುನಾವಣೆ ನಡೆಸಬೇಕೆಂಬುದನ್ನು ದಾಖಲಿಸಲಾಗಿದೆ.

ಆದರೆ, ಸಮಿತಿಯ ಇತರೆ ಸದಸ್ಯರೆಲ್ಲಾ ಸೇರಿ ಚುನಾವಣೆ ನಡೆಸಲು ಆಯೋಗಕ್ಕೆ ಅಧಿಕಾರ ನೀಡಿರುವ ಕಾರಣ ತಾನು ಪ್ರಕ್ರಿಯೆ ನಡೆಸಲು ಮುಂದಾಗಿರುವುದಾಗಿ ಆಯುಕ್ತರು ತಿಳಿಸಿದರು.

ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಮಾತನಾಡಿ, 5 ಪಾಲಿಕೆಗಳವ್ಯಾಪ್ತಿಯಲ್ಲಿಚುನಾವಣೆಗೆ ಅಗತ್ಯವಿರುವ ಬಹುತೇಕ ಪೂರ್ವ ಸಿದ್ಧತೆಗಳು ಪೂರ್ಣಗೊಂಡಿವೆ. ಈಗಾಗಲೇ ವಾರ್ಡ್ ವಿಂಗಡಣೆ, ಮೀಸಲಾತಿ ಹಾಗೂ ಅಂತಿಮ ಮತದಾರರ ಪಟ್ಟಿ ಸಿದ್ಧವಾಗಿದೆ ಎಂದರು.

ಮುಂದಿನ ಹಂತದಲ್ಲಿ ಮತಗಟ್ಟೆಗಳ ಅಂತಿಮ ಪಟ್ಟಿ ಪ್ರಕಟಣೆ ಚುನಾವಣಾಧಿಕಾರಿ (ಕ್ಣಾ), ಸಹಾಯಕ ಚುನಾವಣಾಧಿಕಾರಿ (ಅ್ಕಣಾ) ಮತ್ತು ಬಿಎಲ್‌ಒಗಳ ನೇಮಕ ಸಿಬ್ಬಂದಿ ತರಬೇತಿ ಮತಪೆಟ್ಟಿಗೆಗಳ ವ್ಯವಸ್ಥೆ ಮತ್ತು ಭದ್ರತಾ ಕ್ರಮಗಳು, ಮತ ಎಣಿಕೆ ಕೇಂದ್ರಗಳ ಸಿದ್ಧತೆ ಹಾಗೂ ಇತರೆ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಹೇಳಿದರು. ಸಭೆಯಲ್ಲಿ ಐದು ಪಾಲಿಕೆಗಳ ಆಯುಕ್ತರು ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿ, ಚುನಾವಣಾ ನಿರ್ವಹಣೆಗೆಸಂಬಂಧಿಸಿದ ವಿವಿಧ ಅಂಶಗಳ ಬಗ್ಗೆ ಚರ್ಚೆ ನಡೆಸಿದರು. ಸುಪ್ರೀಂ ಕೋರ್ಟ್ ಗಡುವಿನೊಳಗೆ ಜಿಬಿಎ ಚುನಾವಣೆ ನಡೆಸುವುದು ಖಚಿತವಾಗಿದ್ದು, ಅಧಿಕೃತ ದಿನಾಂಕ ಘೋಷಣೆ ಬಾಕಿ ಇದೆ.

ಪಾಲಿಕೆವಾರು ಮತದಾರರ ವಿವರಗಳು

ಪಾಲಿಕೆ	ವಾರ್ಡ್‌ಗಳು	ಮತಗಟ್ಟೆಗಳು	ಪುರುಷರು	ಮಹಿಳೆಯರು	ಇತರರು	ಒಟ್ಟು ಮತದಾರರು
ಬೆಂ.ಕೇಂದ್ರ	63	1303	7,26,476	6,98,967	303	14,25,746
ಬೆಂ.ಉತ್ತರ	72	1708	9,94,421	9,59,702	381	19,54,504
ಬೆಂ.ದಕ್ಷಿಣ	72	1611	9,03,402	8,41,097	225	17,44,724
ಬೆಂ.ಪೂರ್ವ	50	920	5,49,200	4,91,996	258	10,41,454
ಬೆಂ.ಪಶ್ಚಿಮ	112	2481	13,97,670	13,30,795	468	27,28,933
ಒಟ್ಟು	369	8023	45,71,169	43,22,557	1635	88,95,361

- ಒಟ್ಟು ವಾರ್ಡ್‌ಗಳ ಸಂಖ್ಯೆ: **369**
- ಒಟ್ಟು ಮತಗಟ್ಟೆಗಳ ಸಂಖ್ಯೆ: **8,023**
- ಒಟ್ಟು ಮತದಾರರ ಸಂಖ್ಯೆ: **88,95,361**
- ಅತಿ ಹೆಚ್ಚು ಮತದಾರರ ವಾರ್ಡ್ ಸುಬ್ರಹ್ಮಣ್ಯಪುರ: **53,660**
- ಅತಿ ಕಡಿಮೆ ಮತದಾರರ ವಾರ್ಡ್– ವಿಜ್ಞಾನ ನಗರ: **12,897**

ಇವಿಎಂ ಬಳಕೆ ಇಲ್ಲ: ಬ್ಯಾಲೆಟ್ ಪೇಪರ್ ಬಳಸಿ ಚುನಾವಣೆ

ವಿಧಾನಸಭಾ ಚುನಾವಣೆಯಂತೆ ಈ ಚುನಾವಣೆಗೆ ಇವಿಎಂ ಬಳಸುತ್ತಿಲ್ಲ. ಬ್ಯಾಲೆಟ್ ಪೇಪರ್‌ಪದ್ಧತಿಯಲ್ಲಿಯೇ ಮತದಾನ ನಡೆಯಲಿದೆ ಎಂದು ಆಯುಕ್ತರು ತಿಳಿಸಿದರು. ಹನ್ನೊಂದು ವರ್ಷಗಳ ನಂತರ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಚುನಾವಣೆ ನಡೆಯುತ್ತಿದ್ದು, ನಗರಪಾಲಿಕೆಯ ಸದಸ್ಯತ್ವದ ಸ್ಥಾನದ ಆಕ್ಷಾಂಕ್ಷಿಗಳು ಎಲ್ಲಾ ಪಕ್ಷಗಳಲ್ಲಿಯೂ ಸಾಲು ಸಾಲು ಮಂದಿ ಪಾಲಿಕೆ ಸದಸ್ಯತ್ವದ ಟಿಕೆಟ್ ಗಾಗಿ ಕಾಯುತ್ತಿದ್ದಾರೆ.

ಆತ್ಮಹತ್ಯೆ: ಬೆಂಗಳೂರಿಗೆ ದೇಶದಲ್ಲಿಯೇ 2ನೇ ಸ್ಥಾನ

ದಿಲ್ಲಿ ಫಸ್ಟ್ | 2024ರಲ್ಲಿ ನಗರದಲ್ಲಿ 2403 ಜನ ಸೂಸೈಡ್

ನವದೆಹಲಿ: 2024ರಲ್ಲಿ ದೇಶದಲ್ಲಿ ನಡೆದ ಆತ್ಮಹತ್ಯೆ ಪ್ರಕರಣಗಳಲ್ಲಿ ರಾಷ್ಟ್ರರಾಜಧಾನಿ ದೆಹಲಿ ಮೊದಲ ಸ್ಥಾನದಲ್ಲಿದ್ದು, ಇಲ್ಲಿ 2905 ಆತ್ಮಹತ್ಯೆ ಘಟನೆ ಬೆಳಕಿಗೆ ಬಂದಿದೆ. ಸಿಲಿಕಾನ್ ಸಿಟಿ ಬೆಂಗಳೂರು 2ನೇ ಸ್ಥಾನದಲ್ಲಿದ್ದು 2403 ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸರ್ಕಾರಿ ಅಂಕಿ-ಅಂಶ ಹೇಳಿದೆ.



ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (ಎನ್‌ಸಿಆರ್‌ಬಿ) ದೇಶದ ಪ್ರಮುಖ 53 ನಗರಗಳಲ್ಲಿ ಸಮೀಕ್ಷೆ ನಡೆಸಿ ವರದಿ ಸಿದ್ಧಪಡಿಸಿ ಬಿಡುಗಡೆ ಮಾಡಿದೆ.

ಈ ಪ್ರಕಾರ 2905 ಆತ್ಮಹತ್ಯೆ ಪ್ರಕರಣಗಳೊಂದಿಗೆ ದೆಹಲಿ ಮೊದಲ ಸ್ಥಾನದಲ್ಲಿದ್ದರೆ, ಬೆಂಗಳೂರು 2403 ಘಟನೆಗಳೊಂದಿಗೆ ಎರಡನೇ ಸ್ಥಾನ ಪಡೆದಿದೆ. ಮುಂಬೈನಲ್ಲಿ 1406 ಕೇಸ್ ದಾಖಲಾಗಿದೆ.

ಮರಣ ದರದಲ್ಲಿ ಬೆಂಗಳೂರು ನಂ.1: ಆದರೆ ಜನಸಂಖ್ಯೆಗೆ ಅನುಗುಣವಾಗಿ ಈ ನಗರಗಳ ಮರಣ ದರವನ್ನು (ಪ್ರತಿ 1 ಲಕ್ಷ ಜನಸಂಖ್ಯೆಗೆ) ಗಮನಿಸಿದರೆ ಬೆಂಗಳೂರು ಶೇ.16.7 ದರದೊಂದಿಗೆ ಮೊದಲ ಸ್ಥಾನದಲ್ಲಿದ್ದರೆ, ದೆಹಲಿ ಶೇ.13.2 ಮರಣ ದರದೊಂದಿಗೆ ಎರಡನೇ ಸ್ಥಾನದಲ್ಲಿದೆ.

ಆದರೆ ಈ ಎರಡು ಪ್ರಮುಖ ನಗರಗಳಲ್ಲಿ 2023ಕ್ಕೆ ಹೋಲಿಸಿದರೆ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿದೆ. ಮಹಿಳೆಯರಿಗೆ ಹೋಲಿಸಿದರೆ ಪುರುಷರೇ ಹೆಚ್ಚು ಆತ್ಮಹತ್ಯೆ ಶರಣಾಗಿದ್ದು, ಕೌಟುಂಬಿಕ ಸಮಸ್ಯೆ, ನಿರುದ್ಯೋಗ ಪ್ರಮುಖ ಕಾರಣ ಎಂದು ವರದಿ ಹೇಳಿದೆ.

ಇನ್ನು ಆತ್ಮಹತ್ಯೆ ಮಾಡಿಕೊಂಡವರಲ್ಲಿ ಹೆಚ್ಚಿನವರು ವಿವಾಹಿತರು ಎಂದು ಅಂಕಿ ಅಂಶ ಹೇಳಿದ್ದು, ದೆಹಲಿಯಲ್ಲಿ ಒಟ್ಟು 1616 ವಿವಾಹಿತರು ಸಾವಿಗೆ ಶರಣಾಗಿದ್ದಾರೆ. ಅದರಲ್ಲಿ 1162 ಪುರುಷರೇ ಇದ್ದಾರೆ ಎಂದಿದೆ.

ಕಾಲೇಜುಗಳ ಸುತ್ತ 34 ಕ್ವಿಂಟಲ್ ತ್ಯಾಜ್ಯ ತೆರವು



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸ್ವಚ್ಛ ಸರ್ವೇಕ್ಷಣಾ 2025-26ರ ಶ್ರೇಯಾಂಕದಲ್ಲಿ ಉತ್ತಮ ಸ್ಥಾನ ಗಳಿಸುವ ನಿಟ್ಟಿನಲ್ಲಿ ಬೆಂಗಳೂರು ಕೇಂದ್ರ ನಗರ ಪಾಲಿಕೆ ಶಾಲಾ ಕಾಲೇಜುಗಳ ಸುತ್ತಮುತ್ತ ವಿಶೇಷ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡು 33 ಶಾಲೆಗಳಿಂದ 34.7 ಕ್ವಿಂಟಾಲ್ ತ್ಯಾಜ್ಯ ತೆರವುಗೊಳಿಸಿದೆ. ಸ್ವಚ್ಛತಾ ಕಾರ್ಯದಲ್ಲಿ ಒಟ್ಟು 198 ಪೌರಕಾರ್ಮಿಕರು ಹಾಗೂ 75 ಮಂದಿ ಸ್ವಚ್ಛತೆ ಸಿಬ್ಬಂದಿ ಸಕ್ರಿಯವಾಗಿ ಭಾಗವಹಿಸಿದ್ದರು. ಅಲ್ಲದೆ, ಸುತ್ತಮುತ್ತ ತ್ಯಾಜ್ಯ ಹಾಕದಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗಿದೆ ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಹೆಚ್ಚುವರಿ ಆಯುಕ್ತ ದಲ್ಜಿತ್ ಕುಮಾರ್‌ತಿಳಿಸಿದರು. ಈ ಸ್ವಚ್ಛತಾ ಅಭಿಯಾನದಲ್ಲಿ ಡಿಜಿಎಂ ಭೀಮೇಶ್ ನಾಯಕ್, ವಿಭಾಗದ ಎ.ಜಿ.ಎಂಗಳು ಅಧಿಕಾರಿಗಳು, ಪೌರಕಾರ್ಮಿಕರು ಹಾಗೂ ಸಿಬ್ಬಂದಿ ಭಾಗಿಯಾಗಿದ್ದರು.

ಪೌಲ್ಟ್ರಿ ಫೀಡ್ಸ್ ಜತೆ ಸಾಗಿಸ್ತಿದ್ದ ₹1.25 ಕೋಟಿ ಗಾಂಜಾ ವಶ

ಬಿಹಾರ ಮೂಲದ ಇಬ್ಬರು ಆರೋಪಿಗಳ ಬಂಧನ

• **ಕನ್ನಡಪ್ರಭ ವಾರ್ತೆ** ಬೆಂ.ದಕ್ಷಿಣ

ಪೌಲ್ಟ್ರಿ ಫೀಡ್ಸ್ ಸಾಗಾಟ ನೆಪದಲ್ಲಿ ಟ್ರಕ್‌ನಲ್ಲಿ ಗಾಂಜಾ ಸಾಗಿಸುತ್ತಿದ್ದ ಬಿಹಾರದ ಆರೋಪಿಯನ್ನು ಟ್ರಕ್ ಸಮೇತ ಜಿಗಣಿ ಪೋಲಿಸರು ಬಂಧಿಸಿ, 1.25 ಕೋಟಿ ರು. ಗಾಂಜಾ ಜಪ್ತಿ ಮಾಡಿದ್ದಾರೆ.



ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಜಿಗಣಿ ಪೊಲೀಸ್ ಠಾಣಾ ಸರಹದ್ದು ಕೊಪ್ಪ-ಬೇಗೂರು ಮುಖ್ಯ ರಸ್ತೆಯ ಬಳಿ ಗುರುವಾರ ಸಂಜೆ ಪೌಲ್ಟ್ರಿ ಫೀಡ್ಸ್ ಸಾಗಾಣಿಕೆ ಟ್ರಕ್‌ನಲ್ಲಿ ಗಾಂಜಾ ಸಾಗಾಟ ಮಾಡುತ್ತಿದ್ದಾರೆ ಎಂಬ ಖಚಿತ ಮಾಹಿತಿ ಆಧರಿಸಿ ಜಿಗಣಿ ಪೊಲೀಸ್ ಇನ್ಸ್ಪೆಕ್ಟರ್‌ಬಿ.ಎಸ್.ಮಂಜುನಾಥ್ ಮತ್ತು ಸಿಬ್ಬಂದಿ ದಾಳಿ ನಡೆಸಿ ಪೌಲ್ಟ್ರಿ ಪೀಡ್ಸ್ ಮಧ್ಯೆ ಬಚ್ಚಿಟ್ಟಿದ್ದ 250 ಕೆ.ಜಿ ತೂಕದ ಗಾಂಜಾವನ್ನು ವಶಕ್ಕೆ ಪಡೆದಿದ್ದು ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಖಾಸಗಿ ಕಂಪನಿಗೆ ಸೇರಿದ ಟ್ರಕ್‌ನಲ್ಲಿ ಛತ್ತೀಸ್‌ಗಢದಿಂದ ತಮಿಳುನಾಡಿಗೆ ಪೌಲ್ಟ್ರಿ ಫೀಡ್ಸ್ ಸಾಗಿಸುವ ನೆಪದಲ್ಲಿ ಒಡಿಶಾದ ಜಯಪುರ ಗ್ರಾಮಕ್ಕೆ ತೆರಳಿ ಅಲ್ಲಿ ಗಾಂಜಾ ತುಂಬಿಸಿ ಬೆಂಗಳೂರಿಗೆ ಪೂರೈಸಲು ಆರೋಪಿಗಳು ಯೋಜಿಸಿದ್ದರು.

ಈ ಸಂಬಂಧ ಜಿಗಣಿ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಮೂಲ ಆರೋಪಿ ಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ಆರೋಪಿಗಳ ವಿರುದ್ಧ ನಡೆದ ಕಾರ್ಯಾಚರಣೆಯಲ್ಲಿ ಬೆಂಗಳೂರು ಜಿಲ್ಲೆ ಪೊಲೀಸ್ ಅಧೀಕ್ಷಕ ಚಂದ್ರಕಾಂತ್ ಮತ್ತು ಅಪರ ಪೊಲೀಸ್ ಅಧೀಕ್ಷಕ ವೆಂಕಟೇಶ್ ಪ್ರಸನ್ನ, ಲಕ್ಷ್ಮೀನಾರಾಯಣ್ ರವರ ಮಾರ್ಗದರ್ಶನದಲ್ಲಿ, ಆನೇಕಲ್ ಉಪ-ವಿಭಾಗದ ಪೊಲೀಸ್ ಉಪಾಧೀಕ್ಷಕ ಬಿ.ಎಸ್.ಮೋಹನ್ ಕುಮಾರ್‌ನೇತೃತ್ವದಲ್ಲಿ ಜಿಗಣಿಇನ್‌ಸ್ಪೆಕ್ಟರ್‌ಬಿ.ಎಸ್.ಮಂಜುನಾಥ್, ಸಿಬ್ಬಂದಿ ಇದ್ದರು.

ಅಭಿನಂದನೆ | ಆರ್.ಅಶೋಕ್ ಮಾಹಿತಿ | ಎಚ್‌ಎಎಲ್ ವಿಮಾನ ನಿಲ್ದಾಣದ ಬಳಿ ಪರಿಶೀಲನೆ

ಮೋದಿಗೆ ನಾಳೆ ಏರ್ಪೋರ್ಟಲ್ಲಿ ಅಭಿನಂದನೆ

3 ರಾಜ್ಯದ ಚುನಾವಣಾ ಗೆಲುವು : ಪ್ರಧಾನಿಗೆ ಮೈಸೂರು ಪೇಟ, ರೇಷ್ಮೆ ಶಾಲು ಹೊದಿಸಿ ಸನ್ಮಾನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಪಂಚ ರಾಜ್ಯ ಚುನಾವಣೆ ಬಳಿಕ ಭಾನುವಾರ ಬೆಂಗಳೂರಿಗೆ ಆಗಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮೈಸೂರು ಪೇಟ ತೊಡಿಸಿ, ರೇಷ್ಮೆ ಶಾಲು ಹೊದಿಸಿ ಗೌರವ ಸಮರ್ಪಿಸಲಾಗುವುದು ಎಂದು ವಿಪಕ್ಷ ನಾಯಕ ಆರ್.ಅಶೋಕ್ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಆಗಮನದ ಹಿನ್ನೆಲೆಯಲ್ಲಿ ಶುಕ್ರವಾರ ಸಂಜೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಮತ್ತಿತರ ಮುಖಂಡರೊಂದಿಗೆ ಎಚ್‌ಎಎಲ್ ವಿಮಾನ ನಿಲ್ದಾಣದ ಬಳಿ ಪೂರ್ವತಯಾರಿ ಪರಿಶೀಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅಶೋಕ್, ನರೇಂದ್ರ ಮೋದಿ ಅವರು ಪಂಚ ರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ ಸೇರಿ ವಿವಿಧ ರಾಜ್ಯಗಳಲ್ಲಿ ಬಿಜೆಪಿಗೆ ದೊಡ್ಡ ಗೆಲುವು ತಂದು ಕೊಟ್ಟಿದ್ದಾರೆ. ಅವರ ವರ್ಚಸ್ಸು, ಅವರ ಜಾಣ್ಮೆ, ಚಾಣಕ್ಯತನ ನಮಗೆ ಉಪಯೋಗವಾಗಿದೆ. ಮೇ 10ರಂದು ಬೆಂಗಳೂರಿಗೆ ಆಗಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸಲಾಗುವುದು ಎಂದರು. ಎಚ್‌ಎಎಲ್ ವಿಮಾನನಿಲ್ದಾಣಕ್ಕೆ ಬರುವ ನರೇಂದ್ರ ಮೋದಿ ಅವರು 30 ನಿಮಿಷಗಳ ಕಾಲ ಭಾಷಣ ಮಾಡುತ್ತಾರೆ. ಈ ವೇಳೆ ಅವರಿಗೆ ಮೈಸೂರು ಪೇಟ ತೊಡಿಸಿ, ರೇಷ್ಮೆ ಶಾಲು ಹೊದಿಸಿ ಗೌರವಿಸುತ್ತೇವೆ. ಈ ಕಾರ್ಯಕ್ರಮದಲ್ಲಿ ಸುಮಾರು 15-20 ಸಾವಿರ ಜನ ಭಾಗವಹಿಸಲಿದ್ದಾರೆ. ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ನಂದೀಶ್ ರೆಡ್ಡಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್, ಮಾಜಿ ಮೇಯರ್ ಗೌತಮ್ ಕುಮಾರ್ ಹಾಜರಿದ್ದರು.



ಅಭಿನಂದನಾ ಕಾರ್ಯಕ್ರಮದ ಹಿನ್ನೆಲೆ ಆರ್.ಅಶೋಕ್, ಅರವಿಂದ ಲಿಂಬಾವಳಿ ಪೂರ್ವ ತಯಾರಿ ವೀಕ್ಷಿಸಿದರು.

ಕಂದಾಯ ಅಧಿಕಾರಿಗಳ ಜತೆ ಸುನೀಲ್ ಸಭೆ

16ರಂದು ಉ.ಪಾಲಿಕೇಲಿ ನಮ್ಮ ಖಾತಾ ಆಂದೋಲನ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮೇ 16ರಿಂದ ನಮ್ಮ ಖಾತಾ ಆಂದೋಲನ ಕಾರ್ಯಕ್ರಮ ಜಾರಿಗೆ ತರಲು ಉತ್ತರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಶುಕ್ರವಾರ ಸಂಜೆ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಕಂದಾಯ ವಿಭಾಗ ಅಧಿಕಾರಿಗಳ ಸಭೆ ಸೂಚನೆ ನೀಡಿದ ಆಯುಕ್ತರು,

ಉಪ ಮುಖ್ಯಮಂತ್ರಿಗಳ ಸೂಚನೆಯಂತೆ ಪ್ರತಿ ಶನಿವಾರ ಉಪ ವಿಭಾಗ ಮಟ್ಟದಲ್ಲಿ ಓಪನ್ ಹೌಸ್ ಕೌಂಟರ್‌ತೆಗೆದು, ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ನಡೆಯುವ ನಮ್ಮ ಖಾತಾ ಆಂದೋಲನ ನಡೆಸುವಂತೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆಸ್ವೀಕೃತವಾಗುವಆಸ್ತಿತೆರಿಗೆಸಂಬಂಧಿಸಿದಇ-ಖಾತಾ, ಹೊಸ ಖಾತಾ, ಖಾತಾ ತಿದ್ದುಪಡಿ, ಖಾತಾ ಅನೂರ್ಜಿತಗೊಳಿಸುವಿಕೆ, ಬಿ ಖಾತಾ ಇಂದ ಎ ಖಾತಾ, ಖಾತಾ ಒಟ್ಟುಗೂಡಿಸುವಿಕೆ, ವಸತಿ ಸಮುಚ್ಛಯಗಳಿಗೆ ಉಪ ಸಂಖ್ಯೆ ನೀಡುವ ಖಾತಾ ಹಾಗೂ ಇನ್ನಿತರೆ ಕಂದಾಯ ವಿಭಾಗದ ಸಂಬಂಧಿತ ಸಾರ್ವಜನಿಕರ ಅಹವಾಲುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸುವಂತೆ ಆಯುಕ್ತರು ಸೂಚಿಸಿದರು. ದಾಖಲೆ ಸರಿ ಇರುವ ಅರ್ಜಿಗಳನ್ನು ಸ್ಥಳದಲ್ಲಿಯೇ ವಿಲೇವಾರಿ ಮಾಡಲು ಹಾಗೂ ದಾಖಲೆಗಳನ್ನು ಸಲ್ಲಿಸದ ಅರ್ಜಿದಾ ರರಿಂದ ಅಗತ್ಯ ದಾಖಲೆಗಳನ್ನು 15 ದಿನದಲ್ಲಿವಿಲೇವಾರಿ ಮಾಡಲು ಹೇಳಿದರು.

ಹಣ ದ್ವಿಗುಣ ಆಫರ್ ಅಕ್ರಮ: ಗೇಮ್ಸ್‌ಕ್ರಾಫ್ಟ್ ಮಾಲೀಕರ ಸೆರೆ

ಬೆಂಗಳೂರು, ದೆಹಲಿಯಲ್ಲಿ 17 ಕಡೆ ಇ.ಡಿ. ದಾಳಿ

ನವದೆಹಲಿ: ಹಣ ದ್ವಿಗುಣಗೊಳಿಸುವುದಾಗಿ ಆಮಿಷವೊಡ್ಡಿ ಸಾರ್ವಜನಿಕರಿಗೆ ವಂಚಿಸುತ್ತಿದ್ದ ಆರೋಪದಡಿ ಆನ್‌ಲೈನ್ ಗೇಮಿಂಗ್ ಗೇಮ್ಸ್ ಕ್ರಾಫ್ಟ್‌ನ ಬೆಂಗಳೂರು ಮತ್ತು ದೆಹಲಿಯ 17 ಸ್ಥಳಗಳಿಗೆ ಗುರುವಾರ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯ(ಇ.ಡಿ.) ಇದೀಗ ಸಂಸ್ಥೆಯ 3 ಸದಸ್ಯರನ್ನು ಶುಕ್ರವಾರ ಬಂಧಿಸಿದೆ. ದೀಪಕ್ ಸಿಂಗ್, ಪೃಥ್ವಿರಾಜ್ ಸಿಂಗ್ ಮತ್ತು ವಿಕಾಸ್ ತನೇಜಾ ಅವರನ್ನು ಅಕ್ರಮ ಹಣ ವರ್ಗಾವಣೆ ಪ್ರಕರಣದಡಿ ಇ.ಡಿ. ಬಂಧಿಸಿದೆ.

ದೀಪಕ್ ಸಿಂಗ್ ಮತ್ತು ಪೃಥ್ವಿರಾಜ್ ಸಿಂಗ್ ಅವರನ್ನು ದೆಹಲಿ-ಎನ್‌ಸಿಆರ್ ಪ್ರದೇಶದಿಂದ ಹಾಗೂ ತನೇಜಾ ಅವರನ್ನು ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಮೂವರನ್ನೂ ಬೆಂಗಳೂರು ಕೋರ್ಟ್‌ಗೆ ಹಾಜರುಪಡಿಸಲಾಗಿದೆ. ಗೇಮ್ಸ್‌ಕ್ರಾಫ್ಟ್ ಟೆಕ್ನಾಲಜಿ ಲಿ. ವಿರುದ್ಧ ಇ.ಡಿ.ಯು ಅಕ್ರಮ ಹಣ ವರ್ಗಾವಣೆ ಪ್ರಕರಣದಡಿ ಪ್ರಕರಣ ದಾಖಲಿಸಿದ ಬೆನ್ನಲ್ಲೇ ಈ ಬಂಧನ ನಡೆದಿದೆ. ಹಲವು ಪೊಲೀಸ್ ಠಾಣೆಗಳಲ್ಲಿ ದಾಖಲಾಗಿದ್ದ ವಂಚನೆ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ. ತನಿಖೆ ನಡೆಸುತ್ತಿದೆ.

ಗುರುವಾರವಷ್ಟೇ ಇ.ಡಿ.ಯು ದೆಹಲಿ ಮತ್ತು ಕರ್ನಾಟಕದ 17 ಕಡೆ ದಾಳಿ ನಡೆಸಿ ಕೋಟ್ಯಂತರ ರುಪಾಯಿ ಹಣ ಹಾಗೂ ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದಿತ್ತು. ಕಂಪನಿಯು ರಮ್ಮಿ ಕಲ್ಚರ್, ರಮ್ಮಿ ಟೈಮ್‌ನಂಥ ಆನ್‌ಲೈನ್ ಗೇಮ್‌ಗಳನ್ನು ನಡೆಸುತ್ತಿತ್ತು. ಈ ಸಂಸ್ಥೆ ವಿರುದ್ಧ ಹಲವು ವಂಚನೆ ಪ್ರಕರಣಗಳು ದಾಖಲಾಗಿವೆ. ವಂಚನೆ ಬಳಿಕ ಕೆಲವರು ಆತ್ಮಹತ್ಯೆ ಮಾಡಿಕೊಂಡ ಕುರಿತೂ ಎಫ್‌ಐಆರ್ ದಾಖಲಾಗಿದೆ.

ಸುದ್ದಿ ಸಿಂಚನ

ನಾಳೆ ಮೆಟ್ರೋ ನೇರಳೆ ಮಾರ್ಗದಲ್ಲಿ ರೈಲು ಸೇವೆಯಲ್ಲಿ ವ್ಯತ್ಯಯ



ಬೆಂಗಳೂರು: ನಮ್ಮ ಮೆಟ್ರೋ ನೇರಳೆ ಮಾರ್ಗದಲ್ಲಿ ಅಗತ್ಯ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮೇ 10ರ ಭಾನುವಾರದಂದು ಬೆಳಗ್ಗೆ 7ರಿಂದ 9 ಗಂಟೆಯವರೆಗೆ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಹೊಸಹಳ್ಳಿ ನಿಲ್ದಾಣದಿಂದ ಕಬ್ಬನ್ ಉದ್ಯಾನ ನಿಲ್ದಾಣದವರೆಗೆ ಮೆಟ್ರೋ ರೈಲು ಸೇವೆ ಇರುವುದಿಲ್ಲ. ಉಳಿದಂತೆ ಈ ಮಾರ್ಗದ ಚಲ್ಲಘಟ್ಟದಿಂದ ವಿಜಯನಗರ ಹಾಗೂ ಎಂಜಿ ರಸ್ತೆಯಿಂದ ವೈಟ್‌ಫೀಲ್ಡ್‌ವರೆಗೆ ಮೆಟ್ರೋ ರೈಲು ಸಂಚಾರ ಯಥಾಸ್ಥಿತಿ ಯಲ್ಲಿ ಇರಲಿದೆ ಎಂದು ಬಿಎಂಆರ್‌ಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

3 ದಿನ ಮುಚ್ಚಿದ್ದ ಪೀಣ್ಯ ಫ್ಲೈಓವರ್ ಸಂಚಾರ ಶುರು

ಬೆಂಗಳೂರು: ತಾಂತ್ರಿಕ ತಪಾಸಣೆ ಮುಗಿದ ಹಿನ್ನಲೆಯಲ್ಲಿ ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆ ವಾಹನಗಳ ಸಂಚಾರಕ್ಕೆ ಶುಕ್ರವಾರ ಬೆಳಗ್ಗೆಯಿಂದ ಮುಕ್ತಾಯ ವಾಗಿದೆ. ಮೇಲ್ಸೇತುವೆಯಲ್ಲಿ ಕೇಬಲ್ ಅಳವಡಿಕೆ ಹಾಗೂ ಲೋಡ್ ಟೆಸ್ಟಿಂಗ್ ಸಲುವಾಗಿ 3 ದಿನಗಳು ವಾಹನ ಸಂಚಾರಕ್ಕೆ ಪೊಲೀಸರು ನಿರ್ಬಂಧಿಸಿದ್ದರು. ಈ ತಾಂತ್ರಿಕ ತಪಾಸಣೆ ಮುಗಿದ ಬಳಿಕ ವಾಹನಗಳ ಸಂಚಾರ ನಿರ್ಬಂಧವನ್ನು ಪೊಲೀಸರು ತೆರವುಗೊಳಿಸಿ ದ್ದಾರೆ. ಬೆಳಗ್ಗೆ 11ರಿಂದ ಮೇಲ್ಸೇತುವೆಯಲ್ಲಿ ವಾಹನಗಳು ಓಡಾಟ ಶುರು ಮಾಡಿದ್ದವು. ಇದರಿಂದ ತುಮಕೂರು-ಬೆಂಗಳೂರು ಹೆದ್ದಾರಿಯಲ್ಲಿ ಉಂಟಾಗಿದ್ದ ಸಂಚಾರ ದಟ್ಟಣೆಗೂ ಮುಕ್ತಿ ಸಿಕ್ಕಿದೆ.

ಜೂ.5ರಿಂದ ಮೂರು ದಿನ ಫೋಟೋಗ್ರಫಿ ಕಾರ್ಯಾಗಾರ

ಬೆಂಗಳೂರು: ನೀನಾಸಂ ಸಹಯೋಗದಲ್ಲಿ ಸಾಗರ ಫೋಟೋಗ್ರಫಿ ಸೊಸೈಟಿ ಜೂ.5ರಿಂದ 7ರವರೆಗೆ ಹೆಗ್ಗೋಡಿನಲ್ಲಿ ಡಿಜಿಟಲ್ ಫೋಟೋಗ್ರಫಿಯ ಫೋಟೋ ಶಾಪ್ ಮತ್ತು ಲೈಟ್ ರೂಮ್' ಸಾಫ್ಟ್‌ವೇರ್‌ಕಾರ್ಯಾ ಗಾರವನ್ನು ಆಯೋಜಿಸಿದೆ. ಭಾಗವಹಿಸಲು ಇಷ್ಟಪಡುವ ಆಸಕ್ತರು ಹೆಚ್ಚಿನ ವಿವರಗಳಿಗಾಗಿ ಎಸ್.ಪಿ. ಎಸ್ ಸಂಸ್ಥೆಯ ಜಿ.ಆರ್. ಪಂಡಿತ್ ಅವರನ್ನು (ಮೊಬೈಲ್: 9448627878) ಸಂಪರ್ಕಿಸುವಂತೆ ಸಾಗರ ಫೋಟೋ ಗ್ರಫಿ ಸೊಸೈಟಿಯ ಕೆ.ಎಸ್.ರಾಜಾರಾಂ ಪತ್ರಿಕಾ ಹೇಳಿಕೆಯಲ್ಲಿ ಕೋರಿದ್ದಾರೆ.

ನಗರದಲ್ಲಿ ನಿತ್ಯ 50ರಿಂದ 70 ವಾಹನ ಟೋಯಿಂಗ್

ಎಲ್ಲೆಂದರಲ್ಲಿ ವಾಹನಗಳನ್ನು ನಿಲ್ಲಿಸುವವರಿಗೆ ಪೊಲೀಸರಿಂದ ಬಿಸಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ಸಂಚಾರ ನಿಯಮ ಉಲ್ಲಂಘಿಸಿ ವಾಹನ ನಿಲುಗಡೆ ನಿಷೇಧಿತ ಪ್ರದೇಶಗಳಲ್ಲಿ ವಾಹನ ನಿಲ್ಲಿಸುವವರಿಗೆ ಪೊಲೀಸರು ಬಿಸಿ ಮುಟ್ಟಿಸಿದ್ದು, ಪ್ರತಿ ದಿನ 50 ರಿಂದ 70 ವಾಹನಗಳನ್ನು ಟೋಯಿಂಗ್ ಮೂಲಕ ದಂಡ ವಿಧಿಸುತ್ತಿದ್ದಾರೆ. ರಾಜಧಾನಿಯಲ್ಲಿ ನಾಲ್ಕು ವರ್ಷಗಳ ಬಳಿಕ ಪುನಾ ರಸ್ತೆಗಿಳಿದ ಟೋಯಿಂಗ್ ವಾಹನಗಳು, ತಿಂಗಳ ಅವಧಿಯಲ್ಲಿ ಸುಮಾರು 600ಕ್ಕೂ ಹೆಚ್ಚಿನ ವಾಹನಗಳ ಟೋಯಿಂಗ್ ಮೂಲಕ ಪೊಲೀಸರು ದಂಡ ವಿಧಿಸಿದ್ದಾರೆ.

ಈ ಸಂಬಂಧ 'ಕನ್ನಡಪ್ರಭ'ಕ್ಕೆ ಶುಕ್ರವಾರ ಪ್ರತಿಕ್ರಿಯಿಸಿದ ಜಂಟಿ ಆಯುಕ್ತ (ಸಂಚಾರ) ಕಾರ್ತಿಕ್ ರೆಡ್ಡಿ ಅವರು, ನಗರದಲ್ಲಿ ಟೋಯಿಂಗ್ ವ್ಯವಸ್ಥೆ ಮುಂದುವರಿದಿದೆ. ಯಾವುದೇ ರೀತಿಯ ತಾಂತ್ರಿಕ ಸಮಸ್ಯೆ ಎದುರಾಗಿಲ್ಲ ಎಂದು ಸ್ಪಷ್ಟಪಡಿಸಿದರು. ಪ್ರಸುಸ್ತ ಗ್ರೇಟರ್‌ಬೆಂಗಳೂರು ಪ್ರಾಧಿಕಾರದ 3 ಪಾಲಿಕೆ (ಕೇಂದ್ರ, ಉತ್ತರ ಹಾಗೂ ಪಶ್ಚಿಮ) ವ್ಯಾಪ್ತಿಯಲ್ಲಿ ಆರು ಟೋಯಿಂಗ್ ವಾಹನಗಳು ಕಾರ್ಯಾಚರಣೆ ನಡೆಸಿವೆ. ಸಂಚಾರ ನಿಯಮ ಉಲ್ಲಂಘಿಸಿ ನಿಲುಗಡೆ ನಿಷೇಧ ಪ್ರದೇಶದಲ್ಲಿ ನಿಲ್ಲಿಸುವ ವಾಹನಗಳಿಗೆ ದಂಡ ವಿಧಿಸಲಾಗು ತ್ತಿದ್ದು, ಪ್ರತಿ ದಿನ ಸುಮಾರು 50-70 ವಾಹನಗಳು ಟೋಯಿಂಗ್ ಮಾಡಲಾಗುತ್ತಿದೆ. ಕೆಲವೇ ದಿನಗಳಲ್ಲಿ ಇನ್ನುಳಿದ ಪಾಲಿಕೆಗಳ ಸರಹದ್ದಿನಲ್ಲಿ ಟೋಯಿಂಗ್ ಜಾರಿಗೊಳ್ಳಲಿದ್ದು, ಇದಕ್ಕೆ ಮತ್ತೆ ಮೂರು ವಾಹನಗಳು ಸೇರ್ಪಡೆಯಾಗಲಿವೆ ಎಂದು ಹೇಳಿದರು.



ಕಾರೊಂದನ್ನು ಟೋಯಿಂಗ್ ಮಾಡುತ್ತಿರುವುದು.

ರಾಜಧಾನಿಯಲ್ಲಿ 2022ರಲ್ಲಿ ಟೋಯಿಂಗ್ ವಾಹನಗಳ ಕಾರ್ಯಾಚರಣೆ ವಿರುದ್ಧ ಜನಾಕ್ರೋಶ ವ್ಯಕ್ತವಾದ ಹಿನ್ನಲೆಯಲ್ಲಿ ಸರ್ಕಾರ ಸ್ಥಗಿತಗೊಳಿಸಲಾಗಿತ್ತು. ಬಳಿಕ ಆ ವ್ಯವಸ್ಥೆಯನ್ನು ಪರಿಷ್ಕರಣೆಗೊಳಸಿ ಕಳೆದ ಏ.6 ರಿಂದ ಮತ್ತೆ ನಗರದಲ್ಲಿ ಟೋಯಿಂಗ್ ವಾಹನಗಳಿಗೆ ಸರ್ಕಾರ ಹಸಿರು ನಿಶಾನೆ ತೋರಿತ್ತು. ಆದರೆ ಈ ಬಾರಿ ಸರ್ಕಾರದ ಸೂಚನೆ ಮೇರೆಗೆ ಜಿಬಿಎ ಹಾಗೂ ಸಂಚಾರ ಪೊಲೀಸರ ಜಂಟಿಯಾಗಿ ಟೋಯಿಂಗ್ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಮಾವು, ಹಲಸು ಮೇಳ ಶುರು

ಕಬ್ಬನ್‌ಪಾರ್ಕ್‌ನಲ್ಲಿ ಆಯೋಜನೆ | ರಾಸಾಯನಿಕ ಮುಕ್ತ ಹಣ್ಣು ಮಾರಾಟ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕಾರ್ಬೈಡ್ ಮುಕ್ತ ಮತ್ತು ಸಹಜವಾಗಿ ಮಾಗಿದ ಮಾವಿನ ಹಣ್ಣುಗಳನ್ನು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಆಯೋಜಿಸಿರುವ ಮಾವು-ಹಲಸು ಮೇಳಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಶುಕ್ರವಾರ ಕಬ್ಬನ್ ಉದ್ಯಾನದಲ್ಲಿ ಮೇಳವನ್ನು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಡಾ.ಬಿ.ಸಿ.ಮುದ್ದು ಗಂಗಾಧರ್ ಉದ್ಘಾಟಿಸಿ ಮಾತನಾಡಿ, ಮಾವು-ಹಲಸು ಮೇಳ ಮೇ 17ರವರೆಗೆ ನಡೆಯಲಿದೆ. ರಾಮನಗರ, ಮಂಡ್ಯ, ತುಮಕೂರು ಮತ್ತು ಉತ್ತರ ಕನ್ನಡ ಜಿಲ್ಲೆಗಳ ಮಾವು ಮತ್ತು ಹಲಸು ಬೆಳೆಗಾರರು ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಹವಾಮಾನ ವೈಪರೀತ್ಯ, ಅಕಾಲಿಕ ಮಳೆ ಹಾಗೂ ಗಾಳಿ ಪರಿಣಾಮ ದಿಂದ ಮಾವಿನ ಬೆಳೆ ಹಾನಿಗೊಳಗಾದ ಹಿನ್ನೆಲೆಯಲ್ಲಿ ರೈತರಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಮೇಳ ಆಯೋಜಿಸಲಾಗಿದೆ. ಇದೇ ಮೊದಲ ಬಾರಿಗೆ ಕಬ್ಬನ್ ಪಾರ್ಕ್‌ನಲ್ಲಿ ಈ ಮೇಳ ನಡೆಯುತ್ತಿದ್ದು, ನಗರದ ಗ್ರಾಹಕರು ಉತ್ತಮ ಮತ್ತು ರಾಸಾಯನಿಕ ಮುಕ್ತ ಹಣ್ಣುಗಳನ್ನು ಸವಿಯಲು ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಿದರು.

ಕಬ್ಬನ್‌ಪಾರ್ಕ್‌ನಲ್ಲಿ ನಡೆಯುತ್ತಿರುವ ಮೇಳದಲ್ಲಿ ಮಾವಿಗೆ ಮಾವು ಅಭಿವೃದ್ಧಿ ನಿಗಮ ಯಾವುದೇ ದರವನ್ನು ನಿಗದಿ ಮಾಡಿಲ್ಲ. ರೈತರೇ ರಿಯಾಯಿತಿ ದರದಲ್ಲಿ ಗುಣಮಟ್ಟದ ಹಣ್ಣುಗಳನ್ನು ಮಾರಾಟ ಮಾಡಲಿದ್ದಾರೆ. ಹೊರಗೆ ಸಿಗುವ ದರಕ್ಕಿಂತ ಕಡಿಮೆ ಬೆಲೆ ಇಲ್ಲಿಇರಲಿದೆ. ರೈತರೊಂದಿಗೆ ಗ್ರಾಹಕರು ಕೂಡ ಲಾಭ ಪಡೆಯಬೇಕೆಂಬ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಲಾಲ್‌ಬಾಗ್‌ನಲ್ಲಿಯೂ ಮೇಳಕ್ಕೆ ನಿರ್ಧಾರ: ಬೆಂಗಳೂರು ದಕ್ಷಿಣ, ರಾಮನಗರ, ಕೋಲಾರ ಸೇರಿದಂತೆ ಕೊಪ್ಪಳ, ಹಾವೇರಿ, ಧಾರವಾಡ, ತುಮಕೂರು, ಹಾಸನ ಹಾಗೂ ಬೆಂಗಳೂರು ಗ್ರಾಮಾಂತರ ಭಾಗದ ರೈತರಿಗೆ ಅನುಕೂಲವಾಗುವಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮೇ ಅಂತ್ಯದೊಳಗೆ ಲಾಲ್‌ಬಾಗ್‌ನಲ್ಲಿಯೂ ಮಾವು- ಹಲಸು ಮೇಳ ನಡೆಸಲು ನಿರ್ಧರಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಟಿ.ಆರ್.ವೇದಮೂರ್ತಿ, ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ (ಕಬ್ಬನ್‌ಪಾರ್ಕ್) ಕುಸುಮಾ ಇದ್ದರು.



ಕಬ್ಬನ್ ಉದ್ಯಾನದ ಮೇಳದಲ್ಲಿ ರಾಸಾಯನಿಕ ಮುಕ್ತ ಮಾವು.

ರೈತರು ಬೆಳೆದ ಸ್ಥಳೀಯ ತಳಿಗಳನ್ನು ನಾಗರಿಕರು ಖರೀದಿಸಿ ರೈತರಿಗೆ ಬೆಂಬಲ ನೀಡಬೇಕು. ಇಲ್ಲಿ ಯಾವುದೇ ಮಧ್ಯವರ್ತಿಗಳಿಲ್ಲ. ರೈತರೇ ನೇರವಾಗಿ ಗ್ರಾಹಕರಿಗೆ ಹಣ್ಣು ಮಾರಾಟ ಮಾಡುತ್ತಿದ್ದಾರೆ. ಮೇಳವು ಶುಕ್ರವಾರದಿಂದ 10 ದಿನಗಳ ಕಾಲ ನಡೆಯಲಿದ್ದು, ಸಾರ್ವಜನಿಕರಿಗೆ ವಿವಿಧ ತಳಿಯ ಸ್ಥಳೀಯ ಮಾವು ಹಾಗೂ ಹಲಸಿನ ಹಣ್ಣುಗಳು ಲಭ್ಯವಾಗಲಿವೆ.

• **ಆರ್.ಗಿರೀಶ್** ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ

ಡಾ.ರಾಜ್‌ಗೆ ಮರಣೋತ್ತರ ಭಾರತರತ್ನ ನೀಡಿ: ರಮೇಶ್

ಚಾ.ನಗರ ತಾಲೂಕಿಗೆ ರಾಜ್‌ಕುಮಾರ್ ಹೆಸರು ನಾಮಕರಣ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಡಿಸಿಎಂಗೆ ಮನವಿ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕದ ಸಾಂಸ್ಕೃತಿಕ ರಾಯಭಾರಿ ಡಾ. ರಾಜ್ ಕುಮಾರ್ ಅವರಿಗೆ ಗೌರವ ಸೂಚಕವಾಗಿ ಮರಣೋತ್ತರ 'ಭಾರತ ರತ್ನ' ಪ್ರಶಸ್ತಿ ನೀಡುವ ಸಂಬಂಧ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸು ವುದು, ಚಾಮರಾಜನಗರ ತಾಲೂಕಿಗೆ 'ಡಾ. ರಾಜ್ ಕುಮಾರ್ ತಾಲೂಕು' ಎಂದು ನಾಮಕರಣ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅಖಿಲ ಕರ್ನಾಟಕ ಡಾ.ರಾಜ್ ಕುಮಾರ್‌ಅಭಿಮಾನಿ ಸಂಘಗಳ ಒಕ್ಕೂಟದ ಗೌರವಾಧ್ಯಕ್ಷ ಎನ್.ಆರ್.ರಮೇಶ್ ನೇತೃತ್ವದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಗಿದೆ.

ರಾಜ್ಯ ಸರ್ಕಾರವು 2028-2029ನೇ ಸಾಲಿನಲ್ಲಿ ಡಾ.ರಾಜ್ ಕುಮಾರ್‌ಅವರ ಜನ್ಮ ಶತಮಾನೋತ್ಸ ವವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸ ಬೇಕಿದೆ. ಈ ನಿಟ್ಟಿನಲ್ಲಿ ಡಾ.ರಾಜ್ ಕುಮಾರ್ ಅವರಿಗೆ ಮರಣೋತ್ತರ ಭಾರತ ರತ್ನ ಪ್ರಶಸ್ತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸ ಬೇಕು. ಅವರು ಜನಿಸಿದ ಚಾಮರಾಜನಗರ ತಾಲೂಕಿಗೆ ಡಾ.ರಾಜ್ ಕುಮಾರ್ ತಾಲೂಕು ಎಂದು ನಾಮಕರಣ ಮಾಡಬೇಕು. ಬೆಂಗಳೂರು ನಗರದ ಕೆಂಪೇಗೌಡ ರಸ್ತೆಗೆ ಹೊಂದಿಕೊಂಡಿರುವ ಪ್ರದೇಶ ಮತ್ತು ಚಾಮರಾಜನಗರ ಪ್ರಮುಖ ಸ್ಥಳದಲ್ಲಿ ಡಾ.ರಾಜ್ ಕುಮಾರ್ ಅವರ 100 ಅಡಿ ಎತ್ತರದ ಕಂಚಿನ ಪುತ್ಥಳಿ ಸ್ಥಾಪಿಸಬೇಕು ಎಂದು ಆಗ್ರಹಿಸಿದ್ದಾರೆ.



ಏರ್ಪೋರ್ಟ್ ಟರ್ಮಿನಲ್-2ಕ್ಕೆ ಡಾ.ರಾಜ್ ಹೆಸರಡಿ: ಬೆಂಗಳೂರು ನಗರದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2ಕ್ಕೆ 'ಡಾ. ರಾಜ್ ಕುಮಾರ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ' ಎಂದು ನಾಮಕರಣ ಮಾಡುವ ಸಂಬಂಧ ಕೇಂದ್ರ ಸರ್ಕಾರದ ವಿಮಾನಯಾನ ಇಲಾಖೆ ಪತ್ರ ಬರೆಬೇಕು. ನಗರದ ಮಾಗಡಿ ರಸ್ತೆಯ ಮೆಟ್ರೋ ರೈಲು ನಿಲ್ದಾಣಕ್ಕೆ 'ಡಾ.ರಾಜ್ ಕುಮಾರ್ ನಿಲ್ದಾಣ' ಎಂದು ನಾಮಕರಣ ಮಾಡ ಬೇಕು. ಡಾ.ರಾಜ್ ಕುಮಾರ್ ಅವರ ಜನ್ಮದಿನ ವಾದ ಏ.24ರ ದಿನವನ್ನು 'ಅಂತಾರಾಷ್ಟ್ರೀಯ ಕಲಾವಿದರ ದಿನ' ಎಂದು ಘೋಷಿಸುವಂತೆ ಒತ್ತಾಯಿಸಿದ್ದಾರೆ.

ಡಾ.ರಾಜ್ ಜಯಂತಿ ಕಡ್ಡಾಯಕ್ಕೆ ಆಗ್ರಹ: ಮೈಸೂರಿನಲ್ಲಿ ನಿರ್ಮಾಣವಾಗುತ್ತಿರುವ ಚಿತ್ರ ನಗರಿಗೆ 'ಡಾ.ರಾಜ್ ಕುಮಾರ್ ಚಲನಚಿತ್ರ ನಗರಿ' ಎಂದು ನಾಮಕರಣ ಮಾಡಬೇಕು. ಕನ್ನಡ ಚಿತ್ರರಂಗದ ಚಲನಚಿತ್ರ ಕಾರ್ಮಿಕರಿಗೆ ಮತ್ತು ಅಶಕ್ತ ಪೋಷಕ ಕಲಾವಿದರಿಗೆ 'ಡಾ.ರಾಜ್ ಕುಮಾರ್‌ಸಹಾಯಧನ' ಹೆಸರಿನಲ್ಲಿ ಮಾಸಿಕ ಕನಿಷ್ಠ 5 ಸಾವಿರ ರು. ಸಹಾಯಧನ ನೀಡಬೇಕು. ಪ್ರತಿ ವರ್ಷ ಏ.24ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ರಾಜ್ಯ ಸರ್ಕಾರದಿಂದ 'ಡಾ. ರಾಜ್ ಕುಮಾರ್ ಜಯಂತಿ' ಆಚರಣೆ ಕಡ್ಡಾಯ ಗೊಳಿಸಿ ಆದೇಶಿಸಬೇಕೆಂದು ಒತ್ತಾಯಿಸಿದ್ದಾರೆ.

ಕಂಠೀರವ ಸ್ಟುಡಿಯೋದಲ್ಲಿನ ಸ್ಮಾರಕಗಳ ವೀಕ್ಷಣೆಗೆ ದಿನನಿತ್ಯ ಸಾವಿರಾರು ಅಭಿಮಾನಿಗಳು ಬರುತ್ತಾರೆ. ಹೀಗಾಗಿ, ಹೈಟೆಕ್ ಶೌಚಾಲಯ ಸೇರಿ ಅಗತ್ಯ ಸೌಕರ್ಯಕ್ಕೆ ಆಗ್ರಹಿಸಿದರು.

ನಾಗರಿಕರ ಅಹವಾಲು ತ್ವರಿತ ಇತ್ಯರ್ಥಕ್ಕೆ ಆಯುಕ್ತ ಸೂಚನೆ



ಬೆಂಗಳೂರು: ಉತ್ತರ ನಗರ ಪಾಲಿಕೆಯಲ್ಲಿ ಶುಕ್ರವಾರ ಸಂಜೆ ನಡೆದ ಫೋನ್‌ಇನ್ ಕಾರ್ಯಕ್ರಮದಲ್ಲಿ ನಾಗರಿಕ ರಿಂದ ಬಂದ ಅಹವಾಲುಗಳನ್ನು ತ್ವರಿತವಾಗಿ ಇತ್ಯರ್ಥ ಗೊಳಿಸುವಂತೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್‌ಅಧಿಕಾರಿ ಗಳಿಗೆ ತಿಳಿಸಿದರು. ಬೆಳಗ್ಗೆ 7 ಗಂಟೆಯಿಂದ ಅಮೃತಹಳ್ಳಿ ಮುಖ್ಯರಸ್ತೆಯ ನಗರ ಪಾಲಿಕೆ ಆಯುಕ್ತರ ಕಚೇರಿಯ ಸಭಾಂಗಣ ದಲ್ಲಿ ನಡೆದ ಫೋನ್-ಇನ್ ಕಾರ್ಯಕ್ರಮದಲ್ಲಿ ನಾಗರಿಕರಿಂದ ಮುಖ್ಯವಾಗಿ ರಸ್ತೆ ನಿರ್ವಹಣೆ, ಘನತ್ಯಾಜ್ಯ ಸಮಸ್ಯೆ ಸೇರಿ ಹಲವು ದೂರು ಗಳನ್ನು ಖುದ್ದಾಗಿ ಆಲಿಸಿದ ಆಯುಕ್ತರು, ಅವುಗಳ ತ್ವರಿತ ಪರಿಹಾರಕ್ಕಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಒಟ್ಟು 40 ಕರೆಗಳಲ್ಲಿ 45 ಅಹವಾಲು ದಾಖಲಾಗಿವೆ ಎಂದರು. ಹೆಚ್ಚುವರಿ ಆಯುಕ್ತೆ ಪಲ್ಲವಿ, ಮುಖ್ಯ ಇಂಜಿನಿಯರ್‌ರಾಘವೇಂದ್ರ ಪ್ರಸಾದ್ ಇದ್ದರು.

ಹುಚ್ಚನಪಾಳ್ಯ ಹಾಲು ಉತ್ಪಾದಕರ ಸಂಘದ ಹೊಸ ಕಟ್ಟಡ ಉದ್ಘಾಟನೆ



ಹುಚ್ಚನಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ (ಬಮೂಲ್) ನಿರ್ದೇಶಕ ಸತೀಶ್ ಕಡತನಮಲೆ ಬುಧವಾರ ಉದ್ಘಾಟಿಸಿದರು.

• **ಕನ್ನಡಪ್ರಭ ವಾರ್ತೆ** ಯಲಹಂಕ

ನಗರದ ಯಲಹಂಕ ಕ್ಷೇತ್ರದ ದಾಸನಪುರ ಹೋಬಳಿ ವ್ಯಾಪ್ತಿಯ ಹುಚ್ಚನಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡವನ್ನು ಬೆಂಗಳೂರು ಸಹಕಾರಿ ಹಾಲು ಒಕ್ಕೂಟದ (ಬಮೂಲ್) ನಿರ್ದೇಶಕ ಸತೀಶ್ ಕಡತನಮಲೆ ಬುಧವಾರ ಉದ್ಘಾಟಿಸಿದರು.

ಇದೇ ವೇಳೆ ಹಾಲು ಉತ್ಪಾದಕ ಸದಸ್ಯರಿಗೆ ಸಹಾಯ ಧನದ ಚೆಕ್ ವಿತರಣೆ, ಸಹಕಾರ ಸಂಘದ ಏಳಿಗೆ ಕುರಿತು ಸಂಘದ ಆಡಳಿತ ಮಂಡಳಿ ಅಧ್ಯಕ್ಷರು, ಉಪಾಧ್ಯಕ್ಷರು ನಿರ್ದೇಶಕರೊಂದಿಗೆ ಚರ್ಚೆ ನಡೆಸಿದ ಕಡತನಮಲೆ ಅವರು ಅಗತ್ಯ ಸಲಹೆ ನೀಡಿದರು. ನಂತರ ಮಾತನಾಡಿದ ಅವರು, ನನ್ನ ಕಾಲಾವಧಿಯಲ್ಲಿ ನೂತನ ಡೈರಿ ಕಟ್ಟಡ ನಿರ್ಮಾಣವಾಗಬೇಕೆಂಬ ಇಚ್ಛೆಯನ್ನು ಹುಚ್ಚನಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು ವ್ಯಕ್ತಪಡಿಸಿದ್ದರು. ಅದರಂತೆ ಇಂದು ನೂತನ ಡೈರಿ ಕಟ್ಟಡ ಉದ್ಘಾಟಿಸಲಾಗಿದೆ ಎಂದರು. ಹುಚ್ಚನಪಾಳ್ಯ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು, ಹುಸ್ಕೂರು ಗ್ರಾಮಪಂಚಾಯಿತಿ ಸದಸ್ಯರು ಇದ್ದರು.

ಆರೋಪಕ್ಕೆ ತೆರೆ ಎಳೆದ ಸತೀಶ್: ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಚೇರಿ ಸಿಬ್ಬಂದಿಯ ಮೇಲೆ ಹಲ್ಲೆ ಆರೋಪ ಕುರಿತು ಪ್ರತಿಕ್ರಿಸಿದ ಸತೀಶ್, ನಾನು ವಿದ್ಯಾವಂತನಾಗಿದ್ದು, ಕಚೇರಿ ಸಿಬ್ಬಂದಿಯ ಮೇಲೆ ಹಲ್ಲೆ ಮಾಡಿಲ್ಲ. ಕಚೇರಿಯಲ್ಲಿ ಬ್ರೋಕರ್‌ಗಳ ಹಾವಳಿ ಮಿತಿಮೀರಿದ್ದು, ಪ್ರತಿ ಕೆಲಸಕ್ಕೂ ರೈತರು ಹಣ ನೀಡಬೇಕಾದ ಅನಿವಾರ್ಯತೆ ಇದೆ ಎಂಬ ಮಾಹಿತಿ ಅನ್ವಯ ರೈತರೊಂದಿಗೆ ಕಚೇರಿಗೆ ತೆರಳಿ ಏರು ಧ್ವನಿಯಲ್ಲಿ ಪ್ರಶ್ನಿಸಿದ್ದೇನೆ. ಆದರೆ, ಹಲ್ಲೆ ಮಾಡಿಲ್ಲ ಎಂದು ಆರೋಪಕ್ಕೆ ತೆರೆ ಎಳೆದರು.

ಶಿವಶಂಕರ್ ಹೆಜ್ಜೆ ಗುರುತು ಶಾಶ್ವತ: ಡಾ.ಜಯಮಾಲಾ

ಅಭಿಮಾನಿ ಪುಸ್ತಕ ಬಿಡುಗಡೆ ಮಾಡಿದ ನಟಿ



ಯುವ ನಿರ್ದೇಶಕ ಸಂದೀಪ್ ಸುಂಕದ್, ಚಿತ್ರಸಾಹಿತಿ ಕವಿರಾಜ್ ಅವರಿಗೆ ಸನ್ಮಾನ.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

'ಸಿರಿವಂತನಾದರೂ ಕನ್ನಡ ನಾಡಲ್ಲೆ ಮೆರೆವೆ...'ಹಾಡು ಬರೆದು ಜನಪ್ರಿಯರಾಗಿದ್ದ ಕನ್ನಡ ಚಿತ್ರರಂಗದ ಹಿರಿಯ ನಿರ್ಮಾಪಕ ಮತ್ತು ನಿರ್ದೇಶಕ ಸಿ.ವಿ. ಶಿವಶಂಕರ್‌ಸರಳ ಸಜ್ಜನ ವ್ಯಕ್ತಿ. ಅವರ ಹೆಜ್ಜೆ ಗುರುತುಗಳು ಚಿರಸ್ಮರಣೀಯ ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷೆ ಡಾ.ಜಯಮಾಲಾ ಅಭಿಪ್ರಾಯಪಟ್ಟರು.

ಶುಕ್ರವಾರ ನಗರದ ಗಾಂಧಿಭ ವನದಲ್ಲಿ ಸಿ.ವಿ.ಶಿವಶಂಕರ್ ಕಲಾ ಪ್ರತಿಷ್ಠಾನ ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಜಿ.ಜಿ.ನಾಗರಾಜ್ ಅವರು ಬರೆದ 'ಅಭಿಮಾನಿ' ಪುಸ್ತಕ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು. ಡಾ. ರಾಜ್‌ಕುಮಾರ್ ಅವರ 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು', 'ನಾವಾಡುವ ನುಡಿಯೇ ಕನ್ನಡ ನುಡಿ' ಈ ಎರಡು ಹಾಡುಗಳಿಗೆ ಸರಿ ಸಮಾನಾಗಿ ಸಿ.ವಿ.ಶಿವಶಂಕರ್ ಅವರ 'ಹೋಗದಿರಿ ಸೋದರರೆ, ಹೋಗದಿರಿ ಬಂಧುಗಳೇ' ಹಾಡು ಬಂದಿದೆ. ಇದರಲ್ಲಿರುವ ಭಾವನೆಗಳನ್ನು ಮಾನವೀಯತೆಯಲ್ಲಿ ಬೆರೆಸುವಂತ ಕೆಲಸವನ್ನು ಶಿವಶಂಕರ್ ಮಾಡಿದ್ದಾರೆ ಎಂದು ಶ್ಲಾಘಿಸಿದರು. ಡಾ.ಬಿ.ಸರೋಜಾದೇವಿ ಹೆಸರನ್ನು ರಸ್ತೆಯೊಂದಕ್ಕೆ ನಾಮಕರಣ ಮಾಡುವಂತೆ ಈ ಹಿಂದೆ ಬಿಬಿಎಂಪಿಗೆ ಮನವಿ ಸಲ್ಲಿಸಿದ್ದೆವು. ಪದ್ಮನಾ ಭನಗರದಲ್ಲಿ ಸಿ.ವಿ.ಶಿವಶಂಕರ್ ವಾಸವಿದ್ದ ರಸ್ತೆಗೆ ಅವರ ಹೆಸರನ್ನು ನಾಮಕರಣ ಮಾಡುವಂತೆ ಮತ್ತೊಮ್ಮೆ ಪತ್ರ ಬರೆಯುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದಲ್ಲಿ ಮದನ್ ಪಟೇಲ್, ಹಿರಿಯ ನಟಿ ಗಿರೀಜಾ ಲೋಕೇಶ್, ಹಿರಿಯ ಪತ್ರಕರ್ತ ಸದಾಶಿವ ಶೆಣೈ ಉಪಸ್ಥಿತರಿದ್ದರು.

ರೈತರ ಅಭಿವೃದ್ಧಿಗೆ ಸಹಕಾರ ಸಂಘಗಳು ಶ್ರಮಿಸಲಿ: ಸಿಎಂ

ಸಹಕಾರ ಸಮೃದ್ಧಿ ಸೌಧ ಲೋಕಾರ್ಪಣೆ



ಸಹಕಾರ ಸಮೃದ್ಧಿ ಸೌಧವನ್ನು ಸಿದ್ದರಾಮಯ್ಯ ಅವರು ಲೋಕಾರ್ಪಣೆಗೊಳಿಸಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರೈತರ ಅಭಿವೃದ್ಧಿಗೆ ಸಹಕಾರ ಸಂಘಗಳು ಶ್ರಮಿಸಬೇಕು. ರೈತರ ಬದುಕು ಹಸನು ಮಾಡುವಲ್ಲಿ ಸಹಕಾರ ಕ್ಷೇತ್ರದ ಪಾತ್ರ ಪ್ರಮುಖವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು. ಅಲಿ ಆಸ್ಕರ್ ರಸ್ತೆಯಲ್ಲಿ ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರ ನೂತನ ಆಡಳಿತ ಕಚೇರಿ 'ಸಹಕಾರ ಸಮೃದ್ಧಿ ಸೌಧ' ವನ್ನು ಶುಕ್ರವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ಸಹಕಾರ ರಂಗದ ಪಾತ್ರ ಮಹತ್ವದ್ದಾಗಿದೆ. ಹಾಲು ಉತ್ಪಾದನೆಯ ಮೂಲಕ ರೈತರ ಬಾಳನ್ನು ಹಸನು ಮಾಡುವ ನಿಟ್ಟಿನಲ್ಲಿ ಸಹಕಾರ ರಂಗ ಶ್ರಮಿಸುತ್ತಿದೆ. ಈ ಮೊದಲು ಡೈರಿಗಳು ಮತ್ತು ಮಿಲ್ಕ್ ಯೂನಿಯನ್ ಪ್ರತ್ಯೇಕವಾಗಿದ್ದವು. ನಾನು ಸಹಕಾರ ಸಚಿವನಾಗಿದ್ದಾಗ ಇವೆರಡನ್ನೂ ಒಂದೇ ಸೂರಿನಡಿ ತರಲಾಯಿತು. ಆದ್ದರಿಂದ ಇಷ್ಟೊಂದು ವೇಗದಲ್ಲಿ ರಾಜ್ಯದಲ್ಲಿ ಹಾಲು ಉತ್ಪಾದನೆ ಸಾಧ್ಯವಾಯಿತು ಎಂದರು.

2023 ರಲ್ಲಿ ಈ ಕಟ್ಟಡಕ್ಕೆ ಭೂಮಿ ಪೂಜೆಯನ್ನು ನಾನೇ ನೆರವೇರಿಸಿದ್ದು, 3 ವರ್ಷದಲ್ಲಿ 19.43 ಕೋಟಿ ರು. ವೆಚ್ಚದಲ್ಲಿ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದೆ. ನೆಹರೂ ಅವರು ಪ್ರಧಾನಿ ಆಗಿದ್ದಾಗ ಒಂದು ಊರಿನಲ್ಲಿ ಒಂದು ಶಾಲೆ, ಪಂಚಾಯಿತಿ ಮತ್ತು ಸಹಕಾರ ಸಂಘ ಇರಲೇಬೇಕು. ಆಗ ಮಾತ್ರ ಆ ಊರಿನ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂದಿದ್ದರು. ಪ್ರಸ್ತುತ ಹಾಲಿನ ಸೊಸೈಟಿಗಳಾದ ನಂತರ ಪ್ರತಿ ಊರಿನಲ್ಲಿ ಇದು ಸಾಧ್ಯವಾಗಿದೆ ಎಂದು ಬಣ್ಣಿಸಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಎಚ್.ಕೆ.ಪಾಟೀಲ್, ಶಾಸಕ ರಿಜ್ವಾನ್ ಹರ್ಷದ್, ಬಲ್ಕಿಸ್ ಬಾನು ಇದ್ದರು.

ಪ್ರಧಾನಿ ಆಗಮನ: ನಾಳೆ ನಗರದಲ್ಲಿ ವಾಹನ ಸಂಚಾರ ಮಾರ್ಗ ಬದಲು

ಎಚ್‌ಎಎಲ್ ಏರ್ಪೋರ್ಟ್‌ನಲ್ಲಿ ಬಿಜೆಪಿ ಕಾರ್ಯಕರ್ತರ ಉದ್ದೇಶಿಸಿ ಮೋದಿ ಭಾಷಣ

• **ಕನ್ನಡಪ್ರಭ ವಾರ್ತೆ** ಬೆಂಗಳೂರು



ಪ್ರಧಾನ ಮಂತ್ರಿ ನರೇಂದ್ರ ಮೋದಿ ಕಾರ್ಯಕ್ರಮ ಹಿನ್ನೆಲೆಯಲ್ಲಿ ನಗರದ ಕೆಲವು ಪ್ರದೇಶಗಳಲ್ಲಿ ಸಂಚಾರ ಬದಲಾವಣೆ ಮಾಡಲಾಗಿದ್ದು, ಸಾರ್ವಜನಿಕರು ಸಹಕರಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ. ಕನಕಪುರ ರಸ್ತೆಯ ರವಿಶಂಕರ್‌ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಭಾನುವಾರ ನಗರಕ್ಕೆ ಪ್ರಧಾನಿ ಆಗಮಿಸಲಿದ್ದಾರೆ. ಅದೇ ದಿನ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಬಿಜೆಪಿ ಕಾರ್ಯಕರ್ತರ ಉದ್ದೇಶಿಸಿ ಮಾತನಾಡಲಿದ್ದಾರೆ.

ಕನಕಪುರ ಮುಖ್ಯರಸ್ತೆ ಎ2ಬಿ ಜಂಕ್ಷನ್‌ನಿಂದ ನೈಸ್ ರಸ್ತೆ ಮಾರ್ಗ ಬದಲು

ಮಾರ್ಗ-01: ಕೋಣನಕುಂಟೆ ಕ್ರಾಸ್‌ನಲ್ಲಿ ಬಲ ತಿರುವು ಪಡೆದು ಉತ್ತರಹಳ್ಳಿ ಮೂಲಕ ಕೆಂಗೇರಿ ಮೈಸೂರು ರಸ್ತೆ ತಲುಪಿ, ನಂತರ ಅಗರ, ಬಂಜಾರಪಾಳ್ಯ ರಸ್ತೆ ಮೂಲಕ ಕಗ್ಗಲಿಪುರದಲ್ಲಿ ಬಲಕ್ಕೆ ತಿರುಗಿ ಕನಕಪುರ ರಸ್ತೆ ಸೇರುವುದು.

ಮಾರ್ಗ-02: ಕನಕಪುರ ಮುಖ್ಯರಸ್ತೆ ಎ2ಬಿ ಜಂಕ್ಷನ್‌ನಲ್ಲಿ ಎಡ ತಿರುವು ಪಡೆದು ನಾರಾಯಣ ನಗರ ಜೋಡಿ ರಸ್ತೆ, ಅಂಜನಾಪುರ 80 ಅಡಿ ರಸ್ತೆ ಮೂಲಕ ಬನ್ನೇರುಘಟ್ಟ ಮುಖ್ಯರಸ್ತೆಯ ಮೂಲಕ ಕಗ್ಗಲಿಪುರಕ್ಕೆ ಸಾಗಬಹುದು.

ವಾಹನ ನಿಲುಗಡೆಗೆ ಸ್ಥಳಗಳ ನಿಗದಿ

ಗಣ್ಯರು, ಹಿರಿಯ ಅಧಿಕಾರಿಗಳಿಗೆ- ಹೆಚ್.ಎ.ಎಲ್ ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟ್ ಪಾರ್ಕಿಂಗ್ (ಎಸ್.ಡಿ ರಸ್ತೆ ಜಂಕ್ಷನ್). ಎಚ್‌ಎಎಲ್ ಬಸ್‌ಯಾರ್ಡ್‌ಪಾರ್ಕಿಂಗ್ (ಸುರಂಜನ್ ದಾಸ್ ರಸ್ತೆ). ಸಾರ್ವಜನಿಕರಿಗೆ- 08:30ರ ಒಳಗಾಗಿ ಏರ್ಪೋರ್ಟ್ ಎಕ್ಸಿಟ್ ರಸ್ತೆ ಗೇಟ್ ನಂ 2 ಮಾರ್ಗ ವಿಶ್ವೇಶ್ವರಯ್ಯ ಕಾಲೇಜು ಮೈದಾನದಲ್ಲಿ ಪಾರ್ಕಿಂಗ್ ಮಾಡಬೇಕು.

ಪರ್ಯಾಯ ಮಾರ್ಗಗಳು: ತುಮಕೂರು ರಸ್ತೆಯಿಂದ ನೈಸ್ ರಸ್ತೆ ಮೂಲಕ ಕನಕಪುರ ರಸ್ತೆಗೆ ಹೋಗುವವರು: ಸಿ.ಎಂ.ಟಿ.ಐ ಜಂಕ್ಷನ್ ಬಳಿ ಬಲ ತಿರುವು ಪಡೆದು ರಾಜಕುಮಾರ್‌ಪುಣ್ಯಭೂಮಿ ರಸ್ತೆ ಮೂಲಕ ಸಾಗಬೇಕು. ನಗರದ ಒಳಗಿನಿಂದ ತುಮಕೂರು ರಸ್ತೆ ಮೂಲಕ ಕನಕಪುರ ರಸ್ತೆಗೆ ಹೋಗುವವರು: ಸಿ.ಎಂ.ಟಿ.ಐ ಜಂಕ್ಷನ್ ಬಳಿ ಎಡ ತಿರುವು ಪಡೆದು ರಾಜಕುಮಾರ್ ಪುಣ್ಯಭೂಮಿ ರಸ್ತೆ ಮೂಲಕ ತೆರಳಬೇಕು.

ಮಾಗಡಿ ರಸ್ತೆಯಿಂದ ಕನಕಪುರ ರಸ್ತೆಗೆ: ಸುಮನ್ ಹಳ್ಳಿ ಜಂಕ್ಷನ್ ಬಳಿ ಬಲ ತಿರುವು ಪಡೆದು ಸಾಗಬೇಕು, ನಗರದಿಂದ ಮಾಗಡಿ ರಸ್ತೆ ಮೂಲಕ ಕನಕಪುರ ರಸ್ತೆಗೆ: ಸುಮನ್ ಹಳ್ಳಿ ಜಂಕ್ಷನ್ ಬಳಿ ಎಡ ತಿರುವು ಪಡೆದು ಸಾಗಬೇಕು. ಮೈಸೂರು ರಸ್ತೆ (ಕೆಂಗೇರಿ) ಕನಕಪುರ ರಸ್ತೆಗೆ: ನಾಯಂಡಹಳ್ಳಿ ಜಂಕ್ಷನ್ ಬಳಿ ಬಲ ತಿರುವು ಪಡೆದು ಸಾಗಬೇಕು. ಮೈಸೂರು ರಸ್ತೆ ಮತ್ತು ಹೊಸಕೆರೆಹಳ್ಳಿ ರಸ್ತೆ ಮೂಲಕ ಕನಕಪುರ ರಸ್ತೆಗೆ: ನಾಯಂಡಹಳ್ಳಿ ಜಂಕ್ಷನ್ ಬಳಿ ಎಡ ಮತ್ತು ಬಲ ತಿರುವು ಪಡೆದು ಔಟರ್‌ರಿಂಗ್ ರಸ್ತೆಯಲ್ಲಿ ಸಾಗಬೇಕು. ನೈಸ್ ರಸ್ತೆ ಸೋಂಪುರ ಕ್ಲೋವರ್‌ಲೀಫ್ ಜಂಕ್ಷನ್‌ನಿಂದ ಕನಕಪುರ ಮುಖ್ಯರಸ್ತೆಯವರೆಗೆ: ಮೈಸೂರು ರಸ್ತೆ ಕೆಂಗೇರಿ ಮೂಲಕ ಉತ್ತರಹಳ್ಳಿ, ವಸಂತಪುರ ಕ್ರಾಸ್ ಸೇರಿ ಕೋಣನಕುಂಟೆ ಕ್ರಾಸ್ ಹಾದು ಬನ್ನೇರುಘಟ್ಟ ರಸ್ತೆ ಸೇರಬೇಕು. ಕನಕಪುರ ಮುಖ್ಯರಸ್ತೆ ನೈಸ್ ರಸ್ತೆ ಜಂಕ್ಷನ್‌ನಿಂದ ಸೋಂಪುರ ಕ್ಲೋವರ್‌ಲೀಫ್ ಜಂಕ್ಷನ್‌ವರೆಗೆ: ಎಲೆಕ್ಟ್ರಾನಿಕ್ ಸಿಟಿ ಕಡೆಯಿಂದ ಬರುವವರು ಬಿಡಿಎ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಕೆಎಸ್‌ಐಟಿ ಜಂಕ್ಷನ್ ತಲುಪಿ ಕೆಂಗೇರಿ/ಮೈಸೂರು ರಸ್ತೆ ಸೇರಬೇಕು.

ನಗರದಲ್ಲಿ ತಾತ್ಕಾಲಿಕ ನಿರ್ಬಂಧ ಸ್ಥಳಗಳು

- ಹಳೆ ವಿಮಾನ ನಿಲ್ದಾಣ ರಸ್ತೆಯಿಂದ ಡಿಜಿಸಿಎ ಕಚೇರಿವರೆಗೆ
- ಎಚ್‌ಎಎಲ್ ವಿಮಾನ ನಿಲ್ದಾಣ ಗೇಟ್ ನಂ.30 ರಸ್ತೆಯಲ್ಲಿ ಅಂಬ್ರೆಲಾ ಜಂಕ್ಷನ್‌ನಿಂದ ಗೇಟ್ ನಂ.30ರವರೆಗೆ
- ಹಳೇ ವಿಮಾನ ನಿಲ್ದಾಣ ರಸ್ತೆಯಲ್ಲಿ ಎಸ್‌ಡಿ ರಸ್ತೆ ಜಂಕ್ಷನ್‌ನಿಂದ ಟ್ರಿನಿಟಿ ಜಂಕ್ಷನ್
- ಬೆಳಗ್ಗೆ 10 ರಿಂದ ಮಧ್ಯಾಹ್ನ 3ಗಂಟೆ ತನಕ ನೈಸ್ ರಸ್ತೇಲಿ ನಿರ್ಬಂಧ

ಸಲೀಂ ಅಹಮದ್ ಭೇಟಿಯಾದ ನೂತನ ಶಾಸಕ ಸಮರ್ಥ್ ಶಾಮನೂರು



ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ್ ಅವರು ವಿಧಾನಪರಿಷತ್ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಅವರನ್ನು ಶುಕ್ರವಾರ ಭೇಟಿಯಾಗಿ ಸಮಾಲೋಚನೆ ನಡೆಸಿದರು. ಕೆಪಿಸಿಸಿ ಉಪಾಧ್ಯಕ್ಷ, ಬಿಎಂಟಿಸಿ ಅಧ್ಯಕ್ಷ ವಿ.ಎಸ್. ಆರಾಧ್ಯ, ಬಾಲರಾಜ್, ಇಬ್ರಾಹಿಂ ಖಲೀಲ್, ಸಯ್ಯದ್ ಖಾಲಿದ್ ಇದ್ದರು.

ದಾಸರಹಳ್ಳಿ ಬಿಜೆಪಿ ಯುವ ಮೋರ್ಚಾಕ್ಕೆ ಭರತ್ ಅಧ್ಯಕ್ಷ



ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಎಸ್.ಮುನಿರಾಜು ಮಾರ್ಗದರ್ಶನದಂತೆ ಮಂಡಲ ಅಧ್ಯಕ್ಷ ಎಸ್. ಸೋಮಶೇಖರ್‌ಅವರು ಬಾಗಲಗುಂಟೆಯ ಹಾವನೂರು ಬಡಾವಣೆಯಲ್ಲಿರುವ ಭರತ್ ಸೌಂದರ್ಯ ಅವರನ್ನು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷರಾಗಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಈ ವೇಳೆ ಮಾತನಾಡಿದ ಭರತ್ ಸೌಂದರ್ಯ ಅವರು, ನನಗೆ ಜವಾಬ್ದಾರಿ ನೀಡಿದ ಕ್ಷೇತ್ರದ ಶಾಸಕ ಎಸ್. ಮುನಿರಾಜು ಹಾಗೂ ಪಕ್ಷದ ಎಲ್ಲಾ ಹಿರಿಯ ಮುಖಂಡರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು. ದಾಸರಹಳ್ಳಿ ಕ್ಷೇತ್ರದಲ್ಲಿ ಪಕ್ಷದ ತತ್ವ, ಸಿದ್ಧಾಂತ ಮತ್ತು ಅಭಿವೃದ್ಧಿಯ ಸಂದೇಶವನ್ನು ಮನೆಮನೆಗೂ ತಲುಪಿಸಿ ಯುವಕರ ಶಕ್ತಿ ಮತ್ತು ಸಂಘಟನೆಯ ಬಲವನ್ನು ಮತ್ತಷ್ಟು ವೃದ್ಧಿಸುವ ಕಾರ್ಯದಲ್ಲಿ ಸದಾ ತೊಡಗಿಸಿಕೊಂಡಿರುತ್ತೇನೆ ಹಾಗೂ ಪಕ್ಷ ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ಜವಾಬ್ದಾರಿಯನ್ನು ಪ್ರಾಮಾಣಿಕತೆ ಹಾಗೂ ನಿಷ್ಠೆಯಿಂದ ನಿರ್ವಹಿಸುವುದಾಗಿ ತಿಳಿಸಿದರು. ಈ ಹಿಂದೆ ಯುವಮೋರ್ಚಾ ಪ್ರ. ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಅನುಭವವಿದೆ ಎಂದರು.

ವಿಜಯ್ ಗೆಲುವಿಗೆ ಪಟಾಕಿ ಸಿಡಿಸಿದ್ದಕ್ಕೆ ಜನರಿಂದ ದೂರು

ಬೆಂಗಳೂರು: ತಮಿಳುನಾಡಿನ ವಿಧಾನಸಭಾ ಚುನಾವಣೆಯಲ್ಲಿ ತಮ್ಮ ನೆಚ್ಚಿನ ನಾಯಕನ ಪಕ್ಷ ಗೆಲುವು ಸಾಧಿಸಿದ ಹಿನ್ನಲೆಯಲ್ಲಿ ರಸ್ತೆಯಲ್ಲಿ ಪಟಾಕಿ ಸಿಡಿಸಿ ಸಾರ್ವಜನಿಕರಿಗೆ ತೊಂದರೆ ಮಾಡಿದ್ದಾರೆ ಎಂದು ಆರೋಪಿಸಿ ತಮಿಳು ನಟ ವಿಜಯ್ ಅಭಿಮಾನಿಗಳ ವಿರುದ್ಧ ಕ್ರಮ ಜರುಗಿಸುವಂತೆ ಮಡಿವಾಳ ಪೊಲೀಸರಿಗೆ ಸ್ಥಳೀಯರು ಮನವಿ ಮಾಡಿದ್ದಾರೆ. ಮಡಿವಾಳದ ಸಂಧ್ಯಾ ಚಿತ್ರಮಂದಿರದ ಬಳಿ ವಿಜಯ್ ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದ್ದರು. ಇದರಿಂದ ಸಾರ್ವಜನಿಕ ಓಡಾಟಕ್ಕೆ ತೊಂದರೆ ಉಂಟಾಯಿತು. ಈ ಪ್ರಶ್ನಿಸಿದ್ದಕ್ಕೆ ಕೆಲವರು ಜೋರು ಮಾಡಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಈಜಲು ತೆರಳಿದ್ದ ಇಬ್ಬರು ಯುವಕರು ಕೆರೆಯ ಪಾಲು

ಆನೇಕಲ್: ಗೆಳೆಯರ ಜೊತೆ ಈಜಲು ತೆರಳಿದ್ದ ನಾಲ್ವರು ಯುವಕರ ಪೈಕಿ ಇಬ್ಬರು ಈಜು ಬಾರದೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ ದಾರುಣ ಘಟನೆ ಬನ್ನೇರುಘಟ್ಟ ಠಾಣಾ ವ್ಯಾಪ್ತಿಯ ಬೇಗೇಹಳ್ಳಿಯಲ್ಲಿ ನಡೆದಿದೆ. ಶಹಾಪುರ ತಾಲೂಕಿನ ಆನಂದ್ ಮತ್ತು ಅಂಬರೀಶ್ ಮೃತರು. ಬೇಗೆಹಳ್ಳಿಯ ಪಾದಳ್ ಕೆರೆಯಲ್ಲಿ ಮಧ್ಯಾಹ್ನ ಘಟನೆ ನಡೆದಿದೆ. ಮೃತ ಯುವಕರು ಹಾಸಿಗೆ ತಯಾರು ಮಾಡುವ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎನ್ನಲಾಗಿದೆ. ಎಲೆಕ್ಟ್ರಾನಿಕ್ ಸಿಟಿಯ ಅಗ್ನಿಶಾಮಕ ದಳದವರು ಮೃತ ದೇಹಗಳ ಹುಡುಕಾಟ ನಡೆಸಿದ್ದು, ಸಂಜೆ ಕತ್ತಲು ಆವರಿಸಿಕೊಂಡ ಕಾರಣ ಕಾರ್ಯಾಚರಣೆ ಮೊಟಕುಗೊಳಿಸಿ ಶನಿವಾರ ಬೆಳಗ್ಗೆ ಮೃತ ದೇಹಗಳ ಹುಡುಕಾಟ ಮುಂದುವರಿಸಲಾಗುವುದು ಎಂದು ಅಗ್ನಿಶಾಮಕ ದಳ ಸಿಬ್ಬಂದಿ ತಿಳಿಸಿದ್ದಾರೆ. ಬನ್ನೇರುಘಟ್ಟ ಪೊಲೀಸರು ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ.

ರಾಜ್ಯದಲ್ಲಿ ತಾಪಮಾನ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಕಲಬುರಗಿ	ಬೀದರ್	ರಾಯಚೂರು	ಚಿತ್ರದುರ್ಗ	ವಿಜಯಪುರ
ಗರಿಷ್ಠ	39.8	38.4	37.6	36.4	36.0
ಕನಿಷ್ಠ	26.2	22.6	27.0	23.1	22.5

11 ಜಿಲ್ಲೇಲಿ ಕ್ವಿಂಟಲ್‌ಗೆ ₹7721ರಂತೆ ಸೂರ್ಯಕಾಂತಿ ಖರೀದಿಗೆ ಆದೇಶ

ಬೆಂಗಳೂರು: ಬೆಂಬಲ ಬೆಲೆ ಯೋಜನೆ ಅಡಿ 2025-26ನೇ ಸಾಲಿನ ಹಿಂಗಾರು ಹಂಗಾಮಿನ ಸೂರ್ಯಕಾಂತಿಯನ್ನು ಪ್ರತಿ ಕ್ವಿಂಟಲ್‌ಗೆ 7,721 ರು. ದರದಲ್ಲಿ ಖರೀದಿಗೆ ಸಚಿವ ಶಿವಾನಂದ ಪಾಟೀಲ ಆದೇಶ ಮಾಡಿದ್ದಾರೆ. ಕೇಂದ್ರ ಸರ್ಕಾರದ



ಬೆಂಬಲ ಬೆಲೆ ಮಾರ್ಗಸೂಚಿಗಳ ಅನ್ವಯ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ವಿಜಯಪುರ, ಚಾಮರಾಜನಗರ, ಚಿತ್ರದುರ್ಗ, ಗದಗ, ಕಲಬುರಗಿ, ವಿಜಯನಗರ, ರಾಯಚೂರು ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ತೆರೆಯಲು ನಿರ್ದೇಶನ ನೀಡಿದ್ದಾರೆ. ನಾಫೆಡ್ ಮತ್ತು ಎನ್‌ಸಿಸಿಎಫ್ ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ಹಾಗೂ ಕರ್ನಾಟಕ ಸಹಕಾರಿ ಎಣ್ಣೆಬೀಜ ಬೆಳೆಗಾರರ ಮಹಾ ಮಂಡಳವನ್ನು ರಾಜ್ಯ ಸರ್ಕಾರದ ಖರೀದಿ ಸಂಸ್ಥೆಗಳನ್ನಾಗಿ ನೇಮಿಸಲಾಗಿದೆ.

ನವಜಾತ ಶಿಶುಗಳಲ್ಲಿನ ಜನ್ಮಜಾತ ಮೆಟಬಾಲಿಕ್ ಕಾಯಿಲೆ ಪತ್ತೆಗೆ ಆದೇಶ

ಬೆಂಗಳೂರು: ನವಜಾತ ಶಿಶುಗಳಲ್ಲಿ ಜನ್ಮಜಾತವಾಗಿರುವ ಅಪರೂಪದ ಮೆಟಬಾಲಿಕ್ (ಚಯಾಪಚಯ) ಕಾಯಿಲೆಗಳನ್ನು ಪತ್ತೆ ಹಚ್ಚಲು ಬೆಂಗಳೂರು ನಗರ, ಗ್ರಾಮಾಂತರ ಹಾಗೂ ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಸಾರ್ವತ್ರಿಕ ನವಜಾತ ಶಿಶು ತಪಾಸಣೆ ಯೋಜನೆ ಅನುಷ್ಠಾನಕ್ಕೆ ಆರೋಗ್ಯ ಇಲಾಖೆ ಆದೇಶ ಹೊರಡಿಸಿದೆ. ನವಜಾತ ಶಿಶುಗಳಲ್ಲಿ ಜನ್ಮಜಾತ ಹೈಪೋಥೈರಾಯ್ಡಿಸಮ್, ಅಡ್ರಿನಲ್ ಹೈಪರ್‌ಪ್ಲಾಸಿಯಾ (ಸಿಎಎಚ್), ಗ್ಯಾಲಕ್ಟೋಸಿಮಿಯಾ, ಫಿನೈಲ್ಕೆಟೋನೂರಿಯಾ ಮತ್ತು ಮೆಟಬಾಲಿಕ್ ಅಸ್ವಸ್ಥತೆಗಳನ್ನು ಪತ್ತೆ ಹಚ್ಚಲು ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ 2.58 ಕೋಟಿ ರು.ಗಳನ್ನು ಎನ್‌ಎಚ್‌ಎಂ ಅಡಿ ಒದಗಿಸಲಾಗಿದೆ. ತುಮಕೂರು, ಬಳ್ಳಾರಿ, ಚಿತ್ರದುರ್ಗ, ವಿಜಯನಗರ ಜಿಲ್ಲೆಗಳಿಗೆ 2.79 ಕೋಟಿ ರು. ಅನುದಾನ ನೀಡಲಾಗಿದೆ. ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳದಲ್ಲಿ 5.58 ಕೋಟಿ ರು. ವೆಚ್ಚದಲ್ಲಿ ಪರೀಕ್ಷೆಗೆ ಇಲಾಖೆ ಸೂಚಿಸಿದೆ.

ಪೆನ್ನಾರ್ ನೀರು ನ್ಯಾಯಾಧಿಕರಣ ಸ್ಥಾಪನೆಗಾಗಿ 5 ತಿಂಗಳ ಅವಕಾಶ

ನವದೆಹಲಿ: ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಹರಿಯುವ ಪೆನ್ನಾರ್ ನದಿ ನೀರು ಹಂಚಿಕೆ ಸಂಬಂಧ ನ್ಯಾಯಾಧಿಕರಣ ಸ್ಥಾಪನೆಗೆ ಸೆಪ್ಟೆಂಬರ್ ವರೆಗೂ ಕಾಲಾವಕಾಶ ನೀಡಿ ಆದೇಶ ಹೊರಡಿಸಿದೆ. ಪೆನ್ನಾರ್‌ನದಿ ನೀರು ಹಂಚಿಕೆ ಸಂಬಂಧ ಅರ್ಜಿಯು ನ್ಯಾ.ವಿಕ್ರಮನಾಥ್ ನೇತೃತ್ವದ ದ್ವಿಸದಸ್ಯ ಪೀಠದಲ್ಲಿ ವಿಚಾರಣೆಗೆ ಬಂದಿತ್ತು. ಈ ಹಿಂದಿನ ವಿಚಾರಣೆಯಲ್ಲಿ ಇನ್ನೊಂದು ತಿಂಗಳಿನಲ್ಲಿ ನ್ಯಾಯಾಧಿಕರಣ ಸ್ಥಾಪನೆ ಮಾಡುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು. ಶುಕ್ರವಾರ ವಿಚಾರಣೆ ನಡೆಸಿದ ನ್ಯಾಯಪೀಠದ ಎದುರು ಕೇಂದ್ರ ಜಲಶಕ್ತಿ ಸಚಿವಾಲಯ ಪರ ವಕೀಲರು ಹಾಜರಾಗಿ ಹೆಚ್ಚಿನ ಸಮಯ ಕೋರಿದರು. ಒಂದು ತಿಂಗಳಲ್ಲಿ ನ್ಯಾಯಧಿಕರಣ ಸ್ಥಾಪನೆ ಸಾಧ್ಯವಿಲ್ಲ. ಸಚಿವ ಸಂಪುಟ ಅನುಮೋದನೆಯಾಗಬೇಕು. ನ್ಯಾಯಮಂಡಳಿಯ ಅಧ್ಯಕ್ಷರ ನೇಮಕವಾಗಬೇಕು. ಈ ಪ್ರಕ್ರಿಯೆ ಪೂರ್ಣಗೊಳ್ಳಲು ಆರು ತಿಂಗಳ ಸಮಯಬೇಕು ಎಂದು ಕೋರಿದರು. ಕೇಂದ್ರ ಸರ್ಕಾರದ ಮನವಿಗೆ ಸುಪ್ರೀಂ ಕೋರ್ಟ್ ಒಪ್ಪಿಗೆ ಸೂಚಿಸಿತು.

ಕೊಟ್ಟ ಹಣ ವಾಪಸ್ ಕೇಳಿದ ವೃದ್ಧೆಯ ಕೊಂದು ಶೌಚ ಗುಂಡೀಲಿ ಹೂತಿಟ್ಟ

ಕೆ.ಆರ್.ನಗರ (ಮೈಸೂರು): ತನ್ನಿಂದ ಪಡೆದಿದ್ದ 75000 ರು. ಹಣವನ್ನು ವಾಪಸ್ ಕೊಡುವಂತೆ ಕೇಳಿದ ವೃದ್ಧೆಯನ್ನು ವ್ಯಕ್ತಿಯೊಬ್ಬ ಉಸಿರುಗಟ್ಟಿಸಿ ಕೊಂದು ಶೌಚಾಲಯದ ಯುಜಿಡಿ ಗುಂಡಿಯಲ್ಲಿ ಹೂತು ಹಾಕಿದ ಅಮಾನವೀಯ ಘಟನೆ ಕೆ.ಆರ್.ನಗರ ತಾಲೂಕಿನ ತಿಪ್ಪೂರು ಗ್ರಾಮದಲ್ಲಿ ನಡೆದಿದೆ. ಗೌರಮ್ಮ (90) ಕೊಲೆಯಾದವರು. ಗೌರಮ್ಮ ಅವರಿಂದ 15 ದಿನಗಳ ಹಿಂದೆ ವೀರಭದ್ರ ಎನ್ನುವ ವ್ಯಕ್ತಿ ₹75000 ಹಣ ಪಡೆದಿದ್ದ. ವಾರ ಕಳೆದ ನಂತರ ಹಣ ಕೊಡು ಎಂದು ಗೌರಮ್ಮ ಕೇಳಿದಾಗ, ರಾತ್ರಿ ವೇಳೆ ವೃದ್ಧೆ ಮನೆಗೆ ಹೋಗಿ ಕಪಾಳಕ್ಕೆ ಹೊಡೆದು ಉಸಿರುಗಟ್ಟಿಸಿ ಕೊಂದು ಮನೆಯ ಹಿಂದಿರುವ ಶೌಚಾಲಯದ ಯುಜಿಡಿ ಗುಂಡಿಗೆ ಹಾಕಿ ಮುಚ್ಚಿದ್ದಾನೆ. ಗೌರಮ್ಮ ಕಾಣದಿರುವ ಬಗ್ಗೆ ಮಕ್ಕಳು ಹುಡುಕಾಟ ನಡೆಸಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ವಿಚಾರಣೆ ವೇಳೆ ಗೌರಮ್ಮನನ್ನು ತಾನೇ ಕೊಂದಿದ್ದಾಗಿ ವೀರಭದ್ರ ಒಪ್ಪಿಕೊಂಡಿದ್ದಾನೆ ಎನ್ನಲಾಗಿದೆ.

ಸುದ್ದಿ ಸಿಂಚನ

ಅಂಜನಾದ್ರಿಗೆ ₹2.5 ಕೋಟಿಯ ಚಿನ್ನಾಭರಣ ಅರ್ಪಿಸಿದ ಉದ್ಯಮಿ

ಗಂಗಾವತಿ: ಆಂಜನೇಯನ ಜನ್ಮಸ್ಥಳ ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಅಂಜನಾದ್ರಿ ಬೆಟ್ಟದ ಆಂಜನೇಯಸ್ವಾಮಿಗೆ ಎಎಂಆರ್ ಗ್ರೂಪ್‌ನ ಅಧ್ಯಕ್ಷ ಡಾ.ಎ.ಮಹೇಶ ರೆಡ್ಡಿ ಕುಟುಂಬಸ್ಥರು ಸುಮಾರು ₹2.5 ಕೋಟಿ ಮೌಲ್ಯದ ಚಿನ್ನಾಭರಣ ಅರ್ಪಿಸಿದರು. ಅತ್ಯಂತ ಕಲಾತ್ಮಕವಾಗಿ ವಿನ್ಯಾಸಗೊಳಿಸಿದ ಬಂಗಾರದ ಪ್ರಭಾವಳಿ, ಛತ್ರಿ, ಕಿರೀಟ ಹಾಗೂ ಗದೆಯನ್ನು ಶುಕ್ರವಾರದ ಶುಭ ಮೂಹರ್ತದಲ್ಲಿ ಧಾರ್ಮಿಕ ವಿಧಿ-ವಿಧಾನ ನೆರವೇರಿಸಿ ಆಂಜನೇಯಸ್ವಾಮಿಗೆ ಅರ್ಪಿಸುವ ಮೂಲಕ ತಮ್ಮ ಸೇವೆ ಸಲ್ಲಿಸಿದರು.

ಕಾನೂನು ವಿವಿ ಸಿಂಡಿಕೇಟ್‌ಗೆ 5 ಸದಸ್ಯರ ನಾಮನಿರ್ದೇಶನ

ಬೆಂಗಳೂರು: ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿವಿಯ ಸಿಂಡಿಕೇಟ್ ಸದಸ್ಯರನ್ನಾಗಿ ಐವರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ನಾಮ ನಿರ್ದೇಶನ ಮಾಡಿದ್ದಾರೆ. ರಾಜ್ಯ ಸರ್ಕಾರ ಸಲ್ಲಿಸಿದ್ದ ಹೆಸರುಗಳನ್ನು ರಾಜ್ಯಪಾಲರು ನಾಮನಿರ್ದೇಶನ ಮಾಡಿದ್ದಾರೆ. ಸಾಮಾನ್ಯ ವರ್ಗದಿಂದ ಎಸ್.ಬಿ.ರಾಜಣ್ಣ, ಇತರ ಹಿಂದುಳಿವ ವರ್ಗದಿಂದ ರಮೇಶ್ ಆರ್.ಬಡ್ನೂರ್, ಧ್ರುವ ರಾಜಣ್ಣಪ್ಪನವರ್, ಪರಿಶಿಷ್ಟ ಜಾತಿಯಿಂದ ಲೋಕೇಶ್ ಕೆ.ಜಿ. ಮತ್ತು ಪರಿಶಿಷ್ಟ ಜಾತಿ (ಮಹಿಳೆ) ಕೋಟಾದಿಂದ ಪದ್ಮಾವತಿ ಎಚ್.ಮಾನೆರನ್ನು ನೇಮಿಸಲಾಗಿದೆ.

ಶಿವಮೊಗ್ಗ: ಬೈಕ್ ಡಿಕ್ಕಿ ಹೊಡೆದು ಚಿರತೆ ಸಾವು

ಚೆನ್ನೈ: ತಮಿಳ್ನಾಡು ಸರ್ಕಾರ ರಚಿಸಲು ಎಐಎಡಿಎಂಕೆಯ ಎಡಪ್ಪಾಡಿ ಪಳನಿಸ್ವಾಮಿ ಅವರನ್ನು ಆಹ್ವಾನಿಸುವಂತೆ, ಮಿತ್ರಪಕ್ಷವಾದ ಎಎಂಎಂಕೆಯ ಟಿಟಿವಿ ದಿನಕರನ್ ರಾಜ್ಯಪಾಲರನ್ನು ಕೋರಿದ್ದಾರೆ. ಆದರೆ ತಮ್ಮ ಏಕೈಕ ಶಾಸಕ ಕಾಣೆಯಾಗಿದ್ದಾರೆ ಎಂದೂ ಹೇಳಿದ್ದಾರೆ. 47 ಶಾಸಕರ ಎಐಎಡಿಎಂಕೆ, ಡಿಎಂಕೆ ಜತೆ ಮೈತ್ರಿ ಚರ್ಚೆ ನಡೆಸುತ್ತಿದೆ ಎನ್ನಲಾಗಿದೆ. ಆದರೆ ಬಿಜೆಪಿ ಸಂಗ ತೊರೆದರೆ ಮಾತ್ರ ಮೈತ್ರಿಗೆ ರೆಡಿ ಎಂದು ಡಿಎಂಕೆ ಹೇಳುತ್ತಿದೆ. ಇದು ಮೈತ್ರಿಗೆ ಕಗ್ಗಂಟಾಗಿದೆ. ಇದರ ನಡುವೆ ಎಡಿಎಂಕೆಯ 1 ಬಣ ಟಿವಿಕೆ ಜತೆ ಮೈತ್ರಿಗೆ ಉತ್ಸುಕ ಎಂದು ಗುರುವಾರ ಹೇಳಲಾಗಿತ್ತು. ಆದರೆ ಶುಕ್ರವಾರ ಅವರೆಲ್ಲ ಮೌನವಾಗಿದ್ದಾರೆ.



ಚೆನ್ನೈನಲ್ಲಿ ಕಾಂಗ್ರೆಸ್ ಪ್ರತಿಭಟನೆ

ಡಿಎಂಕೆ-ಕಾಂಗ್ರೆಸ್ ಕಾರ್ಯಕರ್ತರ ಘರ್ಷಣೆ

ಮೈಕಾಡುತುರೈ (ತ.ನಾಡು): ಶುಕ್ರವಾರ ಇಲ್ಲಿ ಡಿಎಂಕೆ ಮತ್ತು ಕಾಂಗ್ರೆಸ್ ಕಾರ್ಯಕರ್ತರ ನಡುವೆ ಹಿಂಸಾತ್ಮಕ ಘರ್ಷಣೆ ಭುಗಿಲೆದ್ದಿದ್ದು, ಪಕ್ಷದ ಧ್ವಜಗಳನ್ನು ಹರಿದು ಬೀದಿಗಳಲ್ಲಿ ಎಸೆಯಲಾಯಿತು. ಕೊನೆಗೆ ಪೊಲೀಶರು ಮಧ್ಯಪ್ರವೇಶಿಸಬೇಕಾಯಿತು.

ತಮಿಳುನಾಡಿನ ಸರ್ಕಾರ ರಚನೆಯಲ್ಲಿ ಡಿಎಂಕೆ ನೇತೃತ್ವದ ಮೈತ್ರಿಕೂಟವನ್ನು ಕಾಂಗ್ರೆಸ್ ತೊರೆದು ಟಿವಿಕೆಗೆ ಬೆಂಬಲ ನೀಡಿದ ಕಾರಣ ಘರ್ಷಣೆ ಭುಗಿಲೆದ್ದಿದೆ.

ರಾಜ್ಯಪಾಲರ ಹುದ್ದೆ ರದ್ದು ಮಾಡಿ: ಕನಿಮೋಳಿ ಆಗ್ರಹ

ಚೆನ್ನೈ: ರಾಜ್ಯಪಾಲರ ಹುದ್ದೆ ಅಗತ್ಯವಿಲ್ಲ ಎಂಬ ಡಿಎಂಕೆಯ ಹಿಂದಿನ ಬೇಡಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಡಿಎಂಕೆ ಸಂಸದೆ ಕನಿಮೋಳಿ ಹೇಳಿದ್ದಾರೆ. ತಮಿಳುನಾಡಿನಲ್ಲಿ ರಾಜ್ಯಪಾಲರು ಸರ್ಕಾರ ರಚನೆಗೆ ಟಿವಿಕೆ ನಾಯಕ ವಿಜಯ್ ಅವರಿಗೆ ಆಹ್ವಾನ ನೀಡುವುದನ್ನು ವಿಳಂಬ ಮಾಡಿದ್ದಕ್ಕೆ ಸುದ್ದಿಗಾರರ ಎದುರು ಪ್ರತಿಕ್ರಿಯೆ ನೀಡಿದ ಕನಿ, 'ರಾಜ್ಯದ ರಾಜಕೀಯ ಹಿತಾಸಕ್ತಿ ಮತ್ತು ರಾಜ್ಯಪಾಲರ ಕಚೇರಿ ನಡುವೆ ಮೊದಲಿನಿಂದಲೂ ತಿಕ್ಕಾಟ ನಡೆದುಕೊಂಡೇ ಬಂದಿದೆ. ರಾಜ್ಯಪಾಲರ ಹುದ್ದೆ ಅಗತ್ಯವಿಲ್ಲ ಎಂಬ ಡಿಎಂಕೆಯ ಹಿಂದಿನ ಬೇಡಿಕೆಯಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದರು.

ಅಸ್ಸಾಂ, ಪ.ಬಂಗಾಳದಲ್ಲೂ ಬಿಜೆಪಿ ಮತಗಳವು: ರಾಗಾ

ಗುರುಗ್ರಾಮ: 'ಬಿಜೆಪಿ ಮತಕಳ್ಳತನಕ್ಕಾಗಿ ಒಂದು ವ್ಯವಸ್ಥೆಯನ್ನೇ ರೂಪಿಸಿದೆ. ಈ ಹಿಂದೆ ಹರ್ಯಾಣ ಚುನಾವಣೆಯಲ್ಲಿ ಮತಚೋರಿ ನಡೆಸಿದ್ದ ಬಿಜೆಪಿ ಈಗ ಅಸ್ಸಾಂ, ಪಶ್ಚಿಮ ಬಂಗಾಳದಲ್ಲಿಯೂ ಅದನ್ನೇ ಮಾಡಿದೆ' ಎಂದು ಲೋಕಸಭಾ ವಿಪಕ್ಷ ನಾಯಕ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಹರ್ಯಾಣದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, 'ಅವರರು ಚುನಾವಣೆಗಳನ್ನು ಕದಿಯುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ, ಲಕ್ಷಾಂತರ ಹೆಸರುಗಳನ್ನು ಅಳಿಸಿ ಹಾಕುತ್ತಾರೆ. ಲಕ್ಷಾಂತರ ಹೆಸರು ಸೇರಿಸುತ್ತಾರೆ. ಚುನಾವಣಾ ಆಯೋಗ, ಆಡಳಿತ ಸಂಸ್ಥೆಗಳು ಅವರ ನಿಯಂತ್ರಣದಲ್ಲಿದೆ' ಎಂದು ಕಿಡಿಕಾರಿದರು.

ಸಿಂದೂರದಲ್ಲಿ ಪಾಕ್‌ಗೆ ಸಾಥ್: ಮೊದಲ ಬಾರಿ ಚೀನಾ ಒಪ್ಪಿಗೆ

ತಾಂತ್ರಿಕ ನೆರವಿನ ಬಗ್ಗೆ ಚೀನಿ ತಂತ್ರಜ್ಞನ ಹೇಳಿಕೆ

ನವದೆಹಲಿ: ಕಳೆದ ವರ್ಷ ಭಾರತ ನಡೆಸಿದ ಆಪರೇಷನ್ ಸಿಂದೂರದಲ್ಲಿ ಪಾಕಿಸ್ತಾನಕ್ಕೆ ತಾಂತ್ರಿಕ ನೆರವು ನೀಡಿದ್ದಾಗಿ ಚೀನಾ ಮೊದಲ ಬಾರಿಗೆ ಸಾರ್ವಜನಿಕವಾಗಿ ಒಪ್ಪಿಕೊಂಡಿದೆ.

ಚೀನಾದ ಸರ್ಕಾರಿ ಟೀವಿ ವಾಹಿನಿಯಾದ ಸಿಸಿಟೀವಿ, ಚೀನಾದ ವಾಯುಯಾನ ಉದ್ಯಮ ನಿಗಮ (ಎವಿಐಸಿ) ಎಂಜಿನಿಯರ್‌ಗಳ ಜತೆ ನಡೆಸಿದ ಸಂದರ್ಶನಗಳನ್ನು ಪ್ರಸಾರ ಮಾಡಿದೆ. ಈ ಸಂದರ್ಶನದಲ್ಲಿ, 4 ದಿನಗಳ ಯುದ್ಧದ ವೇಳೆ ಪಾಕಿಸ್ತಾನಿ ಸಿಬ್ಬಂದಿಯೊಂದಿಗೆ ಕೆಲಸ ಮಾಡಿದ ಬಗ್ಗೆ ಎಂಜಿನಿಯರ್ ಜಾಂಗ್ ಹೆಂಗ್ ಮಾತನಾಡಿದ್ದಾರೆ.

'ನಾವು ಸಪೋರ್ಟ್ ಬೇಸ್‌ನಲ್ಲಿ ನಿರಂತರವಾಗಿ ಫೈಟರ್‌ಜೆಟ್‌ಗಳ ಘರ್ಜನೆ



ವಾಯುದಾಳಿಯ ಸೈರನ್‌ಗಳು ಮೊಳಗುವುದನ್ನು ಕೇಳಿದ್ದೇವೆ' ಎಂದಿದ್ದಾರೆ. ಅಲ್ಲದೆ, 'ಅಲ್ಲಿನ (ಪಾಕ್‌ನಲ್ಲಿನ) ಬೆಳಗ್ಗಿನ ತಾಪಮಾನವು 50 ಡಿಗ್ರಿ ಸೆಲ್ಸಿಯಸ್‌ಗೆ ಸಮೀಪಿಸುತ್ತಿತ್ತು. ದೈಹಿಕವಾಗಿ ಮತ್ತು ಮಾನಸಿಕವಾಗಿ ಆಯಾಸವಾಗುತ್ತಿತ್ತು' ಎಂದಿದ್ದಾರೆ.

ಈ ಹೇಳಿಕೆ ಮೂಲಕ ಯುದ್ಧದ ವೇಳೆ ಪಾಕ್ ಬೆಂಬಲಿಸಿದ್ದಾಗಿ ಚೀನಾ ಒಪ್ಪಿದಂತಾಗಿದೆ. ಪಾಕ್‌ನ ವಾಯು ಪಡೆ ಚೀನಾ ನಿರ್ಮಿತ ಜೆ-10ಸಿಇ ಜೆಟ್‌ಗಳ ಸಮೂಹ ಚಲಾಯಿಸುತ್ತದೆ. ಇದರ ನಿರ್ವಹಣೆಗೆ ಚೀನಾ ತಾಂತ್ರಿಕ ಬೆಂಬಲ ಬೇಕಾಗುತ್ತದೆ.

ಶಾಲೆಗಾಗಿ 800 ವರ್ಷದ ಶಿವ ದೇವಾಲಯ ಧ್ವಂಸ

ಜನತೆ ಕಿಡಿ | ಮರುನಿರ್ಮಾಣ: ಡೀಸಿ ಭರವಸೆ

ವಾರಂಗಲ್: ಸರ್ಕಾರಿ ಶಾಲೆಯ ನಿರ್ಮಾಣಕ್ಕಾಗಿ ಕಾಕತಿಯ ಕಾಲದ 800 ವರ್ಷ ಪುರಾತನ ಶಿವನ ದೇಗುಲವೊಂದನ್ನು ಇಲ್ಲಿನ ಖಾನಾಪುರ ಮಂಡಲದ ಅಶೋಕ ನಗರದಲ್ಲಿ ಧ್ವಂಸಗೊಳಿಸಲಾಗಿದೆ. ಇದಕ್ಕೆ ಸ್ಥಳೀಯರಿಂದ ಭಾರೀ ಆಕ್ರೋಶ ವ್ಯಕ್ತವಾಗಿದ್ದು, ದೂರು ದಾಖಲಾಗಿದೆ.



ಈ ಬಗ್ಗೆ ವಕೀಲ ರಾಮರಾವ್ ಇಮ್ಮನೇನಿ ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರದಲ್ಲಿ ದೂರು ದಾಖಲಿಸಿದ್ದಾರೆ. ಪುರಾತತ್ವ ಮತ್ತು ದತ್ತಿ ಇಲಾಖೆಗಳಿಂದ ಅನುಮೋದನೆ ಪಡೆಯದೆ ಈ ಯೋಜನೆಗೆ ಅನುಮತಿಸಿದ ಅಧಿಕಾರಿಗಳ ವಿರುದ್ಧ ತೆಲಂಗಾಣ ಪರಂಪರೆ ಕಾಯ್ದೆ ಅಡಿ ಕಾನೂನು ಕ್ರಮ ಜರುಗಿಸಬೇಕು ಎಂದು ಕೋರಿದ್ದಾರೆ.

ಜಿಲ್ಲಾಧಿಕಾರಿ ಸ್ಪಷ್ಟನೆ: ದೇಗುಲ ಧ್ವಂಸಕ್ಕೆ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ವಾರಂಗಲ್ ಜಿಲ್ಲಾಧಿಕಾರಿ ಡಾ. ಸತ್ಯ ಶಾರದಾ ಮತ್ತು ನರಸಂಪೇಟೆ ಶಾಸಕ ದೊಂತಿ ಮಾಧವ ರೆಡ್ಡಿ ಪರಿಶೀಲನೆ ನಡೆಸಿದರು. ಬಳಿಕ, 'ಪೊದೆ ತೆರವುಗೊಳಿಸುವಾಗ ಹಳೆಯ ಶಿಥಿಲ ರಚನೆ ಕಂಡುಬಂದಿದ್ದವು ಹಾಗೂ ಅವುಗಳು ಸಂರಕ್ಷಿತ ಸ್ಮಾರಕವೆಂದು ದಾಖಲಾಗಿರಲಿಲ್ಲ. ಅದೇ ಸ್ಥಳದಲ್ಲಿ ದೇವಸ್ಥಾನವನ್ನು ಮರುನಿರ್ಮಾಣ ಮಾಡುತ್ತೇವೆ' ಎಂದು ಹೇಳಿದ್ದಾರೆ.

ದಿಲ್ಲಿಯಲ್ಲಿ ಉಗ್ರರ ದಾಳಿ: ಪಾಕ್ ಸಂಚು ಬಹಿರಂಗ

ದೇವಾಲಯ, ಢಾಬಾ, ಸೇನಾ ನೆಲೆಗಳೇ ಗುರಿ

ನವದೆಹಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ದೆಹಲಿಯ ಜನನಿಬಿಡ ಪ್ರದೇಶಗಳಾದ ದೇವಸ್ಥಾನ, ಢಾಬಾ ಮತ್ತು ಸೇನಾ ನೆಲೆಗಳನ್ನು ಗುರಿಯಾಗಿಸಿ ದಾಳಿ ನಡೆಸಲು ಸಂಚು ರೂಪಿಸಿತ್ತು ಎಂದು ಶಂಕಿತ ಉಗ್ರರ ಬಂಧನದೊಂದಿಗೆ ಬೆಳಕಿಗೆ ಬಂದಿದೆ.



ಕಳೆದ 48 ತಾಸುಗಳಲ್ಲಿ ದಿಲ್ಲಿ ಪೊಲೀಸರು ದೆಹಲಿ ಹಾಗೂ ನೆರೆರಾಜ್ಯಗಳಲ್ಲಿ ನಡೆಸಿದ ಕಾರ್ಯಾಚರಣೆ ವೇಳೆ 482 ಜನರು ಬಂಧಿತರಾಗಿದ್ದರು. ಈ ಪೈಕಿ 9 ಮಂದಿಯ ವಿಚಾರಣೆ ವೇಳೆ ಭಾರೀ ದಾಳಿ ಯೋಜನೆಯ ಸಂಚು ಬೆಳಕಿಗೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ದೆಹಲಿಯ ಐತಿಹಾಸಿಕ ದೇವಾಲಯ, ದಿನವೂ ಸಾವಿರಾರು ಜನ ಭೇಟಿ ನೀಡುವ ದಿಲ್ಲಿ-ಸೋನಿಪತ್ ಹೆದ್ದಾರಿಯಲ್ಲಿರುವ ಢಾಬಾ, ಹರ್ಯಾಣದಲ್ಲಿರುವ ಹಿಸಾರ್ ಸೇನಾ ಶಿಬಿರ, ಉತ್ತರಪ್ರದೇಶದ ಕೆಲ ಪೊಲೀಸ್ ಠಾಣೆಗಳು ಪಾಕಿಸ್ತಾನದ ಶಹಜಾದ್ ಭಟ್ಟಿ ಸಂಘಟನೆಯ ಗುರಿಯಾಗಿದ್ದವು ಎಂದು ಅವು ಹೇಳಿವೆ.

ಒಬ್ಬ ಆರೋಪಿ ದೆಹಲಿಯ ಐತಿಹಾಸಿಕ ದೇವಾಲಯದ ಸರ್ವೇ ನಡೆಸಿ, ಆ ದೇವಾಲಯದ ಛಾಯಾಚಿತ್ರಗಳನ್ನು ಪಾಕಿಸ್ತಾನ ಮೂಲದ ನಿರ್ವಾಹಕರೊಂದಿಗೆ ಹಂಚಿಕೊಂಡಿದ್ದ ಎಂದು ಗೊತ್ತಾಗಿದೆ.

ಟೆನ್ಷನ್ | ಭಾರತದಲ್ಲಿ ಹಂಟು ಆತಂಕ ಸದ್ಯಕ್ಕಿಲ್ಲ: ಸರ್ಕಾರ ಅಭಯ

ಹಂಟು ವೈರಸ್ ಕಾಣಿಸಿಕೊಂಡಿದ್ದ ನೌಕೇಲಿ ಎರಡು ಭಾರತೀಯರು

ಲಂಡನ್: ಹಂಟು ವೈರಸ್ ಕಾಣಿಸಿದ್ದ ಅರ್ಜೆಂಟೀನಾದಿಂದ ಸ್ಪೇನ್‌ನತ್ತ ಹೊರಟಿದ್ದ ಹಡಗಿನಲ್ಲಿ ಇಬ್ಬರು



ಭಾರತೀಯರಿದ್ದಾರೆ ಎಂದು ತಿಳಿದುಬಂದಿದ್ದು, ಅವರ ಆರೋಗ್ಯದ ಬಗ್ಗೆ ಆತಂಕ ಸೃಷ್ಟಿಯಾಗಿದೆ.

150 ಜನರನ್ನು ಹೊತ್ತು ಹೊರಟಿದ್ದ ಹಡಗಿನಿಂದ ಮಾರ್ಗಮಧ್ಯದಲ್ಲಿ ಹಲವರು ಇಳಿದಿದ್ದರು. ಬಳಿಕ ಉಳಿದಿದ್ದವರಲ್ಲಿ 8 ಶಂಕಿತರ ಪೈಕಿ ಐವರಲ್ಲಿ ಸೋಂಕು ದೃಢ ಪಟ್ಟಿತ್ತು. ಇನ್ನೂ ಮೂವರು ಇದೇ ವೈರಸ್‌ನಿಂದಾಗಿ ಪ್ರಾಣವನ್ನೂ ಕಳೆದುಕೊಂಡಿದ್ದರು. ಈಗ ಅವರೆಲ್ಲರ ಜತೆ ಇದ್ದ ಭಾರತೀಯ ಸಿಬ್ಬಂದಿ ಸುರಕ್ಷಿತರಾಗಿದ್ದಾರೆಯೇ ಎಂಬುದು ಸ್ಪಷ್ಟವಿಲ್ಲ. ಮೇ 10ರಂದು ನೌಕೆ ಸ್ಪೇನ್ ತಲುಪಿದ ಬಳಿಕ ಅವರ ಆರೋಗ್ಯಸ್ಥಿತಿಯ ಬಗ್ಗೆ ದೊರೆಯುವ ಸಂಭವವಿದೆ ಎಂದು ಹೇಳಲಾಗಿದೆ.

ಭಾರತಕ್ಕೆ ಸದ್ಯಕ್ಕಿಲ್ಲ ಅಪಾಯ: ಇತ್ತ ಐಸಿಎಂಆರ್ ರಾಷ್ಟ್ರೀಯ ನರವಿಜ್ಞಾನ ಸಂಸ್ಥೆ ನಿರ್ದೇಶಕ ಡಾ. ನವೀನ್ ಕುಮಾರ್ ವೈರಸ್ ಬಗ್ಗೆ ಭಾರತೀಯರು ಸದ್ಯಕ್ಕೆ ಭಯಪಡುವ ಅಗತ್ಯವಿಲ್ಲ. ಇಲಿಯಂತಹ ದಂಶಕಗಳ ತ್ಯಾಜ್ಯಗಳೊಂದಿಗೆ ಸಂಪರ್ಕಕ್ಕೆ ಬಂದವರಲ್ಲಷ್ಟೇ ಕಾಣಿಸಿಕೊಳ್ಳುವ ಈ ಸೋಂಕು ಕೊರೋನಾ ಹರಡುವುದಿಲ್ಲ ಎಂದು ಅಭಯ ನೀಡಿದ್ದಾರೆ.

ಕೊರೋನಾದಷ್ಟು ತೀವ್ರ ಅಲ್ಲ ಎಂದು ಡಬ್ಲ್ಯುಎಚ್‌ಒ ಕೂಡ ಹೇಳಿದೆ.

ಏರಿಕೆ ಬಿಸಿ | ಯುದ್ಧದ ಕಾರಣ ಕಚ್ಚಾತೈಲ ಬೆಲೆ ಗಗನಕ್ಕೆ

ಮೇ 15ರ ಒಳಗೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಸಂಭವ

ನವದೆಹಲಿ: ಯುದ್ಧವು ಉತ್ತುಂಗದಲ್ಲಿದ್ದಾಗ ಏರದಿದ್ದ ಪೆಟ್ರೋಲ್, ಡೀಸೆಲ್ ಬೆಲೆ ಮೇ 15ರ ಒಳಗೆ ಹೆಚ್ಚಳವಾಗಲಿದೆ ಎಂದು ವರದಿಯಾಗಿದೆ.

ಜಾಗತಿಕ ಇಂಧನ ಬೆಲೆ ಏರಿಕೆಯಿಂದಾಗಿ ತೈಲ ಕಂಪನಿಗಳು ಪ್ರತಿ ತಿಂಗಳು 30,000 ಕೋಟಿ ರು.ನಷ್ಟು ನಷ್ಟ ಎದುರಿಸುತ್ತಿರುವ ಕಾರಣ ಈ ಹೆಜ್ಜೆ ಇಡಲಾಗುವುದು ಎಂದು ಮೂಲಗಳು ತಿಳಿಸಿವೆ. ಆದರೆ ಎಷ್ಟು ಏರಿಕೆಯಾಗಲಿದೆ ಎಂಬ ಬಗ್ಗೆ ನಿಖರ ಮಾಹಿತಿಯಿಲ್ಲ.

ಬ್ಯಾರಲ್‌ಗೆ 70 ಡಾಲರ್ ಇದ್ದ ತೈಲ ಬೆಲೆಯು ಯುದ್ಧದಿಂದಾಗಿ 126 ಡಾಲರ್ ಆಗಿರುವ ಹೊರತಾಗಿಯೂ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿ ಬದಲಾವಣೆ ಮಾಡದೆ, ನಷ್ಟವನ್ನು ಕೈಯಿಂದ ಭರಿಸುವಂತೆ ಕಂಪನಿಗಳಿಗೆ ಸೂಚಿಸಲಾಗಿತ್ತು.

₹30,000 ಕೋಟಿ ನಷ್ಟದಲ್ಲಿ ಸಂಸ್ಥೆಗಳು?

ನವದೆಹಲಿ: ಯುದ್ಧದಿಂದಾಗಿ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳಿಗೆ ಮಾರ್ಚ್ ಮಧ್ಯಾವಧಿಯಿಂದ 30 ಸಾವಿರ ಕೋಟಿ ರು. ನಷ್ಟ ಸಂಭವಿಸಿದೆ. ಕೇಂದ್ರ ಪೆಟ್ರೋಲ್, ಡೀಸೆಲ್ ಮೇಲಿನ ಅಬಕಾರಿ ಸುಂಕ 10ರು ಕಡಿತ ಮಾಡದಿದ್ದರೆ 62,500 ಕೋಟಿ ರು. ತಲುಪುತ್ತಿತ್ತು ಎಂದು ಹೇಳಲಾಗಿದೆ.

ಸಂಘರ್ಷ | ಕದನ ವಿರಾಮ ನಡುವೆ ಹಡಗುಗಳ ಮೇಲೆ ದಾಳಿ

ಹೋರ್ಮುಜಲ್ಲಿ ಮತ್ತೆ ಇರಾನ್, ಅಮೆರಿಕ ಪರಸ್ಪರ ಗುಂಡೇಟು

ವಾಷಿಂಗ್ಟನ್: ಕದನ ವಿರಾಮದ ನಡುವೆಯೇ ಇರಾನ್ ಮತ್ತು ಅಮೆರಿಕದ ಪಡೆಗಳು ಗುರುವಾರ ರಾತ್ರಿ ಹಾಗೂ ಶುಕ್ರವಾರ ಸಂಜೆ 2 ಬಾರಿ ಹೋರ್ಮುಜ್ ಜಲಸಂಧಿಯಲ್ಲಿ ಪರಸ್ಪರರ ಮೇಲೆ ದಾಳಿ ನಡೆಸಿವೆ.

ಇಷ್ಟಾದರೂ ಹೋರ್ಮುಜ್ ಜಲಸಂಧಿಯಲ್ಲಿ ಕದನ ವಿರಾಮ ಮುಂದುವರಿಯಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸ್ಪಷ್ಟಪಡಿಸಿದ್ದಾರೆ.

ಪರಸ್ಪರರ ಆರೋಪ ಏನು?: 'ಕದನ ವಿರಾಮ ಉಲ್ಲಂಘಿಸಿ ದಾಳಿ ನಡೆಸಿದೆ. ಯುಎಇಯ ಫುಜೈರಾ ಬಂದರಿನ ಸಮೀಪದಲ್ಲಿರುವ ತನ್ನ ತೈಲ ಟ್ಯಾಂಕರ್, ಕೆಲ ಕಡೆ ನಾಗರಿಕ ಪ್ರದೇಶದ ಮೇಲೆ ಅಮೆರಿಕ ದಾಳಿ ಮಾಡಿದೆ' ಎಂದು ಇರಾನ್ ಆರೋಪಿಸಿದೆ.

ಇದಕ್ಕೆ ಅಮೆರಿಕ ಸೇನೆ ತಿರುಗೇಟು ನೀಡಿದ್ದು, 'ಮೊದಲು ದಾಳಿ ಮಾಡಿದ್ದೇ ಇರಾನ್. ಹೋರ್ಮುಜ್ ಜಲಸಂಧಿಯಲ್ಲಿದ್ದ ನಮ್ಮ ಮೂರು ಯುದ್ಧನೌಕೆಗಳ ಮೇಲೆ ಕ್ಷಿಪಣಿ, ಡ್ರೋನ್ ಮತ್ತು ಬೋಟ್‌ಗಳನ್ನು ಬಳಸಿ ದಾಳಿ ಮಾಡಿದೆ. ಸ್ವರಕ್ಷಣೆಯ ಭಾಗವಾಗಿ ನಾವು ಪ್ರತಿ ದಾಳಿ ನಡೆಸಿದ್ದೇವೆ' ಹೇಳಿದೆ. ಟ್ರಂಪ್ ಕೂಡ ಇದನ್ನೇ ಹೇಳಿದ್ದಾರೆ. ಗ್ಬಂಧನವನ್ನು ಮುರಿಯಲು ಯತ್ನಿಸುತ್ತಿದ್ದ ಇರಾನ್ ಧ್ವಜ ಹೊತ್ತ ಎರಡು ತೈಲ ಟ್ಯಾಂಕರ್‌ಗಳ ಮೇಲೆ ಗುಂಡು ಹಾರಿಸಿ ನಿಷ್ಕ್ರಿಯಗೊಳಿಸಿರುವುದಾಗಿ ಅಮೆರಿಕ ಸೇನೆ ಹೇಳಿದೆ.

ದುಬೈ ಮೇಲೂ ದಾಳಿ: ಶುಕ್ರವಾರ ಬೆಳಗ್ಗೆ ಯುಎಇ ಮೇಲೆ ಇರಾನ್ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದೆ. ನಮ್ಮ ವ್ಯವಸ್ಥೆಯು ಯಶಸ್ವಿಯಾಗಿ ಹೊಡೆದುರುಳಿಸಿವೆ ಎಂದು ಯುಎಇ ತಿಳಿಸಿದೆ.

ಐಪಿಎಲ್-2026 ಅಂಕಪಟ್ಟಿ

ತಂಡಗಳು	ಪಂದ್ಯ	ಗೆಲುವು	ಸೋಲು	ರದ್ದು	ನೆಟ್ ರನ್‌ರೇಟ್	ಅಂಕ
ಹೈದ್ರಾಬಾದ್	11	07	04	00	+0.737	14
ಪಂಜಾಬ್	10	06	03	01	+0.571	13
ಆರ್‌ಸಿಬಿ	10	06	04	00	+1.234	12
ರಾಜಸ್ಥಾನ	10	06	04	00	+0.510	12
ಗುಜರಾತ್	10	06	04	00	-0.147	12
ಚೆನ್ನೈ	10	05	05	00	+0.151	10
ಕೋಲ್ಕತಾ	10	04	05	01	-0.169	09
ಡೆಲ್ಲಿ	11	04	07	00	-1.154	08
ಮುಂಬೈ	10	03	07	00	-0.649	06
ಲಖನೌ	10	03	07	00	-0.934	06

ಸುದ್ದಿ ಸಿಂಚನ

ಚಹಲ್ ವೇಪಿಂಗ್ ವಿವಾದ: ಅರ್ಶ್‌ದೀಪ್ ರೀಲ್ಸ್‌ಗೆ ನಿಷೇಧ ಹೇರಿದ ಬಿಸಿಸಿಐ?

ನವದೆಹಲಿ: ಇತ್ತೀಚೆಗ ಪಂಜಾಬ್ ಕಿಂಗ್ಸ್‌ನ ಅರ್ಶ್‌ದೀಪ್ ಸಿಂಗ್ ಮಾಡಿದ್ದ ರೀಲ್ಸ್‌ನಲ್ಲಿ ಸಹ ಆಟಗಾರ



ಯಜುವೇಂದ್ರ ಚಹಲ್ ವೇಪಿಂಗ್ ದೃಶ್ಯ ಸೆರೆಯಾದ ಬೆನ್ನಲ್ಲೇ ಇನ್ನು ಮುಂದೆ ವ್ಲಾಗ್ ಮಾಡಿ ಸಾಮಾಜಿಕ ತಾಣಗಳಲ್ಲಿ ಅಪ್ಲೋಡ್ ಮಾಡದಂತೆ ಬಿಸಿಸಿಐ ಅರ್ಶ್‌ದೀಪ್‌ಗೆ ನಿರ್ದೇಶಿಸಿದೆ ಎಂದು ವರದಿಯಾಗಿದೆ. ತಂಡದ ಆಟಗಾರರು ಅಹಮದಾಬಾದ್‌ನಿಂದ ಹೈದರಾಬಾದ್‌ಗೆ ಪ್ರಯಾಣಿಸುತ್ತಿದ್ದಾಗ ಅರ್ಶ್‌ದೀಪ್ ಮಾಡಿದ್ದ ರೀಲ್ಸ್‌ನಲ್ಲಿ ಚಹಲ್ ವೇಪಿಂಗ್ ಮಾಡುತ್ತಿದ್ದ ದೃಶ್ಯವಿತ್ತು. ಇದು ಜಾಲತಾಣದಲ್ಲಿ ಭಾರೀ ವಿವಾದಕ್ಕೆ ಕಾರಣವಾಗಿತ್ತು. ಇದಕ್ಕೆ ಆಟಗಾರರಾಗಲಿ, ಪಂಜಾಬ್ ತಂಡವಾಗಲಿ ಯಾರೂ ಪ್ರತಿಕ್ರಿಯೆ ನೀಡಿರಲಿಲ್ಲ. ಈ ನಡುವೆ ಟೂರ್ನಿಯಲ್ಲಿ ಇನ್ನು ಮುಂದೆ ವ್ಲಾಗ್‌ಗಳನ್ನು ಪೋಸ್ಟ್ ಮಾಡದಂತೆ ಬಿಸಿಸಿಐ ನಿರ್ದೇಶನ ನೀಡಿದೆ ಎಂದು ಮೂಲಗಳಿಂದ ತಿಳಿದು ಬಂದಿದೆ.

ಟೆಸ್ಟ್: ಪಾಕಿಸ್ತಾನ ವಿರುದ್ಧ ಬಾಂಗ್ಲಾ 4 ವಿಕೆಟ್‌ಗೆ 301

ಢಾಕಾ: ಪಾಕಿಸ್ತಾನ ವಿರುದ್ಧ ಟೆಸ್ಟ್ ಪಂದ್ಯದಲ್ಲಿ ಮೊದಲ ದಿನವೇ ಬಾಂಗ್ಲಾದೇಶ ದೊಡ್ಡ ಮೊತ್ತ ಕಲೆಹಾಕಿದೆ. ದಿನದಂತ್ಯಕ್ಕೆ ಆತಿಥೇಯ ತಂಡ 4 ವಿಕೆಟ್ ನಷ್ಟದಲ್ಲಿ 301 ರನ್ ಕಲೆಹಾಕಿತು. ನಜ್ಮುಲ್ ಹೊಸೈನ್ ಶಾಂಟೊ 101 ರನ್ ಗಳಿಸಿದರೆ, ಮೊಮಿನುಲ್(91) ಶತಕದಿಂದ ವಂಚಿತರಾದರು. ರಹೀಂ ಔಟಾಗದೆ 48 ರನ್ ಗಳಿಸಿದ್ದಾರೆ.

ಐಪಿಎಲ್ ವೇಳೆ ಹನಿಟ್ರ್ಯಾಪ್ ಬಗ್ಗೆ ಆಟಗಾರರಿಗೆ ಬಿಸಿಸಿಐ ಎಚ್ಚರಿಕೆ!

ಹೋಟೆಲ್, ಬಸ್, ಡಗೌಟ್‌ಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ ನಿರ್ಬಂಧ
10 ಫ್ರಾಂಚೈಸಿಗೆ ಮಾರ್ಗಸೂಚಿ ನೀಡಿದ ಐಪಿಎಲ್ ಆಡಳಿತ ಮಂಡಳಿ

ನವದೆಹಲಿ: ಐಪಿಎಲ್ ವೇಳೆ ಸಂಭಾವ್ಯ ಹನಿಟ್ರ್ಯಾಪ್, ಭದ್ರತಾ ಅಪಾಯ ಹಾಗೂ ಕಾನೂನು ಸಂಕಷ್ಟದ ಬಗ್ಗೆ ಆಟಗಾರರಿಗೆ ಬಿಸಿಸಿಐ ಎಚ್ಚರಿಕೆ ನೀಡಿದೆ. ಈ ಕುರಿತು ಎಲ್ಲಾ 10 ಫ್ರಾಂಚೈಸಿಗಳಿಗೆ ಮಾರ್ಗಸೂಚಿಯನ್ನು ನೀಡಲಾಗಿದ್ದು, ಅನಧಿಕೃತ ವ್ಯಕ್ತಿಗಳ ಪ್ರವೇಶ ಕುರಿತು ಎಚ್ಚರಿಕೆ ಪಾಲಿಸುವಂತೆ ಸ್ಪಷ್ಟ ನಿರ್ದೇಶನ ನೀಡಿದೆ.

ಪಂದ್ಯಗಳ ವೇಳೆ ಡಗೌಟ್, ಹೋಟೆಲ್ ರೂಮ್, ತಂಡದ ಬಸ್ ಸೇರಿ ಹಲವೆಡೆ ಆಟಗಾರರ ಜೊತೆ ಕೆಲ ಅನಧಿಕೃತ ವ್ಯಕ್ತಿಗಳು ಕಾಣಿಸಿಕೊಂಡಿದ್ದನ್ನು ಬಿಸಿಸಿಐ ಗಂಭೀರವಾಗಿ ತೆಗೆದುಕೊಂಡಿದೆ. ಈ ಕುರಿತು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ಅವರು ತಂಡಗಳಿಗೆ ಪತ್ರ ಬರೆದಿದ್ದಾರೆ. 'ಈ ಬಾರಿ ಐಪಿಎಲ್ ವೇಳೆ ಆಟಗಾರರು, ಸಹಾಯಕ ಸಿಬ್ಬಂದಿ ಹಾಗೂ ತಂಡದ ಅಧಿಕೃತರಿಂದ ನಿಯಮ ಉಲ್ಲಂಘನೆ, ಸ್ವೀಕಾರಾರ್ಹವಲ್ಲದ ಘಟನೆಗಳು ನಮ್ಮ ಗಮನಕ್ಕೆ ಬಂದಿದೆ. ಇದನ್ನು ಹಾಗೇ ಬಿಟ್ಟರೆ ಐಪಿಎಲ್ ಹಾಗೂ ಬಿಸಿಸಿಐ ಖ್ಯಾತಿಗೆ ಧಕ್ಕೆ ಉಂಟುಮಾಡಬಹುದು. ಭವಿಷ್ಯದಲ್ಲಿ ಗಂಭೀರ ಸ್ವರೂಪದ ಕಾನೂನು ಸಮಸ್ಯೆ ಹಾಗೂ ಭದ್ರತಾ ಅಪಾಯ ತಂದೊಡ್ಡಬಹುದು' ಎಂದು ಎಚ್ಚರಿಸಿದ್ದಾರೆ.



ಯಾವುದಕ್ಕೆ ನಿರ್ಬಂಧ?

1. ಹೋಟೆಲ್ ರೂಮ್‌ಗೆ ಅನಧಿಕೃತ ವ್ಯಕ್ತಿಗಳ ಪ್ರವೇಶ
2. ಪಂದ್ಯದ ವೇಳೆ ಆಟಗಾರರ ಜೊತೆ ಮಾಲಿಕರ ಭೇಟಿ
3. ಪಂದ್ಯ ನಡೆಯುವ ಸ್ಥಳದಲ್ಲಿ ವೇಪಿಂಗ್
4. ಅನುಮತಿ ಇಲ್ಲದೆ ಹೋಟೆಲ್‌ನಿಂದ ಹೊರಬರುವುದು.

'ಕೆಲ ಆಟಗಾರರು ಹಾಗೂ ಸಹಾಯಕ ಸಿಬ್ಬಂದಿಯು ತಂಡದ ಮ್ಯಾನೇಜರ್‌ಗೆ ತಿಳಿಸದೆ ಅಥವಾ ಅನುಮೋದನೆ ಪಡೆಯದೆ ಅನಧಿಕೃತ ವ್ಯಕ್ತಿಗಳನ್ನು ತಮ್ಮ ಹೋಟೆಲ್ ಕೋಣೆಗೆ ಕರೆಸಿಕೊಂಡಿರುವುದು ಗಮನಕ್ಕೆ ಬಂದಿದೆ. ಇಂತಹ ನಡವಳಿಕೆಗಳನ್ನು ಕೂಡಲೇ ನಿಲ್ಲಿಸಬೇಕು. ಮ್ಯಾನೇಜರ್‌ರಿಂದ ಅನುಮತಿ ಇಲ್ಲದೆ ಅನಧಿಕೃತ ವ್ಯಕ್ತಿಗಳು, ಅತಿಥಿಗಳನ್ನು ತಮ್ಮ ಹೋಟೆಲ್ ಕೋಣೆಗಳಿಗೆ ಆಹ್ವಾನಿಸಬಾರದು. ಉನ್ನತ ಮಟ್ಟದ ಕ್ರೀಡಾ ವಾತಾವರಣದಲ್ಲಿ ಹನಿಟ್ರ್ಯಾಪ್ ಅಪಾಯಗಳ ಬಗ್ಗೆ ಬಿಸಿಸಿಐ ಎಲ್ಲಾ ಫ್ರಾಂಚೈಸಿಗಳ ಗಮನ ಸೆಳೆಯುತ್ತದೆ. ಇಂತಹ ಘಟನೆಗಳು ಗಂಭೀರ ಕಾನೂನು ಉಲ್ಲಂಘನೆಗೆ ಕಾರಣವಾಗುತ್ತದೆ. ಹೀಗಾಗಿ ಫ್ರಾಂಚೈಸಿಗಳು ಎಲ್ಲಾ ಸಮಯದಲ್ಲೂ ಜಾಗರೂಕರಾಗಿರಬೇಕು' ಎಂದು ಸೈಕಿಯಾ ಅವರು ಸೂಚನೆ ನೀಡಿದ್ದಾರೆ.

ಮಾಲೀಕರಿಗೂ ನಿರ್ಬಂಧ: ಇನ್ನು, ಪಂದ್ಯದ ವೇಳೆ ಡಗೌಟ್, ರೂಮ್ ಅಥವಾ ಮೈದಾನದ ಬಳಿಕ ಆಟಗಾರರ ಜೊತೆ ತಂಡಗಳ ಮಾಲಿಕರ ಸಂಭಾಷನೆ, ಆಲಿಂಘನ ಕೂಡಾ ನಿಷೇಧಿಸಲಾಗಿದೆ. ' ಐಪಿಎಲ್ ಫ್ರಾಂಚೈಸಿಗಳ ಮಾಲೀಕರು ಪಂದ್ಯದ ಸಂದರ್ಭಗಳಲ್ಲಿ ಆಟಗಾರರೊಂದಿಗೆ ಸಂವಹನ ನಡೆಸಲು, ಸಮೀಪಿಸಲು, ತಬ್ಬಿಕೊಳ್ಳಲು ಪ್ರಯತ್ನಿಸುವ ನಿದರ್ಶನ ಗಮನಿಸಲಾಗಿದೆ. ಅಂತಹ ನಡವಳಿಕೆಯು ಸದುದ್ದೇಶದಿಂದ ಕೂಡಿದ್ದರೂ, ಅದು ಬಿಸಿಸಿಐ ಶಿಷ್ಟಾಚಾರದ ಉಲ್ಲಂಘನೆಯಾಗಿರುತ್ತದೆ' ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಆ್ಯಲೆನ್ ಶತಕಕ್ಕೆ ನಡುಗಿದ ಡೆಲ್ಲಿ

ಕೆಕೆಆರ್‌ಗೆ ಸತತ ನಾಲ್ಕು ಜಯ | ಡೆಲ್ಲಿಗೆ 7ನೇ ಸೋಲಿನ ಶಾಕ್
ಡೆಲ್ಲಿ 142/4 | ಆ್ಯಲೆನ್ 100*, 14.2 ಓವರಲ್ಲಿ ಗೆದ್ದ ಕೆಕೆಆರ್

ನವದೆಹಲಿ: ಆರಂಭಿಕ 6 ಪಂದ್ಯಗಳಲ್ಲಿ ಗೆಲುವಿನಿಂದ ವಂಚಿತವಾಗಿದ್ದ ಕೋಲ್ಕತಾ, ಈಗ ಸತತ 4ನೇ ಗೆಲುವಿನೊಂದಿಗೆ ಅಂಕಪಟ್ಟಿಯಲ್ಲಿ 7ನೇ ಸ್ಥಾನಕ್ಕೇರಿದೆ. ಶುಕ್ರವಾರ ಡೆಲ್ಲಿ ವಿರುದ್ಧ 8 ವಿಕೆಟ್ ಭರ್ಜರಿ ಗೆಲುವು ಸಾಧಿಸಿದ್ದು, 10 ಪಂದ್ಯಗಳಲ್ಲಿ 9 ಅಂಕ ಸಂಪಾದಿಸಿದೆ. 11ರಲ್ಲಿ 7ನೇ ಸೋಲು ಕಂಡಿರುವ ಡೆಲ್ಲಿ 8 ಅಂಕ ಹೊಂದಿದ್ದು, ಉಳಿದ 3ರಲ್ಲಿ ಗೆದ್ದರೂ ಪ್ಲೇ-ಆಫ್‌ಗೇರುವುದು ಕಷ್ಟ.

ಮೊದಲು ಬ್ಯಾಟ್ ಮಾಡಿದ ಡೆಲ್ಲಿ 8 ವಿಕೆಟ್ ನಷ್ಟದಲ್ಲಿ 142 ರನ್ ಗಳಿಸಿತು. ಪಥುಮ್ ನಿಸ್ಸಾಂಕ(50) ಹಾಗೂ ಅಶುತೋಷ್ ಶರ್ಮಾ(39) ಹೊರತುಪಡಿಸಿ ಇತರ ಬ್ಯಾಟರ್ಸ್ ವಿಫಲರಾದರು. ಕೆ.ಎಲ್.ರಾಹುಲ್ 23 ರನ್ ಕೊಡುಗೆ ನೀಡಿದರು.

ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಕೋಲ್ಕತಾ 14.2 ಓವರ್‌ಗಳಲ್ಲಿ ಕೇವಲ 2 ವಿಕೆಟ್ ನಷ್ಟದಲ್ಲೇ ಗೆಲುವಿನ ದಡ ಸೇರಿತು. ಅಜಿಂಕ್ಯ ರಹಾನೆ(13), ರಘುವಂಶಿ(1) ಬೇಗನೇ ಔಟಾದರೂ, 3ನೇ ವಿಕೆಟ್‌ಗೆ ಜೊತೆಯಾದ ಫಿನ್ ಆ್ಯಲೆನ್-ಕ್ಯಾಮರೂನ್ ಗ್ರೀನ್ ತಂಡವನ್ನು ಗೆಲ್ಲಿಸಿದರು. ಆ್ಯಲೆನ್ 47 ಎಸೆತಕ್ಕೆ ಔಟಾಗದೆ 100 ರನ್ ಸಿಡಿಸಿದರೆ, ಗ್ರೀನ್ 33 ರನ್ ಕೊಡುಗೆ ನೀಡಿದರು.

ಸ್ಕೋರ್: ಡೆಲ್ಲಿ 20 ಓವರಲ್ಲಿ 142/8 (ನಿಸ್ಸಾಂಕ 50, ಅಶುತೋಷ್ 39, ರಾಹುಲ್ 23, ಕಾರ್ತಿಕ್ 2-25), ಕೆಕೆಆರ್ 14.2 ಓವರಲ್ಲಿ 147/2 (ಆ್ಯಲೆನ್ ಔಟಾಗದೆ 100, ಗ್ರೀನ್ ಔಟಾಗದೆ 33, ಅಕ್ಷರ್ 1-27) **ಪಂದ್ಯಶ್ರೇಷ್ಠ: ಫಿನ್ ಆ್ಯಲೆನ್**



ಐಪಿಎಲ್‌ನಲ್ಲಿ ಚೊಚ್ಚಲ ಶತಕ ಸಿಡಿಸಿದ ಆ್ಯಲೆನ್

ತವರಿನಲ್ಲೇ 5 ಸೋಲು!

ಡೆಲ್ಲಿ ತನ್ನ ತವರು ಕ್ರೀಡಾಂಗಣದಲ್ಲೇ ಸತತ 5ನೇ ಸೋಲು ಅನುಭವಿಸಿದೆ. ಇಲ್ಲಿ ಈ ವರ್ಷ ತನ್ನ ಆರಂಭಿಕ ಪಂದ್ಯದಲ್ಲಿ ಮುಂಬೈ ವಿರುದ್ಧ ಡೆಲ್ಲಿ ಗೆದ್ದಿತ್ತು. ಬಳಿಕ ಗುಜರಾತ್, ಪಂಜಾಬ್, ಆರ್‌ಸಿಬಿ, ಚೆನ್ನೈ, ಕೆಕೆಆರ್ ವಿರುದ್ಧ ಸೋತಿದೆ.

ಗುಜರಾತ್ ಚಾಲೆಂಜ್ ಗೆಲ್ಲುತ್ತಾ ರಾಜಸ್ಥಾನ?

ಜೈಪುರ: ಈ ಬಾರಿ ಐಪಿಎಲ್‌ನ ಪ್ಲೇ-ಆಫ್ ರೇಸ್ ರೋಚಕತೆ ದಿನಗಳೆದಂತೆ ಹೆಚ್ಚಾಗುತ್ತಿದ್ದು, ರೇಸ್‌ನಲ್ಲಿ ಮುಂಚೂಣಿಯಲ್ಲಿ 2 ತಂಡಗಳಾದ ರಾಜಸ್ಥಾನ ರಾಯಲ್ಸ್ ಹಾಗೂ ಗುಜರಾತ್ ಟೈಟಾನ್ಸ್ ಶನಿವಾರ ಪರಸ್ಪರ ಸೆಣಸಾಡಲಿವೆ. ಪ್ಲೇ-ಆಫ್ ಸ್ಥಾನ ಭದ್ರಪಡಿಸಲು 2 ತಂಡಗಳು ಹೋರಾಟ ನಡೆಸಲಿವೆ. ಉಭಯ ತಂಡಗಳು ತಲಾ 10 ಪಂದ್ಯಗಳನ್ನಾಡಿದ್ದು, ತಲಾ 12 ಅಂಕ ಹೊಂದಿವೆ. ನೆಟ್ ರನ್ ರೇಟ್ ಆಧಾರದಲ್ಲಿ ರಾಜಸ್ಥಾನ 4ನೇ ಸ್ಥಾನದಲ್ಲಿದ್ದರೆ, ಗುಜರಾತ್ 5ನೇ ಸ್ಥಾನದಲ್ಲಿದೆ. ರಾಯಲ್ಸ್ ಆರಂಭದಲ್ಲಿ ಉತ್ತಮ ಪ್ರದರ್ಶನ ನೀಡಿದ್ದರೂ ಈಗ ಅಸ್ಥಿರ ಆಟವಾಡುತ್ತಿದೆ. ಕಳೆದ 6 ಪಂದ್ಯಗಳ ಪೈಕಿ 4ರಲ್ಲಿ ಸೋತಿದೆ. ಅತ್ತ, ಗುಜರಾತ್ ಕೊನೆ 3 ಪಂದ್ಯದಲ್ಲೂ ಗೆದ್ದಿದ್ದು, ಮತ್ತೊಂದು ಗೆಲುವಿನ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ಸಂಜೆ 7.30ಕ್ಕೆ

ಬಿಹಾರ-ಜಾರ್ಖಂಡ್ ವಲಯದ ಗರಿಷ್ಠ ತೆರಿಗೆ ಪಾವತಿದಾರ ಧೋನಿ!

ನವದೆಹಲಿ: ತಾರಾ ಕ್ರಿಕೆಟಿಗ ಎಂ.ಎಸ್. ಧೋನಿ 2025-26ನೇ ಸಾಲಿನ ಆರ್ಥಿಕ ವರ್ಷದಲ್ಲಿ ಬಿಹಾರ ಮತ್ತು ಜಾರ್ಖಂಡ್‌ನಲ್ಲಿ ಅತಿ



ಹೆಚ್ಚು ತೆರಿಗೆ ಪಾವತಿಸಿದವರ ಪಟ್ಟಿಯಲ್ಲಿ ಅಗ್ರಸ್ಥಾನಿಯಾಗಿ ಹೊರಹೊಮ್ಮಿದ್ದಾರೆ.

ಗುರುವಾರವ ಆದಾಯ ತೆರಿಗೆ ಇಲಾಖೆ ಪ್ರಧಾನ ಆಯುಕ್ತ (ಬಿಹಾರ- ಜಾರ್ಖಂಡ್) ಡಾ. ಡಿ.ಸುಧಾಕರ್ ರಾವ್ ಅವರು ಈ ರಾಜ್ಯಗಳಲ್ಲಿ ಕಳೆದ ವರ್ಷ 20000 ಕೋಟಿ ರು. ಆದಾಯ ತೆರಿಗೆ ಸಂಗ್ರಹಿಸಲಾಗಿದೆ ಎಂದು ಅಂಕಿ ಅಂಶ ನೀಡಿದ್ದರು. ವೈಯಕ್ತಿಕ ತೆರಿಗೆ ಪಾವತಿದಾರರ ಪಟ್ಟಿಯಲ್ಲಿ ಧೋನಿ ಮೊದಲ ಸ್ಥಾನದಲ್ಲಿದ್ದಾರೆ ಎಂದಿದ್ದಾರೆ. ವರದಿಗಳ ಪ್ರಕಾರ, ಧೋನಿ ಬರೋಬ್ಬರಿ 40 ಕೋಟಿ ರು. ತೆರಿಗೆ ಪಾವತಿಸಿದ್ದಾರೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಮಹಿಳಾ ಅಂ-17 ಏಷ್ಯನ್ ಕಪ್ ಫುಟ್ಬಾಲ್: ಭಾರತ ಕ್ವಾರ್ಟರ್‌ಗೆ

2005ರ ಬಳಿಕ ಮೊದಲ ಗೋಲು, ಮೊದಲ ಜಯ!

ಸೂಝೊ(ಚೀನಾ): ಎಎಫ್‌ಸಿ ಅಂಡರ್-17 ಮಹಿಳಾ ಏಷ್ಯನ್ ಕಪ್‌ನಲ್ಲಿ ಮೊದಲ ಬಾರಿ ಭಾರತ ಕ್ವಾರ್ಟರ್ ಫೈನಲ್ ಪ್ರವೇಶಿಸಿ ಹೊಸ ಇತಿಹಾಸ ಬರೆದಿದೆ. ಶುಕ್ರವಾರ ಭಾರತ ತಂಡ ಲೆಬನಾನ್ ವಿರುದ್ಧ 'ಬಿ' ಗುಂಪಿನ ಪಂದ್ಯದಲ್ಲಿ ಲೆಬನಾನ್ ವಿರುದ್ಧ 4-0 ಅಂತರದಲ್ಲಿ ಜಯಗಳಿಸಿತು. ಇದರೊಂದಿಗೆ 3 ಅಂಕ ಪಡೆದ ಭಾರತ, 3ನೇ ಸ್ಥಾನಿಯಾಗಿ ನಾಕೌಟ್ ತಲುಪಿತು. ಇದು 2005ರ ಬಳಿಕ ಭಾರತವು ಟೂರ್ನಿಯಲ್ಲಿ ಗಳಿಸಿದ ಮೊದಲ ಗೋಲು ಮತ್ತು ಮೊದಲ ಗೆಲುವು. ಅಲ್ಲದೆ, ಟೂರ್ನಿಯಲ್ಲಿ ಮೊದಲ ಬಾರಿ ನಾಕೌಟ್ ಪ್ರವೇಶಿಸಿದ ಸಾಧನೆಯನ್ನೂ ಮಾಡಿತು. ಭಾರತ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರೆ ಅಂಡರ್-17 ವಿಶ್ವಕಪ್‌ಗೆ ಅರ್ಹತೆ ಗಿಟ್ಟಿಸಿಕೊಳ್ಳಲಿದೆ.

ತುಮಕೂರು ಓಪನ್: ವೈದೇಹಿ, ಝೀಲ್ ಸೆಮಿಗೆ

ಡಬಲ್ಸ್‌ನಲ್ಲಿ ವೈದೇಹಿ-ಪೋಲೆಂಡ್‌ನ ಜುಜಾನ್ನ ಜೋಡಿ ಫೈನಲ್‌ಗೆ ಪ್ರವೇಶ

ತುಮಕೂರು: ತುಮಕೂರು ಓಪನ್ ಮಹಿಳಾ ಟೆನಿಸ್ ಟೂರ್ನಿಯಲ್ಲಿ ಭಾರತದ ವೈದೇಹಿ ಚೌಧರಿ ಮತ್ತು ಝೀಲ್ ದೇಸಾಯಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಶುಕ್ರವಾರ 3ನೇ ಶ್ರೇಯಾಂಕಿತ ವೈದೇಹಿ 6ನೇ ಶ್ರೇಯಾಂಕಿತೆ, ರಷ್ಯಾದ ಎಕಟೆರಿನಾ ಯಾಶಿನಾ ವಿರುದ್ಧ 6-4, 6-7(5), 7-5 ಸೆಟ್‌ಗಳಿಂದ ಜಯಗಳಿಸಿದರು. 4ನೇ ಶ್ರೇಯಾಂಕದ ಆಟಗಾರ್ತಿ ಝೀಲ್ ಅವರು ರಷ್ಯಾದ ಅರಿನಾ ಅರಿಫುಲ್ಲಿನಾ ವಿರುದ್ಧ 4-6, 6-3, 7-5 ಅಂತರದಲ್ಲಿ ಗೆದ್ದು ಸೆಮೀಸ್ ತಲುಪಿದರು. ಡಬಲ್ಸ್‌ನಲ್ಲಿ ವೈದೇಹಿ-ಪೋಲೆಂಡ್‌ನ ಜುಜಾನ್ನ ಜೋಡಿ ಭಾರತದ ಆಕಾಂಕ್ಷ ದಿಲೀಪ್-ಜಪಾನ್‌ನ ಮಿಚಿಕಾ ಒಜೆಕಿ ವಿರುದ್ಧ 6-1, 6-2ರಲ್ಲಿ ಗೆದ್ದು ಫೈನಲ್ ಪ್ರವೇಶಿಸಿತು.



ಸೆಮಿಫೈನಲ್ ಪ್ರವೇಶಿಸಿದ ಝೀಲ್ ದೇಸಾಯಿ

ಭಾರತದ ಟಾಪ್ 10 ಸ್ಟಾರ್‌ಗಳ ಪಟ್ಟಿಯಲ್ಲಿ ಯಶ್ ರಿಷಬ್





• **ಕನ್ನಡಪ್ರಭ** ಸಿನಿವಾರ್ತೆ

ಭಾರತದ ಖ್ಯಾತ ಸಿನಿಮಾ ಮ್ಯಾಗಜೀನ್ ಆಗಿರುವ ಹಾಲಿವುಡ್ ರಿಪೋರ್ಟರ್ ಇಂಡಿಯಾ ಇದೀಗ ಭಾರತದ ಟಾಪ್ 10 ಸ್ಟಾರ್‌ಗಳ ಪಟ್ಟಿಯನ್ನು ಪ್ರಕಟಿಸಿದ್ದು, ಆ ಪಟ್ಟಿಯಲ್ಲಿ ಕನ್ನಡದ ಯಶ್ ಮತ್ತು ರಿಷಬ್ ಶೆಟ್ಟಿ ಸ್ಥಾನ ಪಡೆದುಕೊಂಡಿದ್ದಾರೆ.

ಬಾಕ್ಸ್ ಆಫೀಸ್‌ನಲ್ಲಿ ಅತಿ ಹೆಚ್ಚು ಗಳಿಕೆ ಮಾಡುವ ಸ್ಟಾರ್‌ಗಳು ಎಂಬ ಆಧಾರದಲ್ಲಿ ಈ ಪಟ್ಟಿ ಸಿದ್ಧಪಡಿಸಿರುವುದಾಗಿ ಪತ್ರಿಕೆ ಹೇಳಿಕೊಂಡಿದೆ. ಈ ಪಟ್ಟಿಯಲ್ಲಿ ಅಲ್ಲು ಅರ್ಜುನ್, ರಾಮ್ ಚರಣ್‌ತೇಜಾ, ಪ್ರಭಾಸ್, ಜೂ. ಎನ್‌ಟಿಆರ್, ರಣಬೀರ್ ಕಪೂರ್, ರಣವೀರ್ ಸಿಂಗ್, ದೀಪಿಕಾ ಪಡುಕೋಣೆ, ಶ್ರದ್ಧಾ ಕಪೂರ್ ಸ್ಥಾನಪಡೆದುಕೊಂಡಿದ್ದಾರೆ. ಈ ಪಟ್ಟಿಯಲ್ಲಿ ಬಹುತೇಕ ದಕ್ಷಿಣ ಭಾರತದ ಸ್ಟಾರ್‌ಗಳೇ ಇರುವುದು ವಿಶೇಷ.

ಬರಲಿದೆ ಧುರಂಧರ್ 3 ಸುಳಿವು ಕೊಟ್ಟ ಸಹ ನಿರ್ಮಾಪಕಿ




ಜ್ಯೋತಿ ದೇಶಪಾಂಡೆ

ವರ್ಷಾಂತ್ಯದಲ್ಲಿ ಸರ್ಪ್ರೈಸ್ ಕೊಡ್ತೀವಿ: ಜ್ಯೋತಿ ದೇಶಪಾಂಡೆ

• **ಕನ್ನಡಪ್ರಭ** ಸಿನಿವಾರ್ತೆ

ಭರ್ಜರಿ ರೂ.3000 ಕೋಟಿ ಕಲೆಕ್ಷನ್ ಮಾಡಿರುವ ಧುರಂಧರ್ 1 ಹಾಗೂ ಧುರಂಧರ್ 2 ಸಿನಿಮಾದ ಮುಂದಿನ ಭಾಗದ ಬಗ್ಗೆ ಇದೀಗ ಸಹ ನಿರ್ಮಾಪಕಿ ಜ್ಯೋತಿ ದೇಶಪಾಂಡೆ ಸುಳಿವು ಕೊಟ್ಟಿದ್ದಾರೆ.

ಸಂದರ್ಶನವೊಂದರಲ್ಲಿ ಅವರು, 'ಈ ವರ್ಷಾಂತ್ಯದ ಹೊತ್ತಿಗೆ ಸರ್ಪ್ರೈಸ್ ಕೊಡ್ತೀವಿ, ಇನ್ನೂ ಕೆಲಸ ಶುರು ಆಗಿಲ್ಲ. ಸದ್ಯಕ್ಕೆ ತಯಾರಿ ನಡೆಯುತ್ತಿದೆ' ಎಂದಿದ್ದಾರೆ. 'ಧುರಂಧರ್' ಸಿನಿಮಾದ ಮೂರನೇ ಭಾಗ ಬರುವ ಸುದ್ದಿಗೆ ಈ ಮಾತು ಪುಷ್ಟಿ ನೀಡಿದೆ. ಆದರೆ ಈ ಹಿಂದೆ ನಿರ್ದೇಶಕ ಆದಿತ್ಯ ಧರ್ ಸೇರಿದಂತೆ ಚಿತ್ರತಂಡದವರು ಮೂರನೇ ಭಾಗ ಬರುವುದಿಲ್ಲ ಎಂದು ಹೇಳಿದ್ದರು. ಆದರೆ ಇದೀಗ ಅಭಿಮಾನಿಗಳು 'ಧುರಂಧರ್ 3'ಗೆ ಪಟ್ಟು ಹಿಡಿದಿರುವ ಕಾರಣ ಅವರು ಮನಸ್ಸು ಬದಲಿಸಿರುವ ಸಾಧ್ಯತೆ ಇದೆ ಎನ್ನಲಾಗಿದೆ.

ಇನ್ನೊಂದೆಡೆ 'ಧುರಂಧರ್ 1 ಹಾಗೂ 2' ಸಿನಿಮಾ ಮೇಕಿಂಗ್ ಅನ್ನು ಇಟ್ಟುಕೊಂಡು ನಿರ್ದೇಶಕ ಆದಿತ್ಯ ಧರ್ ಡಾಕ್ಯುಮೆಂಟರಿ ಮಾಡಲು ಯೋಜಿಸಿದ್ದು, ಅದನ್ನು ಥೇಟರಿಗೆ ರಿಲೀಸ್ ಮಾಡುವ ಬಗ್ಗೆಯೂ ಮಾತು ಕೇಳಿಬಂದಿದೆ.

ಶೂಟಿಂಗ್ ಮೊದಲು ರಂಜನಿ ಪರ್ಸನಲ್ ವಿಚಾರ ಕೇಳಿದ್ದರು

ಮೇಘನಾ ಗಾಂವ್ಕರ್


ರಂಜನಿ ರಾಘವನ್

• **ಕನ್ನಡಪ್ರಭ** ಸಿನಿವಾರ್ತೆ

ರಂಜನಿ ರಾಘವನ್ ನಿರ್ದೇಶನದ 'ಡಿ ಡಿ ಢಿಕ್ಕಿ' ಸಿನಿಮಾದಲ್ಲಿ ಮೇಘನಾ ಗಾಂವ್ಕರ್ ಅಭಿನಯಿಸಿದ್ದಾರೆ. ಚಿತ್ರದಲ್ಲಿ ಅವರು ಪ್ರಗತಿ ಕೌಂಡಿನ್ಯ ಎಂಬ ಲಾಯರ್‌ಪಾತ್ರದಲ್ಲಿ ನಟಿಸಿದ್ದಾರೆ. ಮೇಘನಾ ಜನ್ಮದಿನದಂದು ಅವರ ಪಾತ್ರದ ಘೋಷಣೆಯಾಗಿದೆ.

ಈ ಪಾತ್ರದ ಕುರಿತು ನಿರ್ದೇಶಕಿ ರಂಜನಿ ರಾಘವನ್, 'ಚಿತ್ರದ ಪ್ರಮುಖ ಪಾತ್ರವಿದು. ಸ್ತ್ರೀವಾದಿ ಧೋರಣೆಯ ಆಧುನಿಕ ಮನೋಭಾವದ ಲಾಯರ್ ಪಾತ್ರದಲ್ಲಿ ಮೇಘನಾ ಕಾಣಿಸಿಕೊಂಡಿದ್ದಾರೆ. ಗಂಡ ಹೆಂಡತಿ ಇಬ್ಬರಿಗೂ ಉತ್ತಮ ದುಡಿಮೆ ಸಂಬಳ ಇದ್ದರೂ ತಮಗೆ ಮಕ್ಕಳು ಬೇಡ, ದೇಶದಲ್ಲಿ ಈಗಾಗಲೇ ಜನಸಂಖ್ಯೆ ಏರುತ್ತಿದೆ, ನಾವ್ಯಾಕೆ ಅದನ್ನು ಇನ್ನಷ್ಟು ಹೆಚ್ಚಿಸಬೇಕು ಎಂಬ ಜೆನ್ ಜೀಗಳ ಮನೋಭಾವವನ್ನು ಪ್ರಗತಿ ಪಾತ್ರ ಪ್ರತಿನಿಧಿಸುತ್ತದೆ. ಇದಕ್ಕೆ ಒಂದೊಳ್ಳೆ ರೂಪಾಂತರವೂ ಇದೆ. ಅದಕ್ಕೆ ಮೇಘನಾ ಸೊಗಸಾಗಿ ಜೀವತುಂಬಿದ್ದಾರೆ' ಎಂದಿದ್ದಾರೆ.

ಈ ಬಗ್ಗೆ ಮೇಘನಾ, 'ಈ ಪಾತ್ರವನ್ನು ನಾನು ಒಪ್ಪಿಕೊಂಡ ಮೇಲೆ ಶೂಟಿಂಗ್‌ಗೂ ಮೊದಲು ರಂಜನಿ ಅವರು ನನ್ನ ಹತ್ರ ತುಂಬ ಪರ್ಸನಲ್ ವಿಚಾರಗಳನ್ನು ಕೇಳಿದ್ರು. ಮನೆಯಲ್ಲಿದ್ದಾಗ ನಾನು ಹೇಗಿರ್ತೀನಿ, ನನ್ನ ಯೋಚನೆ ಹೇಗಿರುತ್ತದೆ, ಸಿಟ್ಟು ಬಂದಾಗ ಹೇಗೆ ವರ್ತಿಸುತ್ತೇನೆ, ಖುಷಿಯಲ್ಲಿ ಇದ್ದಾಗ ಹೇಗಿರ್ತೀನಿ ಇತ್ಯಾದಿ. ಶುರುವಲ್ಲಿ ಇವರು ಯಾಕೆ ಇದನ್ನೆಲ್ಲ ಕೇಳ್ತಿದ್ದಾರೆ ಅನಿಸಿತು. ಆಮೇಲೆ ಅವರು ನನ್ನ ಪಾತ್ರಕ್ಕಾಗಿ ಈ ಮಾಹಿತಿ ಕಲೆ ಹಾಕುತ್ತಿದ್ದಾರೆ ಅನ್ನೋದು ತಿಳಿಯಿತು. ಈ ಸಿನಿಮಾ ಒಂದೊಳ್ಳೆ ಅನುಭವ ನೀಡಿದೆ' ಎಂದರು.

ನೆನಪಿರಲಿ ಪ್ರೇಮ್, ಗೋಲ್ಡನ್ ಸ್ಟಾರ್ ಗಣೇಶ್ ಪುತ್ರ ವಿಹಾನ್ ನಟಿಸಿದ್ದಾರೆ. ಜಡೇಶ್ ಕೆ ಹಂಪಿ ನಿರ್ಮಾಪಕರು.




ಯೋಗರಾಜ್ ಭಟ್

ಗಡ್ಡ ವಿಜಿಯ ಸೆಕೆಂಡ್ ಹ್ಯಾಂಡ್ ಕನಸುಗಳು

ಹೀರೋ ಆದ್ರು ಯೋಗರಾಜ್ ಭಟ್

• **ಕನ್ನಡಪ್ರಭ** ಸಿನಿವಾರ್ತೆ


ಗಡ್ಡ ವಿಜಿ

ನಿರ್ದೇಶಕ ಯೋಗರಾಜ್ ಭಟ್ ಹೀರೋ ಆಗಿ ನಟಿಸುತ್ತಿದ್ದಾರೆ. 'ದ್ಯಾವ್ರೇ' ಖ್ಯಾತಿಯ ಗಡ್ಡ ವಿಜಿ ನಿರ್ದೇಶದ ಹೊಸ ಸಿನಿಮಾ 'ಸೆಕೆಂಡ್‌ಹ್ಯಾಂಡ್ ಕನಸುಗಳು' ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ಈ ಹಿಂದೆ 'ದ್ಯಾವ್ರೇ' ಚಿತ್ರದಲ್ಲಿಯೂ ಯೋಗರಾಜ್ ಭಟ್ ಮುಖ್ಯ ಪಾತ್ರ ಮಾಡಿದ್ದರು. ಯೋಗರಾಜ್ ಭಟ್ ಈ ಚಿತ್ರದಲ್ಲಿ ನಟನೆ ಜೊತೆಗೆ ಚಿತ್ರಕಥೆಯನ್ನು ಬರೆಯುತ್ತಿದ್ದಾರೆ.

ಹತ್ತು ವರ್ಷಗಳ ನಂತರ ಮರಳಿ ಬಂದಿರುವ ಗಡ್ಡ ವಿಜಿ, 'ಸೆಕೆಂಡ್‌ಹ್ಯಾಂಡ್ ಕನಸುಗಳು' ಚಿತ್ರದ ಮೂಲಕ 40ರ ವಯಸ್ಸಿನ ವ್ಯಕ್ತಿಯ ಬದುಕಿನ ಸುತ್ತಾ ಸಾಗುವ ಕತೆ ಇದಾಗಿದೆ. ಯೌವ್ವನವನ್ನು ದಾಟಿದ ನಂತರ ಬರುವ ಕನಸುಗಳೇ ಜೀವನದ ಎರಡನೇ ಅವಕಾಶ. ಇಂಥ ಕನಸುಗಳ ಕತೆಯನ್ನು ಈ ಚಿತ್ರದ ಮೂಲಕ ಹೇಳುತ್ತಿದ್ದೇವೆ' ಎಂದು ಹೇಳಿದ್ದಾರೆ.

ಇತರೆ

ಸುದ್ದಿ ಸಿಂಚನ

ಕಾಂಗ್ರೆಸ್ಸಿಂದ ನಮ್ಮನ್ನು ದೂರ ಕೂರಿಸಿ: ಡಿಎಂಕೆ

4ನೇ ಪುಟದಿಂದ

ಈಗ ಇದನ್ನು ಪರಿಗಣಿಸಿ. ಮಂಗಳವಾರ ಮಧ್ಯಾಹ್ನ ನೀವು ಎಂ.ಕೆ. ಸ್ಟಾಲಿನ್‌ಗೆ ಕರೆ ಮಾಡಿ, 'ನಾನು ನಿಮ್ಮೊಂದಿಗಿದ್ದೇನೆ' ಎಂದು ಹೇಳಿದ್ದಿರಿ. ಮರುದಿನ ಬೆಳಿಗ್ಗೆ, ನೀವು ಮೈತ್ರಿಕೂಟದಿಂದ ಪಕ್ಷಾಂತರಗೊಂಡು ನಿಮ್ಮ ವಿರುದ್ಧ ಸಡ್ಡು ಹೊಡೆದಿದ್ದ ಪಕ್ಷಕ್ಕೆ ಹಾರಿದ್ದೀರಿ. ಇದು ಅವಕಾಶವಾದಿ ಮತ್ತು ರಾಜಕೀಯವಾಗಿ ಅನೈತಿಕ' ಎಂದರು.



ಬೇರೆ ಆಸನ ವ್ಯವಸ್ಥೆಗೆ ಬೇಡಿಕೆ: ಈ ನಡುವೆ, ಲೋಕಸಭೆ ಸ್ಪೀಕರ್‌ಗೆ ಪತ್ರ ಬರೆದಿರುವ ಸಂಸದೆ ಕನಿಮೋಳಿ, 'ಡಿಎಂಕೆಗೆ ಸಂಸದರ ಆಸನ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿ. ಕಾಂಗ್ರೆಸ್ ಜತೆಗಿನ ನಮ್ಮ ಮೈತ್ರಿ ಮುರಿದುಬಿದ್ದಿರುವ ವೇಳೆ ಸದನದಲ್ಲಿ ಅವರೊಂದಿಗೆ ಕೂರುವುದು ಸರಿಯಾಗದು' ಎಂದಿದ್ದಾರೆ. ಈತನಕ ಲೋಕಸಭೆಯಲ್ಲಿ ಕಾಂಗ್ರೆಸ್ ಜತೆಗೇ ಡಿಎಂಕೆ ಸಂಸದರು ಕೂರುತ್ತಿದ್ದರು.

ಬಂಗಾಳದಲ್ಲಿ SIRಗೆ ಸೋತ ಮೇಡಂ: ರಾಜ್ಯದಲ್ಲಿ ಕಾಂಗ್ರೆಸ್ ಅಲರ್ಟ್

4ನೇ ಪುಟದಿಂದ

ಅಷ್ಟೂ ಮಂದಿ ಮತದಾನದ ಹಕ್ಕು ಕಳೆದುಕೊಂಡಿದ್ದಾರೆ.

ಇದು ಚುನಾವಣಾ ಕಣದಿಂದ ಮತದಾರರನ್ನು ಹೊರನೂಕುವ, ಪ್ರಜಾಸತ್ತಾತ್ಮಕ ವಿರೋಧಿ, ಅವೈಜ್ಞಾನಿಕ ಪ್ರಕ್ರಿಯೆ. ಹೀಗಾಗಿ ರಾಜ್ಯದಲ್ಲಿ ವ್ಯವಸ್ಥಿತವಾಗಿ ಎಸ್‌ಐಆರ್ ಜಾರಿಗೆ ಹಾಗೂ ಎಸ್‌ಐಆರ್ ಬಳಿಕವೂ ಮತದಾರರ ಹಕ್ಕು ರಕ್ಷಿಸಿಕೊಳ್ಳಲು ಏನು ಮಾಡಬೇಕು ಎಂಬ ಬಗ್ಗೆ ಚರ್ಚಿಸಲಾಯಿತು.

ಸಭೆಯಲ್ಲಿ ವ್ಯಕ್ತವಾದ ಸಲಹೆಗಳೇನು?: ಚುನಾವಣಾ ಆಯೋಗವು 2025ರ ಜೂನ್‌ನಿಂದ ಎಸ್‌ಐಆರ್‌ಅನ್ನು ಪರಿಚಯಿಸಿತು. ಬಳಿಕ ಅದನ್ನು ಅನುಷ್ಠಾನಗೊಳಿಸಿದ ರೀತಿಯಿಂದಾಗಿ ಎಸ್‌ಐಆರ್ ವಿಶ್ವಾಸಾರ್ಹತೆ ಕಳೆದುಕೊಂಡಿದೆ. ಸಂವಿಧಾನದ 324ನೇ ವಿಧಿ ಪ್ರಕಾರ ತನ್ನ ಕರ್ತವ್ಯ ನಿಭಾಯಿಸಲು ಆಯೋಗ ಸಂಪೂರ್ಣ ವಿಫಲವಾಗಿದೆ. ಜನರ ಸಾಂವಿಧಾನಿಕ ಹಾಗೂ ಪ್ರಜಾಸತ್ತಾತ್ಮಕ ಹಕ್ಕು ರಕ್ಷಿಸಲು ಸುಪ್ರೀಂ ಕೋರ್ಟ್ ಸಹ ವಿಫಲವಾಗಿದೆ. ಹೀಗಾಗಿ ರಾಜ್ಯದಲ್ಲಿ ಎಸ್‌ಐಆರ್ ಜಾರಿ ವೇಳೆ ತುಂಬಾ ಎಚ್ಚರಿಕೆ ವಹಿಸಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು. ಈ ಹಂತದಲ್ಲಿ ಎಸ್‌ಐಆರ್ ಜಾರಿಗೆ ಬರುವುದಾದರೂ 3 ತಿಂಗಳ ಬದಲಿಗೆ ಆರು ತಿಂಗಳಿಗೆ ವಿಸ್ತರಿಸಬೇಕು. ತರಾತುರಿಯಲ್ಲಿ ಜಾರಿಗೆ ಬರಬಾರದು. ಎಲ್ಲಾ ಗ್ರಾಪಂ, ವಾರ್ಡ್‌ಗಳಲ್ಲಿ ಮತದಾರರ ನೆರವಿನ ಕೇಂದ್ರ ಸ್ಥಾಪಿಸಬೇಕು.

ಸೂಕ್ತ ದಾಖಲೆ ಇಲ್ಲದ ಜನರಿಗೆ ದಾಖಲೆ ನೀಡಲು ಸರ್ಕಾರ ನೆರವಾಗಬೇಕು. ಡಿಲೀಟ್ ಆದ ಮತದಾರರು ಮನವಿ ಸಲ್ಲಿಸಲು ಸೂಕ್ತ ಸಮಯಾವಕಾಶ ನೀಡಬೇಕು. ಕರ್ನಾಟಕ ಸ್ವಾವಲಂಬಿಯಾದ ಮತದಾರರ ಪಟ್ಟಿ ಸಿದ್ಧಪಡಿಸಿಕೊಳ್ಳಬೇಕು. ಮತದಾರರ ಪಟ್ಟಿ ಪರಿಷ್ಕರಿಸುವುದನ್ನು ಗಂಭೀರವಾಗಿ ಪರಿಗಣಿಸಬೇಕು.

ಇದನ್ನು ಸಮರ್ಥ ರೀತಿಯಲ್ಲಿ ಕಾರ್ಯರೂಪಕ್ಕೆ ತರಬೇಕು. ಸೋಷಿಯಲ್ ಆಡಿಟಿಂಗ್ ಪದ್ಧತಿ ಬಳಸಿ ರಾಜ್ಯದ ಮತದಾರರ ಪಟ್ಟಿ ಪರಿಷ್ಕರಿಸಬೇಕು. ಈ ನಾಲ್ಕು ಅಂಶಗಳನ್ನೂ ಗಮನದಲ್ಲಿಟ್ಟು ರಾಜ್ಯ ಸರ್ಕಾರ ಕ್ರಿಯಾಯೋಜನೆ ರೂಪಿಸಬೇಕು ಎಂದು ಸಭೆಯಲ್ಲಿ ಭಾಗವಹಿಸಿದ್ದವರು ಸಲಹೆ ನೀಡಿದರು.

ಮತ್ತೊಂದು ಸುತ್ತಿನ ಸಭೆ ಭರವಸೆ: ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಎಲ್ಲ ಶಾಸಕರು ಹಾಗೂ ಪರಾಜಿತ ಅಭ್ಯರ್ಥಿಗಳೊಂದಿಗೆ ಶೀಘ್ರದಲ್ಲೇ ವಿಸ್ತೃತ ಸಭೆ ಕರೆಯುತ್ತೇವೆ. ಎಲ್ಲರ ಜೊತೆಯೂ ಸಮಾಲೋಚನೆ ನಡೆಸಿ, ನಂತರ ನಿಮ್ಮೊಟ್ಟಿಗೆ ಮತ್ತೊಮ್ಮೆ ಮಾತನಾಡುತ್ತೇನೆ ಎಂದು ಭರವಸೆ ನೀಡಿರುವುದಾಗಿ ಮೂಲಗಳು ತಿಳಿಸಿವೆ.

ಸಭೆಯಲ್ಲಿ ರಾಜಕೀಯ ವಿಶ್ಲೇಷಕ ಹಾಗೂ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಪತಿ ಪರಕಾಲ ಪ್ರಭಾಕರ್, ಕರ್ನಾಟಕ ಮುಸ್ಲಿಂ ಮುತ್ತಹಿದ ಮಹಾಜ್‌ನ ಮೊಹಮ್ಮದ್ ಯೂಸುಫ್ ಕನ್ನಿ, ಮಾಜಿ ಸಚಿವರೂ ಆದ ಲೇಖಕಿ ಬಿ.ಟಿ. ಲಲಿತಾ ನಾಯ್ಕ್, ಮತದಾನ ಹಕ್ಕು ಚಳವಳಿಯ ಥಾಮಸ್ ಫ್ರಾಂಕೋ, ನನ್ನ ಮತ ನನ್ನ ಹಕ್ಕು ಹೋರಾಟ ವೇದಿಕೆಯ ವಿನಯ್ ಶ್ರೀನಿವಾಸ್, ರಾಜ್ಯ ರೈತ ಸಂಘದ ಮುಖಂಡರಾದ ಬಡಗಲಪುರ ನಾಗೇಂದ್ರ, ಕರ್ನಾಟಕ ಕೋಮುಸೌಹಾರ್ದ ವೇದಿಕೆ ಸೇರಿದಂತೆ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಹಾಜರಿದ್ದರು.

ಬಿಎಸ್‌ವೈ ಅಭಿಮಾನೋತ್ಸಾಹ!

4ನೇ ಪುಟದಿಂದ

ಪಶ್ಚಿಮ ಬಂಗಾಳದಲ್ಲಿ ನೂತನ ಬಿಜೆಪಿ ಸರ್ಕಾರದ ಪ್ರಮಾಣ ವಚನ ಕಾರ್ಯಕ್ರಮ ಮುಗಿಸಿಕೊಂಡು ಅಮಿತ್ ಶಾ ಸಂಜೆ 4 ಗಂಟೆಗೆ ಚಿತ್ರದುರ್ಗಕ್ಕೆ ಆಗಮಿಸಲಿದ್ದಾರೆ.

ಬೃಹತ್ ವೇದಿಕೆ ಸಿದ್ಧ: ಅಭಿಮಾನೋತ್ಸವ ಕಾರ್ಯಕ್ರಮಕ್ಕೆ 112 ಅಡಿ ಉದ್ದ ಹಾಗೂ 40 ಅಡಿ ಅಗಲ, 10 ಅಡಿ ಎತ್ತರದ ಬೃಹತ್ ವೇದಿಕೆ ನಿರ್ಮಿಸಲಾಗಿದೆ. 150ಕ್ಕೂ ಹೆಚ್ಚು ಕಾರ್ಮಿಕರ ಶ್ರಮದಿಂದ ಸುಂದರ ಹಾಗೂ ವಿಶಾಲವಾದ ವೇದಿಕೆ ತಯಾರಾಗಿದೆ. ಸುಮಾರು 30ಕ್ಕೂ ಹೆಚ್ಚು ಎಲ್‌ಇಡಿ ವಾಲ್‌ಗಳನ್ನು ಅಳವಡಿಸಿದ್ದು, ಲಕ್ಷಕ್ಕೂ ಹೆಚ್ಚು ಆಸನದ ವ್ಯವಸ್ಥೆ ಮಾಡಿ ಸಾರ್ವಜನಿಕರಿಗೆ ಕಾರ್ಯಕ್ರಮ ವೀಕ್ಷಣೆಗೆ ಅನುವು ಮಾಡಿಕೊಡಲಾಗಿದೆ. ನಾಡಿನ ವಿವಿಧ ಮಠಗಳ ಸ್ವಾಮೀಜಿಗಳಿಗೆ, ಶಾಸಕರು, ಮಾಜಿ ಶಾಸಕರು, ಮಾಜಿ ಸಚಿವರಿಗೆ ಹಾಗೂ ಸಾರ್ವಜನಿಕರಿಗೆ ಪ್ರತ್ಯೇಕ ಸಭಾಂಗಣ ವ್ಯವಸ್ಥೆ ಮಾಡಲಾಗಿದೆ.10 ಲಕ್ಷ ನಿರೀಕ್ಷೆ:

ಬೃಹತ್ ವೇದಿಕೆಯಲ್ಲಿ ಅತಿಥಿಗಳಿಗೆ ಮೊದಲ ಸಾಲಿನಲ್ಲಿ 25 ಮತ್ತು ಅವುಗಳ ಹಿಂಭಾಗ 25 ಆಸನಗಳನ್ನು ಹಾಕಲಾಗಿದೆ. ಸುಮಾರು ಹತ್ತು ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಬೆಂಗಳೂರು, ಚಿತ್ರದುರ್ಗ, ಮೈಸೂರು ಕಡೆಯ 5 ತಂಡಗಳು ಅಣಿಗೊಳಿಸಿರುವ ಹಲವು ಕೌಂಟರ್‌ಗಳಲ್ಲಿ ಕಾರ್ಯಕ್ರಮಕ್ಕೆ ಬರುವ ಸಾರ್ವಜನಿಕರಿಗೆ ಅಡುಗೆ ತಯಾರಿ ಮಾಡಲಾಗುತ್ತಿದೆ. ಒಂದೊಂದು ಕೌಂಟರ್‌ನಲ್ಲಿ ಅಡುಗೆ ಭಟ್ಟರು ಜೊತೆಗೆ ಸಹಾಯಕರು ಸೇರಿ ಸುಮಾರು 250ಕ್ಕೂ ಅಧಿಕ ಮಂದಿ ಅಡುಗೆ ತಯಾರಿಕೆಯಲ್ಲಿ ನಿರತರಾಗಿದ್ದಾರೆ.

ಐದು ಕೌಂಟರ್‌ಸೇರಿ ಸಾವಿರಾರು ಜನರು ಅಡುಗೆ ತಯಾರಿಕೆಗೆ ಕೆಲಸ ಮಾಡುತ್ತಿದ್ದಾರೆ. ಯಲಹಂಕ ಶಾಸಕ ವಿಶ್ವನಾಥ್, ಊಟದ ಉಸ್ತುವಾರಿ ವಹಿಸಿದ್ದಾರೆ. ಕಾರ್ಯಕ್ರಮಕ್ಕೆ ಬರುವ ಕಾರ್ಯಕರ್ತರಿಗೆ, ಅಭಿಮಾನಿಗಳಿಗೆ ಮೊಸರನ್ನ, ಪಲಾವ್ ಹಾಗೂ ಮೈಸೂರು ಪಾಕ್ ನೀಡಲು ತಯಾರಿ ನಡೆದಿದೆ. ಚಿತ್ರದುರ್ಗದ ಸುತ್ತಮುತ್ತಲಿನ ಹಳ್ಳಿಗಳ ನೂರಾರು ಯುವಕರನ್ನು ಕೆಲಸಕ್ಕೆ ಪಡೆದು ಅಡುಗೆ, ಶಾಮಿಯಾನ, ಕುರ್ಚಿಗಳನ್ನು ಹಾಕಲಾಗುತ್ತಿದೆ.

ಬಂದೋಬಸ್ತ್: ಕಾರ್ಯಕ್ರಮದ ಬಂದೋಬಸ್ತ್‌ಗಾಗಿ 2500ಕ್ಕೂ ಅಧಿಕ ಪೊಲೀಸರನ್ನು ನಿಯೋಜಿಸಲಾಗಿದೆ. ವೇದಿಕೆಯ ಬಳಿಯ ಮುಖ್ಯ ರಸ್ತೆಯಲ್ಲಿ ಯಡಿಯೂರಪ್ಪ ಅವರ ಸ್ವಾಗತಕ್ಕೆ ಅದ್ದೂರಿ ತಯಾರಿ ನಡೆಸಲಾಗಿದೆ.

ಹೆಲಿಕಾಪ್ಟರ್ ಫ್ಯಾನ್: ಬಿರು ಬೇಸಗೆ ಧಗೆಯಿಂದ ಜನರ ಸುಮಾರು 30ಕ್ಕೂ ಹೆಚ್ಚು ಹೆಲಿಕಾಪ್ಟರ್‌ಫ್ಯಾನ್‌ಗಳನ್ನು ಅಳವಡಿಸಲಾಗಿದೆ.

ಚಿತ್ರದುರ್ಗಕ್ಕೆ ಕೇಸರಿಮಯ: ಕೋಟೆನಾಡು ಚಿತ್ರದುರ್ಗ ಅಭಿಮಾನೋತ್ಸವದ ಪ್ರಯುಕ್ತ ಸಿಂಗಾರಗೊಂಡು ಮಧುವಣಗಿತ್ತಿಯಂತೆ ಕಂಗೊಳಿಸುತ್ತಿದೆ. ಕಾರ್ಯಕರ್ತರು ಅಭಿಮಾನಿಗಳಲ್ಲಿ ಉತ್ಸಾಹ ಇಮ್ಮಡಿಯಾಗಿದೆ. ಇಡೀ ಚಿತ್ರದುರ್ಗ ಕೇಸರಿ ಬಣ್ಣದಲ್ಲಿ ಮಿಂದೆದ್ದಿದೆ.

ಚಳ್ಳಕೆರೆಗೇಟ್‌ನಿಂದ ನಗರಕ್ಕೆ ಪ್ರವೇಶಿಸುವ ಮಾರ್ಗದೆಲ್ಲೆಡೆ ಬಿ.ಎಸ್.ಯಡಿಯೂರಪ್ಪ ಅವರ ಭಾವಚಿತ್ರ ಇರುವ ಪೋಸ್ಟರ್, ಬ್ಯಾನರ್‌ಗಳು ಗಮನಸೆಳೆಯುತ್ತಿವೆ. ಲೈಟಿಂಗ್ ವ್ಯವಸ್ಥೆ ಸೇರಿದಂತೆ ವೇದಿಕೆ ತಯಾರಿಗೆ ಸಾವಿರಾರು ಕಾರ್ಮಿಕರು ಹಗಲು ರಾತ್ರಿ ಎನ್ನದೇ ಕೆಲಸ ಮಾಡುತ್ತಿದ್ದಾರೆ.

ಅಧಿಕೃತವಾಗಿ ಇದು ಪಕ್ಷದ ಕಾರ್ಯಕ್ರಮ ಆಗದಿದ್ದರೂ ಇಡೀ ಭಾರತೀಯ ಜನತಾ ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಒಂದೊಂದು ಜವಾಬ್ದಾರಿಯನ್ನು ತೆಗೆದುಕೊಂಡು ಕಾರ್ಯಕ್ರಮ ಯಶಸ್ವಿಗೆ ಶ್ರಮಿಸುತ್ತಿರುವುದು ಎದ್ದು ಕಾಣಿಸುತ್ತಿದೆ.

ಕೇಂದ್ರದ ಗೃಹ ಸಚಿವ ಅಮಿತ್ ಶಾ ಕಾರ್ಯಕ್ರಮಕ್ಕೆ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರ ಬಿಗಿಭದ್ರತೆ ಮತ್ತಷ್ಟು ಗಟ್ಟಿಯಾಗುತ್ತಿದೆ. ಶುಕ್ರವಾರ ಎಸ್‌ಪಿಜಿ ತಂಡ ವೇದಿಕೆ ಸೇರಿದಂತೆ ಇಡೀ ಕಾರ್ಯಕ್ರಮದ ಒಟ್ಟಾರೆ ಚಿತ್ರಣದ ಮಾಹಿತಿ ಕಲೆಹಾಕಿತು.

ತಮಿಳುನಾಡು ಸರ್ಕಾರ ರಚನೆ ಕಸರತ್ತು: ವಿಜಯಕ್ಕೆ 118 ಸಮಸ್ಯೆ!

4ನೇ ಪುಟದಿಂದ

ಈ ಮೂಲಕ ಅವರ ಬಲ 112ಕ್ಕೇರಿತ್ತು. ಈ ನಡುವೆ ಶುಕ್ರವಾರ ಸಿಪಿಐ ಮತ್ತು ಸಿಪಿಎಂನ ತಲಾ ಇಬ್ಬರು ಶಾಸಕರು (ಒಟ್ಟು 4 ಶಾಸಕರು) ಅಧಿಕೃತವಾಗಿ ವಿಜಯ್‌ಗೆ ಬೆಂಬಲ ಘೋಷಿಸಿದರು. ಇದರೊಂದಿಗೆ ಅವರ ಬಲ 116ಕ್ಕೇರಿತು.

ಆದರೆ, ಇಬ್ಬರು ಶಾಸಕರ ಬೆಂಬಲ ಹೊಂದಿರುವ ವಿದುತಲೈ ಚಿರುತೈಗಲ್ ಕಚ್ಚಿ (ವಿಸಿಕೆ) ನಾಯಕ ತೋಲ್ ತಿರುಮಾವಲನ್, ಅಧಿಕೃತ ಬೆಂಬಲ ಪತ್ರವನ್ನು ರಾಜ್ಯಪಾಲರಿಗೆ ನೀಡಲಿಲ್ಲ. ತಮ್ಮ ಪಕ್ಷಕ್ಕೆ ಡಿಸಿಎಂ ಹುದ್ದೆ ಬೇಕು. ಈ ಹುದ್ದೆ ಸಿಕ್ಕರೆ ಶನಿವಾರ ಬೆಂಬಲ ಪ್ರಕಟಿಸುವೆ ಎಂದು ವಿಜಯ್‌ಗೆ ತಿಳಿಸಿದ್ದಾರೆ ಎನ್ನಲಾಗಿದೆ. ಹೀಗಾಗಿ ವಿಜಯ್‌ಗೆ ಇಬ್ಬರು ವಿಸಿಕೆ ಶಾಸಕರ ಅಧಿಕೃತ ಬೆಂಬಲ ಪತ್ರ ಲಭಿಸಿಲ್ಲ. ರಾಜ್ಯಪಾಲರು ಇದನ್ನೇ ಮುಂದಿಟ್ಟುಕೊಂಡು ವಿಜಯ್ ಗೆ ಆಹ್ವಾನ ನಿರಾಕರಿಸಿದರು ಎಂದು ಗೊತ್ತಾಗಿದೆ.

ಈ ಗೊಂದಲದ ಬಗ್ಗೆ ಟಿವಿಕೆ ಪ್ರತಿಕ್ರಿಯಿಸಿದ್ದು, 'ಶನಿವಾರ ಎಲ್ಲ ಅಡ್ಡಿ ನಿವಾರಣೆ ಆಗಲಿವೆ' ಎಂದಿದೆ ಹಾಗೂ ವಿಸಿಕೆ ಮನವೊಲಿಕೆ ಯತ್ನ ಮುಂದುವರಿಸಿದೆ.

ಮುಸ್ಲಿಂ ಲೀಗ್ ಉಲ್ಟಾಪಲ್ಟಾ: ಈ ನಡುವೆ, ವಿಜಯ್ ಅವರು ರಾಜ್ಯಪಾಲರನ್ನು ಭೇಟಿಯಾದ ನಂತರ, 2 ಸ್ಥಾನಗಳನ್ನು ಹೊಂದಿರುವ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ಕೂಡ ಸರ್ಕಾರ ರಚನೆಗೆ ಬೆಂಬಲವಿದೆ ಎಂದು ಘೋಷಿಸಿತ್ತು. ಆದರೆ ಎಲ್ಲೂ ಟಿವಿಕೆ ಹೆಸರು ಬರೆಯದೇ ಹೊಸ ಸರ್ಕಾರ ಎಂಬ ಪದಗಳನ್ನಷ್ಟೇ ಬಳಸಿತ್ತು. ಈ ಬಗ್ಗೆ ನಂತರ ಹೇಳಿಕೆ ನೀಡಿದ ಪಕ್ಷ, 'ನಮ್ಮ ಬೆಂಬಲ ಟಿವಿಕೆಗೆ ಇಲ್ಲ' ಎಂದು ಸ್ಪಷ್ಟಪಡಿಸಿದೆ.

ಖರ್ಗೆ ಮನವೊಲಿಕೆ ಯತ್ನ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಿಸಿಕೆ ಮುಖ್ಯಸ್ಥ ತೋಲ್ ತಿರುಮಾವಲವನ್ ಮತ್ತು ಐಯುಎಂಎಲ್ ಜತೆ ನಡೆಸಿದ ಫೋನ್‌ನಲ್ಲಿ ಮಾತುಕತೆ ನಡೆಸಿ ಟಿವಿಕೆ-ಕಾಂಗ್ರೆಸ್ ಮೈತ್ರಿಕೂಟಕ್ಕೆ ಬೆಂಬಲ ಕೋರಿದ್ದಾರೆ.

ಈ ನಡುವೆ ಕಾಂಗ್ರೆಸ್‌ಗೆ 2 ಸಚಿವ ಸ್ಥಾನದ ಭರವಸೆ ಲಭ್ಯವಾಗಿದೆ ಎಂದು ತಮಿಳುನಾಡು ಕಾಂಗ್ರೆಸ್ ಪ್ರಭಾರಿ ಗಿರೀಶ್ ಛೋಡಂಕರ್ ಹೇಳಿದ್ದಾರೆ.

2 ಬಾರಿ ನಿರಾಕರಿಸಿದ್ದ ಆರ್ಲೇಕರ್: ಬುಧವಾರ ಮತ್ತು ಗುರುವಾರ, ಬಹುಮತದ ಕೊರತೆಯನ್ನು ಉಲ್ಲೇಖಿಸಿ, ಸರ್ಕಾರ ರಚನೆಗೆ ವಿಜಯ್ ಅವರನ್ನು ಆಹ್ವಾನಿಸಲು ಆರ್ಲೇಕರ್‌ನಿರಾಕರಿಸಿದ್ದರು. ಇದು ಕೇಂದ್ರವು ಸರ್ಕಾರ ರಚನೆಯನ್ನು ವಿಳಂಬಗೊಳಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿ ವಿರೋಧ ಪಕ್ಷಗಳಿಂದ ಪ್ರತಿಭಟನೆಗಳು ಮತ್ತು ತೀವ್ರ ಟೀಕೆಗಳಿಗೆ ಕಾರಣವಾಗಿತ್ತು.

ಸುಪ್ರೀಂಕೋರ್ಟಿಗೂ ಅರ್ಜಿ: ವಿಜಯ್‌ಗೆ ರಾಜ್ಯಪಾಲರು ಸರ್ಕಾರ ರಚನೆಗೆ ಆಹ್ವಾನ ನೀಡಿಲ್ಲ ಎಂದು ಟಿವಿಕೆ ನಾಯಕರೊಬ್ಬರು ಶುಕ್ರವಾರ ಸುಪ್ರೀಂ ಕೋರ್ಟ್‌ಗೂ ಅರ್ಜಿ ಸಲ್ಲಿಸಿದ್ದಾರೆ.

ಅಭಿಮಾನೋತ್ಸವ: ಯಡಿಯೂರಪ್ಪಗೆ ಅದ್ದೂರಿ ಸ್ವಾಗತ

5ನೇ ಪುಟದಿಂದ

ದಾರಿಯುದ್ದಕ್ಕೂ ನೂರಾರು ಮಹಿಳೆಯರು ಪೂರ್ಣಕುಂಭ ಹೊತ್ತು ಸಾಗಿದರೆ ಮತ್ತೊಂದಿಷ್ಟು ಮಂದಿ ಕೈಲಿ ಒನಕೆ ಹಿಡಿದು ಹೆಜ್ಜೆ ಹಾಕಿದರು. ಈ ಮೂಲಕ ಬಿಎಸ್‌ವೈ ಪುರಪ್ರವೇಶಕ್ಕೆ ಸಂಭ್ರಮದ ಕಳೆ ತಂದರು. ಇದರೊಂದಿಗೆ ತನ್ನ ಐದು ದಶಕಗಳ ರಾಜಕೀಯ ಬದುಕಿನಲ್ಲಿ ಬಡವರ, ರೈತರ, ಮಹಿಳೆಯರ ಪರ ಹೋರಾಡಿದ ಕುರುಹುಗಳು ಸಾಂಕೇತಿಕವಾಗಿ ಪುರಪ್ರವೇಶದ ಸಂದರ್ಭದಲ್ಲಿ ಅನಾವರಣಗೊಂಡವು. ಬುಡಕಟ್ಟು ಸಾಂಸ್ಕೃತಿಕ ಪರಂಪರೆ ಸಾರುವ ಚಿತ್ರದುರ್ಗ ಜಿಲ್ಲೆಯ ಕಾಡುಗೊಲ್ಲ-ಮ್ಯಾಸಬೇಡ ಸಮುದಾಯಗಳ ಸಾಂಸ್ಕೃತಿಕ ಆಚರಣೆಯನ್ನು



ಮೇಳೈಸುವ ಕೋಲಾಟ ಸೇರಿದಂತೆ ಹಲವು ಕಲಾ ತಂಡಗಳ ಜತೆಗೆ ಕಂಸಾಳೆ, ಉರಿಮೆ, ತಮಟೆ, ಗೊರವರ ಕುಣಿತ, ನಂದಿಕೋಲು, ವೀರಗಾಸೆ, ವಿವಿಧ ಜಾನಪದ ನೃತ್ಯಗಳು ಸೇರಿದಂತೆ ಸುಮಾರು ಇಪ್ಪತ್ತಕ್ಕೂ ಹೆಚ್ಚು ತಂಡಗಳು ಭಾಗವಹಿಸಿದ್ದವು. ತಂಪನೆಯ ಸಮಯದಲ್ಲಿ ನಗುಮೊಗದೊಂದಿಗೆ ಮದುಮಗನಂತೆ ಕಂಗೊಳಿಸುತ್ತಿದ್ದ ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ, ತೆರೆದ ವಾಹನದಲ್ಲಿ ಎಲ್ಲರತ್ತ ಕೈಬೀಸಿ ನಗುಮುಖದಲ್ಲಿ ಸಾಗುತ್ತಿದ್ದರು.

ಪ್ರವಾಸಿ ಮಂದಿರದ ಬಳಿ ಅಭಿಮಾನಿಗಳು ಬೃಹದಾಕಾರದ ಸೇಬು ಹಾರ ಹಾಕಿದರೆ, ಅಂಬೇಡ್ಕರ್ ಪ್ರತಿಮೆ ಬಳಿ ಮಾದಿಗ ಸಮುದಾಯದ ಮುಖಂಡರು ತಮ್ಮ ಸಾಂಸ್ಕೃತಿಕ ಪರಿಕರವಾದ ಹಲಗೆಯನ್ನೇ ಪೋಣಿಸಿ ಹಾರ ಮಾಡಿ ಯಡಿಯೂರಪ್ಪ ಅವರಿಗೆ ಹಾಕಿದ್ದು ವಿಶೇಷವಾಗಿ ಕಂಡಿತು.

ಮಾಜಿ ಮುಖ್ಯಮಂತ್ರಿ ಸದಾನಂದಗೌಡ, ಸಂಸದ ಗೋವಿಂದ ಕಾರಜೋಳ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಸಚಿವರಾದ ಶ್ರೀರಾಮುಲು, ರೇಣುಕಾಚಾರ್ಯ, ಕೇಂದ್ರದ ಮಾಜಿ ಸಚಿವ ಜಿ.ಎಂ.ಸಿದ್ದೇಶ್ವರ, ಸಿ.ಟಿ.ರವಿ, ಶಾಸಕ ಎಂ.ಚಂದ್ರಪ್ಪ, ಮಾಜಿ ಶಾಸಕರಾದ ಜಿ.ಎಚ್.ತಿಪ್ಪಾರೆಡ್ಡಿ, ಎಸ್.ಕೆ. ಬಸವರಾಜನ್ ಸೇರಿ ಹಲವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಆರು ಗಂಟೆಗೆ ಆರಂಭವಾದ ಮೆರವಣಿಗೆ ಮದಕರಿನಾಯಕ ಪ್ರತಿಮೆ ಬಳಿ ಬಂದಾಗ ವೇಳೆ ಎಂಟು ಗಂಟೆಯಾಗಿತ್ತು. ಸರಿ ಸುಮಾರು ಎರಡು ತಾಸು ಮೆರವಣಿಗೆ ನಡೆಯಿತು. ನಂತರ ಯಡಿಯೂರಪ್ಪ ಅವರು ವೀರಶೈವ ಬ್ಯಾಂಕ್ ಅಧ್ಯಕ್ಷ ಪಟೇಲ್ ಶಿವಕುಮಾರ್‌ಅವರ ಮನೆಯಲ್ಲಿ ವಾಸ್ತವ್ಯ ಹೂಡಿದರು.

ನಾನು, ಅನಂತಕುಮಾರ ರಾಜ್ಯ ಸುತ್ತಿದ್ದಕ್ಕೆ ಅಧಿಕಾರ

ಅಭಿಮಾನೋತ್ಸವಕ್ಕೆ ಬಹಳ ದೊಡ್ಡ ಪ್ರಮಾಣದಲ್ಲಿ ಜನ ಸೇರುವ ನಿರೀಕ್ಷೆಯಿದೆ. ಬಹಳ ಪ್ರೀತಿ, ವಿಶ್ವಾಸದಿಂದ ಎಲ್ಲರೂ ಸೇರಿ, ಕಾರ್ಯಕ್ರಮ ಮಾಡುತ್ತಿದ್ದಾರೆ. ಸೈಕಲ್‌ನಲ್ಲಿ ನಾನು, ಅನಂತಕುಮಾರ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದೆವು. ಇದೆಲ್ಲದರ ಕಾರಣದಿಂದ ಬಿಜೆಪಿ ಅಧಿಕಾರಕ್ಕೆ ಬಂದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. 2028ರ ಚುನಾವಣೆಗೆ ಅಭಿನಂದನೋತ್ಸವ ರಣಕಹಳೆಯಾಗುತ್ತದೆಯಾ ಎಂಬುದನ್ನು ಕಾದು ನೋಡೋಣ.

• **ಬಿ.ಎಸ್.ಯಡಿಯೂರಪ್ಪ** ಮಾಜಿ ಮುಖ್ಯಮಂತ್ರಿ



ಬಿಡಿಎ - ಪ್ರಮುಖ ಬಡಾವಣೆಗಳ ಪ್ರೀಮಿಯಂ ಸೈಟ್‌ಗಳ ಇ-ಹರಾಜು



ಶ್ರೀ ಎನ್.ಎ. ಹ್ಯಾರಿಸ್
ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ ಮತ್ತು ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬಿಡ್ ಮಾಡಿ
ಪ್ರತಿ ಚ.ಮೀ.ಗೆ ರೂ. 500/- ಗಳ ಗುಣಕಗಳಲ್ಲಿ ಬಿಡ್ ದರದ ಕನಿಷ್ಠ ಏರಿಕೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ವಾಸಯೋಗ್ಯ ವಸತಿ ಹಾಗೂ ವಾಣಿಜ್ಯ ಮೂಲೆ / ಮಧ್ಯಂತರ ನಿವೇಶನಗಳ ಇ-ಹರಾಜು ಪ್ರಕಟಿಸಿದೆ. ಈ ನಿವೇಶನಗಳ ಹರಾಜು ಹಾಗೂ ಮಾರಾಟವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲೆ ನಿವೇಶನಗಳು, ಮಧ್ಯಂತರ ನಿವೇಶನಗಳು ಮತ್ತು ಇತರೆ ಹರಾಜು ಮಾಡಬಹುದಾದ ನಿವೇಶನಗಳ ವಿಲೇವಾರಿ ನಿಯಮಾವಳಿ 1984ರ ಅನುಸಾರ ನಡೆಸಲಾಗುವುದು. ನಿವೇಶನಗಳನ್ನು "ಎಲ್ಲಿ ಹೇಗಿವೆಯೋ ಹಾಗಿರುವ ಸ್ಥಿತಿಯಲ್ಲಿ" ಹರಾಜು ಮಾಡಲಾಗುವುದು.

ಇ-ಹರಾಜನ್ನು ಆರಂಭಿಸುವ ದಿನಾಂಕ: 11.05.2026.

ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ: 22.05.2026, ಸಂಜೆ 5.00 ಗಂಟೆಗೆ

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 1ರಿಂದ 36): 25.05.2026ರ ಬೆಳಗ್ಗೆ 11.00 ಗಂಟೆಯಿಂದ
ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 26.05.2026ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ. ಗಳಲ್ಲಿ
ಅಂಜನಾಪುರ ಟೌನ್‌ಶಿಪ್, 1ನೇ ಬ್ಲಾಕ್, ಅಂಜನಾಪುರ				
1	470	12	18	216
2	512	9	6	54
3	545	12	9	108
4	551/A	9	6	54
5	553	12	9	108
6	563	9	6	54
7	564	9	6	54
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 64000/-, ಸಂಪರ್ಕಿಸಿ: 8310525317				
ಅಂಜನಾಪುರ ಟೌನ್‌ಶಿಪ್, 6ನೇ ಬ್ಲಾಕ್, ಅಂಜನಾಪುರ				
8	404	(7.00+9.00)/2	12	96
9	471	12	(5.50+7.00)/2	75
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 71000/-, ಸಂಪರ್ಕಿಸಿ: 8310525317				
ಅರ್ಕಾವತಿ ಲೇಔಟ್, 2ನೇ ಬ್ಲಾಕ್, ಸಂಪಿಗೇಹಳ್ಳಿ				
10	1808	10.5	18	189
11	1789	(13.00+12.40)/2	12	152.4
12	2142A	9	(32.30+7.40)/2	377.15
13	2178A	24	0.50x30.10	361.2
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 8494933686				
ಅರ್ಕಾವತಿ ಲೇಔಟ್, 2ನೇ ಬ್ಲಾಕ್, ವೆಂಕಟೇಶಪುರ				
14	1729A	(12.70+16.15)/2	(12.00+14.00)/2	187.46
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 75000/-, ಸಂಪರ್ಕಿಸಿ: 8217795990				
ಅರ್ಕಾವತಿ ಲೇಔಟ್, 20ನೇ ಬ್ಲಾಕ್, ಹೆಣ್ಣೂರು				
15	315	(3.70+3.20)/2	18	62.1
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 73500/-, ಸಂಪರ್ಕಿಸಿ: 8722433608				
ಅರ್ಕಾವತಿ ಲೇಔಟ್, 7ನೇ ಬ್ಲಾಕ್, ಜಕ್ಕೂರು				
16	2136	24	(7.8+6.1)/2	166.8
17	41	(5.50+2.00)/2	18	67.5
18	3132E	23.4	3.4	79.56
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 73500/-, ಸಂಪರ್ಕಿಸಿ: 8217795990				
ಅರ್ಕಾವತಿ ಲೇಔಟ್, 19ನೇ ಬ್ಲಾಕ್, ಚಳ್ಳಕೆರೆ				
19	669	(13.0+12.0)/2	(12.20+12.00)/2	151.25
20	641	(8.50+10.60)/2	(11.50+12.00)/2	112.21
21	735	0.5x15.00	12	90
22	53	9	(6.20+10.20)/2	73.8
23	853	9	6	54
24	852	9	6	54
25	1323	(7.40+9.50)/2	9.2	77.74
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87250/-, ಸಂಪರ್ಕಿಸಿ: 8217795990				
ಬನಶಂಕರಿ 6ನೇ ಹಂತ, 5ನೇ ಬ್ಲಾಕ್, ಹೆಮ್ಮಿಗೇಪುರ				
26	1175	9	(6.00+7.40)/2	60.3
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 72000/-, ಸಂಪರ್ಕಿಸಿ: 9880946840				
ಬನಶಂಕರಿ 6ನೇ ಹಂತ, 10ನೇ ಬ್ಲಾಕ್, ಹೆಮ್ಮಿಗೇಪುರ				
27	831	18	(12.00+13.50)/2	229
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 62300/-, ಸಂಪರ್ಕಿಸಿ: 9880946840				
ಬನಶಂಕರಿ 6ನೇ ಹಂತ, 11ನೇ ಬ್ಲಾಕ್, ಗಣಕಲ್ಲು				
28	61/F	(13.00+5.50)/2	9	83.25
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 9591964603				
ಮುಂದುವರೆದ ಅಂಜನಾಪುರ ಲೇಔಟ್, 10ನೇ ಬ್ಲಾಕ್, ಗೊಲ್ಲಹಳ್ಳಿ				
29	1379/D	9	6	54
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 8310525317				
30	1379/E	9	6	54
31	1380/A	9	6	54
32	1349	9	6	54
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 71000/-, ಸಂಪರ್ಕಿಸಿ: 8310525317				
ಮುಂದುವರೆದ ಅಂಜನಾಪುರ ಲೇಔಟ್, 10ನೇ ಬ್ಲಾಕ್, ಕೆಂಭತ್ತಹಳ್ಳಿ				
33	1371	9	6	54
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/-, ಸಂಪರ್ಕಿಸಿ: 8310525317				
ಮುಂದುವರೆದ ಬನಶಂಕರಿ ಲೇಔಟ್ 6ನೇ ಸ್ಟೇಜ್, 4ನೇ 'ಟಿ' ಬ್ಲಾಕ್, ತಲಘಟ್ಟಪುರ				
34	1970	12	22	264
35	490/L	18	12	216
36	373	12	18	216
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 69300/-, ಸಂಪರ್ಕಿಸಿ: 9591964603				

ಇ-ಹರಾಜಿನ ನೇರ ಬಿಡ್ಡಿಂಗ್ ಆರಂಭಿಸುವ ದಿನಾಂಕ (ಕ್ರ.ಸಂ. 37ರಿಂದ 75): 26.05.2026ರ ಬೆಳಗ್ಗೆ 11.00 ಗಂಟೆಯಿಂದ
ನೇರ ಬಿಡ್ಡಿಂಗ್ ಅಂತಿಮಗೊಳ್ಳುವ ದಿನಾಂಕ: 27.05.2026ರ ಸಂಜೆ 5.00 ಗಂಟೆಯವರೆಗೆ (ಡೆಲ್ಟಾ ಟೈಮ್ 5.00 ನಿಮಿಷ)

ಕ್ರ ಸಂ.	ನಿವೇಶನ ಸಂಖ್ಯೆ	ಅಳತೆ (ಮೀ.ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ. ಗಳಲ್ಲಿ
ಮುಂದುವರೆದ ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 7ನೇ ಬ್ಲಾಕ್, ಗಿಡದಕೋನೇನಹಳ್ಳಿ				
37	1452	(10.90+4.50)/2	(9.50+9.00)/2	70.84
38	1165	12	(8.10+8.40)/2	99
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 87500/-, ಸಂಪರ್ಕಿಸಿ: 6362956998				
ಜೆ.ಪಿ. ನಗರ 9ನೇ ಫೇಸ್, 3ನೇ ಬ್ಲಾಕ್, ಆಲಹಳ್ಳಿ				
39	384	12.19	18.28	222.83
40	403	12.19	18.28	222.83
41	404	12.19	18.28	222.83
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,00,000/-, ಸಂಪರ್ಕಿಸಿ: 9591964603				
ಕುಮಾರಸ್ವಾಮಿ ಲೇಔಟ್, 2ನೇ ಹಂತ, ಗೋವಿನಾಯಕನಹಳ್ಳಿ				
42	213	7.4	6.2	45.88
43	261	7.5	5	37.5
44	253	7.5	5	37.5
45	252	6	7.5	45
46	2383	18	(12.00+0.50)/2	112.5
47	3822	(6.00+7.00)/2	(12.00+0.50)/2	40.62
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,27,500/-, ಸಂಪರ್ಕಿಸಿ: 9591964603				
ಆರ್‌ಎಂವಿ, ಗೆದ್ದಲಹಳ್ಳಿ				
48	63	(24.50+7.30)/2	18.7	297.33
49	48/A	12	5	60
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 1,90,000/-, ಸಂಪರ್ಕಿಸಿ: 8722433608				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 6ನೇ ಬ್ಲಾಕ್, ಉಲ್ಲಾಳು				
50	756	24	15	360
51	1448	24	6.9	165.6
52	2609	(13.1+18.80)/2	18	187.1
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 4ನೇ ಬ್ಲಾಕ್, ಉಲ್ಲಾಳು				
53	43	(12.10+17.80)/2	18	169.1
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 5ನೇ ಬ್ಲಾಕ್, ಉಲ್ಲಾಳು				
54	1772	10	13	130
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 3ನೇ ಬ್ಲಾಕ್, ಸೊನ್ನೇನಹಳ್ಳಿ				
55	2596	11.1	12	133.2
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 6362956998				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 1ನೇ ಬ್ಲಾಕ್, ಕೆಂಗೇರಿ				
56	36	12	(18.00+14.10)/2	192.6
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 9620459111				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 1ನೇ ಬ್ಲಾಕ್, ರಾಮಸಂದ್ರ				
57	2094	(11.30+10.90)/2	18	199.8
58	1446	18	11.1	199.8
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7349388238				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 2ನೇ ಬ್ಲಾಕ್, ರಾಮಸಂದ್ರ				
59	167	12	18	216
60	664	18.8	18	338.4
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7349388238				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 4ನೇ ಬ್ಲಾಕ್, ರಾಮಸಂದ್ರ				
61	1484	18	10.6	190.8
62	1465	24	16.5	396
63	2915	12	11.6	139.2
64	1474	18	8.2	147.6
65	2937	18	20.1	361.8
66	1398	12.0	6.5	78
67	1793/1	15.5	24	372
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7349388238				
ಸರ್ ಎಂ. ವಿಶ್ವೇಶ್ವರಯ್ಯ ಲೇಔಟ್, 6ನೇ ಬ್ಲಾಕ್, ಮಂಗನಹಳ್ಳಿ				
68	2227	10.4	18	187.2
69	2221	10.1	18	181.85
70	2060	18	11.2	201.6
71	2059	12	11.8	141.6
72	1914	12	4.8	57.6
73	2564	12	(13.00+11.00)/2	144
74	2730/A	18	12.4	223.2
75	2731/A	12	(6.80+4.50)/2	67.8
ಆರಂಭಿಕ ಬಿಡ್ ದರ : ಚ.ಮೀಟರ್‌ಗೆ ರೂ. 84000/-, ಸಂಪರ್ಕಿಸಿ: 7975861995				

ಇ-ಹರಾಜಿನ ಸಾಮಾನ್ಯ ಷರತ್ತು ಮತ್ತು ನಿಯಮ-ನಿಬಂಧನೆಗಳು ಈ ಕೆಳಕಂಡಂತೆ ಇರುತ್ತವೆ.

1) ಹರಾಜಿನಲ್ಲಿ ಭಾಗವಹಿಸುವವರು ಭಾರತೀಯ ಪ್ರಜೆಯಾಗಿರಬೇಕು.
2) ವಿಳಾಸದ ಸಾಬೀತಿಗಾಗಿ ಕೆಳಕಂಡ ಯಾವುದಾದರು ಒಂದು ದಾಖಲೆಯನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ / ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು]. ಅ) ಮತದಾರರ ಗುರುತಿನ ಚೀಟಿ, ಆ) ವಾಹನ ಚಾಲನೆಯ ಪರವಾನಗಿ, ಇ) ಪಾಸ್ ಪೋರ್ಟ್, ಈ) ವಿಶಿಷ್ಟ ಗುರುತಿನ ಸಂಖ್ಯೆ (ಆಧಾರ್).
3) ಪ್ಯಾನ್ ಕಾರ್ಡ್‌ನ್ನು ಕಡ್ಡಾಯವಾಗಿ ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ /ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
4) ಸಹಿ ಮತ್ತು ಭಾವಚಿತ್ರದ ಗುರುತನ್ನು ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು. ಇದಕ್ಕೆ ನಿಗದಿಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು [ಗೆಜೆಟೆಡ್ ಅಧಿಕಾರಿ / ನೋಟರಿಯಿಂದ/ ಭಾರತೀಯ ಅನಿವಾಸಿಯಾಗಿದ್ದಲ್ಲಿ (ಎನ್.ಆರ್.ಐ) ಎಂಬೆಸ್ಸಿ ಕಛೇರಿಯಿಂದ ದೃಢೀಕೃತಗೊಂಡಿರಬೇಕು].
5) ಹರಾಜು ಖರೀದಿದಾರರು ಸರಿಯಾದ ಇ-ಮೇಲ್ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಸ್ಥಿರ ದೂರವಾಣಿಯನ್ನು (ಲ್ಯಾಂಡ್ ಲೈನ್) ಇ-ಹರಾಜಿನಲ್ಲಿ ಭಾಗವಹಿಸುವಾಗ ನಮೂದಿಸಬೇಕು. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಹೆಸರು ನೋಂದಾಯಿಸಿರುವ ಬಿಡ್‌ದಾರರು ಅಂತಿಮವಾಗಿರುತ್ತಾರೆ ಮತ್ತು ನಿವೇಶನವನ್ನು ಬೇರೆ ಯಾವುದೇ ಹೆಸರಿಗೆ ವರ್ಗಾಯಿಸುವುದಿಲ್ಲ.
6) **ಅಪ್ರಾಪ್ತ ವಯಸ್ಕರು / ಗಣಕಯಂತ್ರದ ಜ್ಞಾನ (Computer Knowledge) ಇಲ್ಲದೇ ಇರುವವರು ತಮ್ಮ ಪಾಲಕರ / ಹತ್ತಿರದ ಸ್ನೇಹಿತರ ಮೂಲಕ ಇ-ಹರಾಜಿನಲ್ಲಿ ಭಾಗವಹಿಸಬಹುದು. ಇ-ಹರಾಜಿನಲ್ಲಿ ಭಾಗವಹಿಸುವಾಗ ಯಾರು ನಿವೇಶನವನ್ನು ಖರೀದಿಸುತ್ತಾರೆಯೋ ಅವರ ಹೆಸರನ್ನು ಮಾತ್ರ ನಮೂದಿಸಿ, ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಬೇಕು / ಇ-ಹರಾಜಿನ ಪೋರ್ಟಲ್‌ನಲ್ಲಿ Upload ಮಾಡಬೇಕು.**
7) ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆಯು ಹರಾಜಿನಲ್ಲಿ ಭಾಗವಹಿಸುವ ಮುನ್ನ ತನ್ನ ಪಾಲುದಾರಿಕೆ ಸಂಸ್ಥೆಯ ನೋಂದಾವಣೆಯನ್ನು ಭಾರತ ದೇಶದಲ್ಲಿ ಮಾಡಿಕೊಂಡಿರಬೇಕು.
8) ಪ್ರತಿ ನಿವೇಶನಕ್ಕೆ ಇಎಂಡಿ ಮೊತ್ತವನ್ನು ರೂ. 4.00 ಲಕ್ಷ (ನಾಲ್ಕು ಲಕ್ಷ ರೂಪಾಯಿಗಳು ಮಾತ್ರ) ಎಂದು ನಿಗದಿಪಡಿಸಲಾಗಿದೆ ಮತ್ತು ಈ ಮೊತ್ತವನ್ನು ಇ-ಹರಾಜು ಶುಲ್ಕದೊಂದಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಉಲ್ಲೇಖಿಸಿದಂತೆ ಪಾವತಿಸಬೇಕು. ಇ-ಹರಾಜು ಪೋರ್ಟಲ್ ಬದಲಿಗೆ ಬಿಡಿಎ ಖಾತೆಗೆ ಪಾವತಿಸಿದರೆ ಮರುಪಾವತಿ ಸಮಯದಲ್ಲಿ ಇಎಂಡಿಯ ಮೇಲಿನ 5% ಸೇವಾ ಶುಲ್ಕವನ್ನು ಕಡಿತಗೊಳಿಸಲಾಗುತ್ತದೆ.
9) ಹರಾಜು ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಬೆಂಗಳೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತವೆ.
10) ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ ಐದು ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ.
11) ಯಾವುದೇ ಕಾರಣ ನೀಡದೇ ಹರಾಜು ಅವಧಿಯ ಯಾವುದೇ ಸಮಯದಲ್ಲಿ ಹರಾಜಿಗೆ ಪ್ರಕಟಿಸಿದ ನಿವೇಶನಗಳನ್ನು ಹಿಂಪಡೆಯುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
12) ಯಾವುದೇ ಕಾರಣ ನೀಡದೇ ಯಶಸ್ವಿ ಬಿಡ್ಡುದಾರರ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
13) **ಬ್ಯಾಂಕ್‌ನ ಹೆಸರು :- ಕೆನರಾ ಬ್ಯಾಂಕ್, ಬಿಡಿಎ ಸಂಕೀರ್ಣ ಶಾಖೆ, ಕುಮಾರಕೃಪಾ ಪಶ್ಚಿಮ, ಬೆಂಗಳೂರು-560020. ಉಳಿತಾಯ ಖಾತೆಯ ಹೆಸರು:- ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು. ಉಳಿತಾಯ ಖಾತೆ ಸಂಖ್ಯೆ:- 2828101053014 ಐ.ಎಫ್.ಎಸ್.ಸಿ ಕೋಡ್:- CNRB0002828. ಪಾವತಿಯ ವಿಧಾನ:- ಆರ್.ಟಿ.ಜಿ.ಎಸ್ / ಎನ್.ಇ.ಎಫ್.ಟಿ**
14) ಯಶಸ್ವಿ ಬಿಡ್‌ದಾರರಿಗೆ (ಅತಿ ಹೆಚ್ಚು ಬಿಡ್‌ದಾರರು) ಇ-ಹರಾಜಿನ ಮುಕ್ತಾಯ ಸಮಯದಿಂದ 72 ಗಂಟೆಗಳ ಒಳಗೆ (ಬ್ಯಾಂಕ್ ರಜಾದಿನಗಳನ್ನು ಹೊರತುಪಡಿಸಿ) ಒಟ್ಟು ಬೆಲೆಯ 25% ಮೊತ್ತವನ್ನು ರೂ.4.00 ಲಕ್ಷಗಳ ಇಎಂಡಿ ಮೊತ್ತವನ್ನು ಕಳೆದು ಉಳಿದ ಮೊತ್ತವನ್ನು ಕೆಳಗೆ ತಿಳಿಸಲಾದ ಬಿಡಿಎ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸಲಹೆ ಪತ್ರಗಳನ್ನು ಇ-ಮೇಲ್ ಮೂಲಕ ಕಳುಹಿಸಲಾಗುತ್ತದೆ; ಬ್ಯಾಂಕ್ ಖಾತೆಗೆ ಹಣ ಸಂದಾಯ ಮಾಡಿದ್ದಕ್ಕೆ ಪಡೆದ ಚಲನ್ ಅನ್ನು ಲೆಕ್ಕಾಧಿಕಾರಿ ಹಣಕಾಸು ಇಲಾಖೆ ('ಡಿ' ಬ್ಲಾಕ್, 2ನೇ ಮಹಡಿ, ಕೊಠಡಿ ಸಂಖ್ಯೆ 308) ಇವರಿಗೆ ಸಲ್ಲಿಸಬೇಕು. ನಿಗದಿತ ಸಮಯದ ಒಳಗೆ 25% ಹಣವನ್ನು ಸಂದಾಯ ಮಾಡಲು ವಿಫಲವಾದ ಪಕ್ಷದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಶಸ್ವಿ ಬಿಡ್ಡುದರಾರು ಶೇ.25 ರಷ್ಟು ಬಿಡ್ ಹಣವನ್ನು ಪಾವತಿಸಿದ ಬಳಿಕ ಉಳಿದ ಹಣ ಶೇ.75 ಹಣವನ್ನು ಬಿ.ಡಿ.ಎ.ಯಿಂದ ಪತ್ರ ತಲುಪಿದ 45 ದಿನಗಳೊಳಗಾಗಿ ಪಾವತಿಸತಕ್ಕದ್ದು.
15) ಯಶಸ್ವಿಯಾಗದ ಬಿಡ್ಡುದಾರರ ಇಎಂಡಿ ಮೊತ್ತ ರೂ. 4 ಲಕ್ಷಗಳನ್ನು ಆದಷ್ಟು ಶೀಘ್ರವಾಗಿ ಅವರ ಖಾತೆಗೆ ಜಮಾ ಮಾಡಲಾಗುವುದು (ಬಡ್ಡಿ ರಹಿತ).
16) ಹರಾಜು ಖರೀದಿದಾರರು ಜಂಟಿಯಾಗಿ ನಿವೇಶನಗಳನ್ನು ನೋಂದಾಯಿಸಲು ಬಯಸಿದ್ದಲ್ಲಿ, ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು. ಹರಾಜು ಖರೀದಿದಾರರೊಂದಿಗೆ ರಕ್ತಸಂಬಂಧಿಗಳು ಅಂದರೆ ಸಂಗಾತಿ, ಪುತ್ರರು ಅಥವಾ ಅವಿವಾಹಿತ ಹೆಣ್ಣುಮಕ್ಕಳು ಮಾತ್ರ ಜಂಟಿ ನೋಂದಣಿಗೆ ಅರ್ಹರಾಗಿರುತ್ತಾರೆ. ಅರ್ಜಿಯಲ್ಲಿ ಅಂತಹ ವ್ಯಕ್ತಿಯ ಸಂಬಂಧವನ್ನು ಸ್ಪಷ್ಟವಾಗಿ ನಮೂದಿಸಬೇಕು ಮತ್ತು ಯಾವುದೇ ಸರ್ಕಾರಿ ಗುರುತಿನ ಚೀಟಿಯನ್ನು ಲಗತ್ತಿಸತಕ್ಕದ್ದು. ನಂತರ ಅಂತಹ ವಿನಂತಿಯನ್ನು ತಿರಸ್ಕರಿಸಲಾಗುತ್ತದೆ.
17) ಬಿಡ್ಡಿಂಗ್ ಸಮಯದಲ್ಲಿ, ಒಂದೇ ನಿವೇಶನಕ್ಕೆ ಅಡ್ಡಹೆಸರುಗಳ ಯಾವುದೇ ನಕಲು ಇದ್ದಲ್ಲಿ, ಅಂತಹ ಬಿಡ್ ಅನ್ನು ಯಾವುದೇ ಕಾರಣಗಳನ್ನು ನೀಡದೆ ತಿರಸ್ಕರಿಸಲಾಗುತ್ತದೆ.
18) **ಯಶಸ್ವಿ ಬಿಡ್ಡುದಾರರು / ಅತಿ ಹೆಚ್ಚಿನ ಬಿಡ್ಡುದಾರರು ಇ-ಹರಾಜು ಮುಕ್ತಾಯಗೊಂಡ ಅವಧಿಯ ನಿಗದಿತ 72 ಘಂಟೆಯೊಳಗೆ ನಿವೇಶನದ ಒಟ್ಟು ಮೌಲ್ಯದ ಪೈಕಿ ಶೇ.25 ರಷ್ಟು ಮೌಲ್ಯವನ್ನು ಪ್ರಾಧಿಕಾರದ ಖಾತೆಗೆ ಪಾವತಿ ಮಾಡದೇ ಇದ್ದಲ್ಲಿ ಅಥವಾ ನಿಗದಿತ ಅವಧಿಯ ನಂತರ ಅಂದರೆ ತಡವಾಗಿ ಪಾವತಿಸಿದ್ದಲ್ಲಿ, ಇ.ಎಂ.ಡಿ. ಮೊತ್ತವಾದ ರೂ.4.00 ಲಕ್ಷಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.**
19) ಆದಾಯ ತೆರಿಗೆ ಕಾಯ್ದೆ 1961 ರ ಕಲಂ 194 ಐಎ ಪ್ರಕಾರ ಹರಾಜು ನಿವೇಶನದ ಒಟ್ಟು ಮೌಲ್ಯವು ರೂ.50.00 ಲಕ್ಷ ಮೀರಿದ ಪ್ರಕರಣಗಳಲ್ಲಿ, ಹರಾಜು ಖರೀದಿದಾರರು ನಿವೇಶನದ ಒಟ್ಟು ಮೌಲ್ಯದಲ್ಲಿ ಶೇ.1 ರಷ್ಟು ಮೌಲ್ಯವನ್ನು ಕಟಾಯಿಸಿ, ಆದಾಯ ತೆರಿಗೆ ಇಲಾಖೆಗೆ ಪಾವತಿಸತಕ್ಕದ್ದು.
20) ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ/ಹೆಚ್ಚು) ಮೊದಲು ಇ-ಹರಾಜು ಅಧಿಸೂಚನೆ / ಹರಾಜು ನಿವೇಶನದ ಸ್ಥಿರೀಕರಣ ಪತ್ರದನ್ವಯ ನಿವೇಶನದ ಪೂರ್ಣ ಮೌಲ್ಯವನ್ನು (TDS ಹೊರತುಪಡಿಸಿ) ನಿಗದಿತ ಅವಧಿಯೊಳಗೆ ಪಾವತಿಸಬೇಕು. ನಿಗದಿತ ಅವಧಿಯೊಳಗೆ ಪಾವತಿಸದೇ ಇದ್ದಲ್ಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ರನ್ವಯ ಕ್ರಮ ಕೈಗೊಳ್ಳಲಾಗುವುದು. ಒಂದು ವೇಳೆ ನಿವೇಶನದ ಅಳತೆಯಲ್ಲಿ ವ್ಯತ್ಯಾಸವಿದ್ದರೆ (ಕಡಿಮೆ / ಹೆಚ್ಚು):- ನಿವೇಶನದ ಮೌಲ್ಯವನ್ನು ಹೆಚ್ಚಾಗಿ ಪಾವತಿಸಿದ್ದರೆ, ಕಡಿಮೆಯಾದ ವಿಸ್ತೀರ್ಣಕ್ಕೆ ನಿವೇಶನದ ಮೌಲ್ಯವನ್ನು ಬಡ್ಡಿರಹಿತವಾಗಿ ಮರುಪಾವತಿಸಲು ಕ್ರಮ ಕೈಗೊಳ್ಳಲಾಗುವುದು. ಹೆಚ್ಚುವರಿಯಾದ ವಿಸ್ತೀರ್ಣಕ್ಕೆ ಪ್ರಾಧಿಕಾರದಿಂದ ಹರಾಜು ಖರೀದಿದಾರರಿಗೆ ಬರೆಯುವ ಪತ್ರದಂತೆ ನಿವೇಶನದ ಮೌಲ್ಯವನ್ನು ಪಾವತಿಸಬೇಕು.
21) ಬಿಡ್ಡುದಾರರು/ಹರಾಜು ಖರೀದಿದಾರರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಮೂಲೆ, ಮಧ್ಯಂತರ & ವಾಣಿಜ್ಯ ನಿವೇಶನಗಳ ವಿಲೇವಾರಿ) ನಿಯಮ 1984 ನ್ನು ಪಾಲಿಸಬೇಕಾಗುತ್ತದೆ (ಇ-ಹರಾಜಿನ ದಾಖಲೆಯ ಭಾಗವಾಗಿ ಈ ದಾಖಲೆಯನ್ನು ಲಗತ್ತಿಸಲಾಗಿದೆ).
22) ಇ-ಹರಾಜಿನಲ್ಲಿ ಭಾಗವಹಿಸುವ ವಿಧಾನಗಳನ್ನು ತಿಳಿಯಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕೇಂದ್ರ ಕಛೇರಿಯನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಹರಾಜಿನ ವಿಧಾನ ತಿಳಿಸುವ ಸಮಯದಲ್ಲಿ ಬಿಡಿಎ, ಬಿಡ್ಡುದಾರರ ಪರವಾಗಿ ಬಿಡ್ ಮಾಡುವುದಿಲ್ಲ.
23) ಇ-ಹರಾಜಿನಲ್ಲಿ ಭಾಗವಹಿಸುವಾಗ ಬಿಡ್ ಮೊತ್ತವು ಮೂಲ ದರಕ್ಕಿಂತ 10% ಹೆಚ್ಚಾಗಿರಬೇಕು. ಅಂದರೆ 108 m^2 ನಿವೇಶನದ ವಿಸ್ತೀರ್ಣದ ಮೂಲ ದರ ರೂ.45,000/m^2 ಆಗಿರುತ್ತದೆ. ಬಿಡ್‌ದಾರರು ರೂ..45,000x1.1=ರೂ.49,500/m^2 ಕ್ಕಿಂತ ಹೆಚ್ಚು ಕೋಟ್ ಮಾಡಬೇಕು (ರೂ.49,500 ಕೋಟ್ ಮಾಡಿದರೆ ಅದನ್ನು ತಿರಸ್ಕರಿಸಲಾಗುವುದು). ಆದಾಗ್ಯೂ, ಯಾವುದೇ ಕಾರಣ ನೀಡದೇ ಬಿಡ್ಡನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಬಿಡಿಎ ಕಾಯ್ದಿರಿಸಿಕೊಂಡಿದೆ.
24) ಪ್ರತಿ ನಿವೇಶನಕ್ಕೆ ಕನಿಷ್ಠ 2 ಬಿಡ್‌ದಾರರುಗಳು ಇರಬೇಕು. ಏಕ ಬಿಡ್‌ದಾರನನ್ನು ತಿರಸ್ಕರಿಸಲಾಗುವುದು.
25) ವೆಬ್‌ಸೈಟ್ ವಿಳಾಸ: **www.bdakarnataka.in**
26) ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ವೆಬ್‌ಸೈಟ್: **www.bdakarnataka.in** ಇಲ್ಲಿಗೆ ಲಾಗ್‌ಆನ್ ಆಗಿ ಹೊಸ ಇ-ಹರಾಜು ಬಿಡ್ಡಿಂಗ್ ಬಳಕೆದಾರ ಕೈಪಿಡಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್:080-46010000 ಮತ್ತು 080-68948777 ಸಂಪರ್ಕಿಸುವುದು.
27) ಹರಾಜು ಮಾಡಿದ ನಿವೇಶನಗಳನ್ನು ಯಶಸ್ವಿ ಬಿಡ್‌ದಾರರಿಗೆ ಅವುಗಳು ಇರುವ ಸ್ಥಿತಿಯಲ್ಲಿಯೇ ಹಂಚಿಕೆ ಮಾಡಲಾಗುವುದು. ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ನಿವೇಶನದ ಸ್ಥಳ, ರಸ್ತೆಯ ಅಗಲ ಇತ್ಯಾದಿಗಳನ್ನು ಬಿಡ್ ಮಾಡುವ ಮುನ್ನ ಭೌತಿಕವಾಗಿ ಪರಿಶೀಲಿಸತಕ್ಕದ್ದು. ಇ-ಹರಾಜಿನಲ್ಲಿ ಹಂಚಿಕೆ ಮಾಡಿದ ನಿವೇಶನಗಳನ್ನು ರದ್ದುಪಡಿಸಲಾಗುವುದಿಲ್ಲ/ಪರ್ಯಾಯ ನಿವೇಶನ ನೀಡಲಾಗುವುದಿಲ್ಲ.
28) ಇ-ಹರಾಜಿನಲ್ಲಿ ಭಾಗವಹಿಸುವ ಬಿಡ್‌ದಾರರು ಮೇಲೆ ನಿರ್ದಿಷ್ಟಪಡಿಸಿರುವ ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳಿಗೆ ಬದ್ಧರಾಗಿರಬೇಕು.
29) ಇ-ಹರಾಜಿನ ಬಗ್ಗೆ, ಬಿಡ್‌ದಾರರು ಪ್ರಾಧಿಕಾರವನ್ನು ನೇರವಾಗಿ ಸಂಪರ್ಕಿಸಬೇಕು. ಯಾವುದೇ ಮಧ್ಯವರ್ತಿಗಳನ್ನು ಸಂಪರ್ಕಿಸಬಾರದು.
30) ನಿವೇಶನಗಳ ಜಿಯೊ ಟ್ಯಾಗ್ ಕೇವಲ ಪರಾಮರ್ಶನೆಗೆ ಮಾತ್ರ. ಅದರಲ್ಲಿ ಯಾವುದೇ ವ್ಯತ್ಯಾಸಗಳಿದ್ದರೂ ಆ ಬಗ್ಗೆ ಯಾವುದೇ ಹಕ್ಕನ್ನು ಮಾನ್ಯ ಮಾಡುವುದಿಲ್ಲ.

ಬಿಡ್‌ದಾರರು ಬಿಡ್ ಮಾಡುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಬೇಕು ಮತ್ತು ಅದರ ಪ್ರಕಾರ ಭಾಗವಹಿಸಬೇಕು.

ಇ-ಹರಾಜಿನ ಇತರೆ ಮಾಹಿತಿ ಮತ್ತು ನಿಯಮ ನಿಬಂಧನೆಗಳಿಗೆ www.bdakarnataka.in ಲಾಗಾನ್ ಆಗಿ
ಬಿಡಿಎ ನಿವೇಶನ ವಿವರಗಳಿಗೆ ಸಂಬಂಧಿಸಿದಂತೆ 080-23368435 / 23368036 ಹಾಗೂ ಕೆಪಿಪಿಪಿನ ತಾಂತ್ರಿಕ ವಿಚಾರಣೆಗೆ ಸಂಬಂಧಿಸಿದಂತೆ 080-46010000 / 68948777 ಸಂಪರ್ಕಿಸಿ
ಸಹಾಯವಾಣಿ/ವಾಟ್ಸ್‌ಪ್: 9483166622 (24X7). @BDAOfficialGok

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಒಂದುವೇಳೆ ಮೇಲ್ಕಂಡ ಅಧಿಕಾರಿಗಳಿಂದ ಯಾವುದೇ ಸಹಕಾರ ಸಿಗದಿದ್ದಲ್ಲಿ
ಬಿಡಿಎ ಆಯುಕ್ತರ ಸಹಾಯವಾಣಿ ಸಂಖ್ಯೆ: **9663369000** (ವಾಟ್ಸ್‌ಆ್ಯಪ್‌ನಲ್ಲಿ ಮಾತ್ರ)ಯನ್ನು ಸಂಪರ್ಕಿಸಿ.

ನಂ. ಬೆಂಅಪ್ರಾ/ಅಸ/ಇ-ಹರಾಜು/ಟಿ-03/2026-27, ದಿನಾಂಕ: 02.05.2026

ಸಹಿ/- ಅಭಿಯಂತರ ಸದಸ್ಯರು

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಎಂ ಜಿ ರಸ್ತೆ ಶಾಖೆ, # 86, ಸ್ಪೆನ್ಸರ್ ಟವರ್ಸ್, ಎಂ ಜಿ ರಸ್ತೆ, ಬೆಂಗಳೂರು, ಬೆಂಗಳೂರು –560001
ಇ–ಮೇಲ್ : cb0404@canarabank.com

ಸಾಲಗಾರರಿಗೆ/ಜಾಮೀನುದಾರರಿಗೆ/ಅಡಮಾನುದಾರರಿಗೆ ತಗಾದೆ ಸೂಚನೆ

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೆಕ್ಷನ್ 13(2)ರನ್ನು ಓದಿಕೊಂಡಂತೆ ನೋಟೀಸು ಗೆ,

ಸಾಲಗಾರರು : (1) ಮೆ. ಚಂದನ ಎಲೆಕ್ಟ್ರಿಕಲ್ಸ್,
ಇದನ್ನು ಪ್ರತಿನಿಧಿಸುವ ಮಾಲೀಕರು: ಶ್ರೀ ಸುರೇಶ್ ಕೆ ಎಲ್ (ಇನ್ನು ಮುಂದೆ ಇವರನ್ನು "ಸಾಲಗಾರರು ಎಂದು ಉಲ್ಲೇಖಿಸಲಾಗುವುದು), 101 4ನೇ ಕ್ರಾಸ್, ರಾಣಿ ಚನಮ್ಮ ಪಾರ್ಕ್ ಹತ್ತಿರ, ಆದರ್ಶ ನಗರ, ರಾಣಿ ಚೆನ್ನಮ್ಮ ಪಾರ್ಕ್ ಎದುರು, ನಾಗರಭಾವಿ 1ನೇ ಹಂತ, ಬೆಂಗಳೂರು, ಕರ್ನಾಟಕ–560072
(2) ಶ್ರೀ. ಸುರೇಶ್ ಕೆ ಎಲ್ (ಮಾಲೀಕರು) ಬಿನ್ ಶ್ರೀ. ಲಕ್ಷ್ಮಣೇಗೌಡ, 19 ಫ್ಲಾಟ್ ನಂ. ಜಿ 03, ಪ್ಯಾಲೇಸ್ ಹೈಟ್ಸ್ ಅಪಾರ್ಟ್‌ಮೆಂಟ್, ಪ್ಯಾಲೇಸ್ ಕ್ರಾಸ್ ರೋಡ್, ಚಕ್ರವರ್ತಿ ಲೇಔಟ್, ವಸಂತ ನಗರ, ಬೆಂಗಳೂರು– 560020
ಮತ್ತೊಂದು ವಿಳಾಸ : ಶ್ರೀ ಸುರೇಶ್ ಕೆ ಎಲ್, ಬಿನ್ ಶ್ರೀ. ಲಕ್ಷ್ಮಣೇಗೌಡ, ನಂ.212, ಆರ್‌ಎನ್‌ಟಿ ರಸ್ತೆ, ಗಾಯತ್ರಿ ಎಕ್ಸ್‌ಟೆನ್ಷನ್, ಚನ್ನರಾಯಪಟ್ಟಣ, ಹಾಸನ ಜಿಲ್ಲೆ, ಕರ್ನಾಟಕ–573116
(3) ಶ್ರೀ. ಕೆ ಇಬ್ರಾಹಿಂ (ಇನ್ನು ಮುಂದೆ ಇವರನ್ನು "ಜಾಮೀನುದಾರರು" ಎಂದು ಉಲ್ಲೇಖಿಸಲಾಗುವುದು), ನಂ. 28, 8ನೇ ಮೇನ್, 9ನೇ ಕ್ರಾಸ್, ಜಯನಗರ 2ನೇ ಬ್ಲಾಕ್, ಬೆಂಗಳೂರು– 560032

ಕೆಳ ಸಹಿದಾರರು ಅಧಿಕೃತ ಅಧಿಕಾರಿ **ಕೆನರಾ ಬ್ಯಾಂಕ್, ಎಂ ಜಿ ರಸ್ತೆ, ಶಾಖೆ (0404)** (ಇನ್ನು ಮುಂದೆ **"ಸುರಕ್ಷಿತ ಸಾಲದಾತರು"** ಎಂದು ಉಲ್ಲೇಖಿಸಲಾಗುತ್ತದೆ), ಇವರು 2002 ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆಯ ಜಾರಿ ಕಾಯ್ದೆಯಡಿಯಲ್ಲಿ ನೇಮಕಗೊಂಡಿದ್ದಾರೆ (ಇನ್ನು ಮುಂದೆ **"ಕಾಯ್ದೆ"** ಎಂದು ಉಲ್ಲೇಖಿಸಲಾಗುತ್ತದೆ), ಈ ಸೂಚನೆಯನ್ನು ನಿಮಗೆ ಈ ಕೆಳಗಿನಂತೆ ನೀಡಲಾಗಿದೆ:

ಸಾಲಗಾರರಾದ ನೀವು, **ಶ್ರೀ. ಸುರೇಶ್ ಕೆ ಎಲ್ ಮತ್ತು ಮೆ. ಚಂದನ ಎಲೆಕ್ಟ್ರಿಕಲ್ಸ್** (ಇನ್ನು ಮುಂದೆ ಇವರನ್ನು "ಸಾಲಗಾರರು ಎಂದು ಉಲ್ಲೇಖಿಸಲಾಗುವುದು), **ಪ್ರತಿನಿಧಿಸುವ ಮಾಲೀಕರು ಶ್ರೀ. ಸುರೇಶ್.ಕೆ.ಎಲ್** ರವರು ಈ ಕೆಳಗಿನ ಷೆಡ್ಯೂಲ್ ಎ ರಲ್ಲಿ ಹೇಳಲಾದ ಸಾಲ ಸೌಲಭ್ಯ/ ಸೌಲಭ್ಯಗಳನ್ನು ಪಡೆದುಕೊಂಡಿದ್ದೀರಿ ಮತ್ತು ಸುರಕ್ಷಿತ ಸಾಲಗಾರರ ಪರವಾಗಿ ಭದ್ರತಾ ಒಪ್ಪಂದ/ಗಳನ್ನು ಮಾಡಿ ಕೊಂಡಿದ್ದೀರಿ. ಹೇಳಲಾದ ಹಣಕಾಸಿನ ಸಹಾಯವನ್ನು ಪಡೆಯುವಾಗ, ಮೇಲೆ ತಿಳಿಸಲಾದ ಒಪ್ಪಂದಗಳ ನಿಯಮಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ ಸಾಲದ ಮೊತ್ತ/ಗಳನ್ನು ಮರುಪಾವತಿಸಲು ನೀವು ಸ್ಪಷ್ಟವಾಗಿ ಬದ್ಧರಾಗಿದ್ದೀರಿ.

ಸಾಲಗಾರರಾದ ನೀವು **ಶ್ರೀ ಕೆ ಇಬ್ರಾಹಿಂ** (ಇನ್ನು ಮುಂದೆ ಇವರನ್ನು "ಜಾಮೀನುದಾರರು" ಎಂದು ಉಲ್ಲೇಖಿಸಲಾಗುವುದು), ಎಲ್ಲಾ ಹಣದ ಬೇಡಿಕೆಯ ಮೇರೆಗೆ ಪಾವತಿಯನ್ನು ಖಾತರಿಪಡಿಸುತ್ತದೆ ಮತ್ತು ಸಾಲಗಾರರಿಂದ ಸುರಕ್ಷಿತದ ಸಾಲಗಾರನಿಗೆ ಬಾಕಿ ಇರುವ ಅಥವಾ ಉಂಟಾದ ಎಲ್ಲಾ ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳನ್ನು (ನಿಧಿ ಆಧಾರಿತ/ನಿಧಿಯೇತರ) ಸಾಲ ಸೌಲಭ್ಯಗಳಿಗಾಗಿ **ರೂ. 60,00,000.00 (ರೂಪಾಯಿ ಅರವತ್ತು ಲಕ್ಷ ಮಾತ್ರ)** ಮಿತಿಯವರೆಗೆ ಬಡ್ಡಿಯೊಂದಿಗೆ ಪಾವತಿಸಬೇಕಿದೆ.

ನೀವು ಸೆಕ್ಯೂರ್ಡ್ ಸ್ವತ್ತುಗಳ ವಿರುದ್ಧ ಒಪ್ಪಂದಗಳನ್ನು ಮಾಡಿಕೊಂಡಿದ್ದೀರಿ ಅದನ್ನು ಕೆಳಗೆ ಷೆಡ್ಯೂಲ್ ಬಿ ರಲ್ಲಿ ವಿವರಿಸಲಾಗಿದೆ.

ಆದಾಗ್ಯೂ, **14.11.2025 ಮತ್ತು 02.02.2026** ರಿಂದ **ಮೆ. ಚಂದನ ಎಲೆಕ್ಟ್ರಿಕಲ್ಸ್ ಮತ್ತು ಶ್ರೀ ಸುರೇಶ್ ಕೆ ಎಲ್** (ಇನ್ನು ಮುಂದೆ ಇವರನ್ನು "ಸಾಲಗಾರರು ಎಂದು ಉಲ್ಲೇಖಿಸಲಾಗುವುದು) ರವರಿಗೆ ಸದರಿ ಹಣಕಾಸು ನೆರವು/ಸಾಲ ಸೌಲಭ್ಯಗಳ ಕಾರ್ಯಾಚರಣೆ ಮತ್ತು ನಡವಳಿಕೆ ಅನಿಯಮಿತವಾಗಿದೆ. ಸುರಕ್ಷಿತ ಸ್ವತ್ತುಗಳು ನಿರ್ವಹಿಸುವ ಖಾತೆ ಪುಸ್ತಕಗಳು ಸುರಕ್ಷಿತ ಸಾಲಗಾರನಿಗೆ ಸಾಲಗಾರರ ಹೊಣೆಗಾರಿಕೆಯು **ರೂ. 3,49,92,743.42 (ರೂಪಾಯಿ ಮೂರು ಕೋಟಿ ನಲವತ್ತೊಂಭತ್ತು ಲಕ್ಷದ ತೊಂಭತ್ತೆರಡು ಸಾವಿರದ ಏಳುನೂರ ನಲವತ್ತಮೂರು ಮತ್ತು ನಲವತ್ತೆರಡು ಪೈಸೆ ಮಾತ್ರ)** ಮತ್ತು ಅದರ ಮೇಲಿನ ಮತ್ತಷ್ಟು ಬಡ್ಡಿ ಮತ್ತು ಶುಲ್ಕಗಳ ಮೊತ್ತವನ್ನು ತೋರಿಸುತ್ತದೆ. ಇವುಗಳ ವಿವರಗಳನ್ನು ಭವಿಷ್ಯದ ಬಡ್ಡಿದರದೊಂದಿಗೆ ಇಲ್ಲಿ ಷೆಡ್ಯೂಲ್ ಸಿ ರಲ್ಲಿ ನೀಡಲಾಗಿದೆ. ಸಾಲಗಾರ/ಖಾತರಿದಾರರು ಮೇಲಿನ ಒಪ್ಪಂದದ ನಿಯಮಗಳನ್ನು ಪಾಲಿಸಲು ವಿಫಲರಾಗಿದ್ದಾರೆ ಮತ್ತು ಸುರಕ್ಷಿತ ಸಾಲಗಾರರ ಬಾಕಿಗಳನ್ನು ಪಾವತಿಸುವಲ್ಲಿ ತಪ್ಪಿಸಿಕೊಳ್ಳುತ್ತಿದ್ದಾರೆ ಎಂದು ಮತ್ತಷ್ಟು ಹೇಳಲಾಗಿದೆ. ಮೇಲೆ ಹೇಳಲಾದ ಹಣಕಾಸಿನ ನೆರವು/ಸಾಲ ಸೌಲಭ್ಯ/ಗಳ ಕಾರ್ಯಾಚರಣೆ ಮತ್ತು ನಡವಳಿಕೆ ಸ್ಥಗಿತಗೊಂಡಿದೆ ಮತ್ತು ಅಸಲು ಸಾಲ/ಕಂತು ಮತ್ತು ಅದರ ಮೇಲಿನ ಬಡ್ಡಿಯನ್ನು ಮರುಪಾವತಿಸುವಲ್ಲಿ ಬದ್ಧತೆಯ ಪರಿಣಾಮವಾಗಿ, ಸುರಕ್ಷಿತ ಸಾಲಗಾರನು ಭಾರತೀಯ ರಿಸರ್ವ್ ಬ್ಯಾಂಕ್ ಹೊರಡಿಸಿದ ಆಸ್ತಿ ವರ್ಗೀಕರಣಕ್ಕೆ ಸಂಬಂಧಿಸಿದ ನಿರ್ದೇಶನಗಳು/ಮಾರ್ಗಸೂಚಿಗಳಿಗೆ ಅನುಗುಣವಾಗಿ **ಮೆ. ಚಂದನ ಎಲೆಕ್ಟ್ರಿಕಲ್ಸ್‌ಗೆ 14.02.2026 ರಂದು ಮತ್ತು ಶ್ರೀ ಸುರೇಶ್ ಕೆ ಎಲ್‌ಗೆ 02.05.2026** ರಂದು ಸಾಲವನ್ನು ಅನುತ್ಪಾದಕ ಆಸ್ತಿ (ಎನ್‌ಪಿಎ) ಎಂದು ವರ್ಗೀಕರಿಸಲು ನಿರ್ಬಂಧಿಸಲಾಗಿದೆ.

ಈ ನೋಟೀಸಿನ ಮೂಲಕ ಸುರಕ್ಷಿತ ಸಾಲದಾತರು ಸಾಲಗಾರರು ಬಾಕಿ/ಬಾಕಿ ಇರುವ ಹೊಣೆಗಾರಿಕೆಗಳನ್ನು ಮರುಪಾವತಿಸಲು ವಿಫಲರಾಗಿದ್ದಾರೆ ಮತ್ತು ನಿರ್ಲಕ್ಷಿಸಿದ್ದಾರೆ ಎಂದು ನಿಮ್ಮ ಗಮನಕ್ಕೆ ತರುತ್ತಿದ್ದಾರೆ ಮತ್ತು ಆದ್ದರಿಂದ ಕಾಯಿದೆಯ ಸೆಕ್ಷನ್ 13(2) ರ ಅಡಿಯಲ್ಲಿ, ಈ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ **60 ದಿನಗಳ ಒಳಗೆ ಷೆಡ್ಯೂಲ್** ಸಿ ಯಲ್ಲಿ ಹೇಳಿರುವಂತೆ ಸಾಲಗಾರರ ಹೊಣೆಗಾರಿಕೆಗಳನ್ನು ಪೂರ್ಣವಾಗಿ ಬಿಡುಗಡೆ ಮಾಡಲು ಈ ಸೂಚನೆಯನ್ನು ನೀಡುವ ಮೂಲಕ ನಿಮ್ಮನ್ನು ಒತ್ತಾಯಿಸುತ್ತಿದ್ದಾರೆ. ಇದಲ್ಲದೆ, ಸುರಕ್ಷಿತ ಸಾಲದಾತರು ತಮ್ಮ ಬಾಕಿಗಳನ್ನು ವಸೂಲಿ ಮಾಡುವಲ್ಲಿ ಕೈಗೊಂಡ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಎಲ್ಲಾ ವೆಚ್ಚಗಳು, ಶುಲ್ಕಗಳು, ವೆಚ್ಚಗಳು ಮತ್ತು ಪ್ರಾಸಂಗಿಕ ವೆಚ್ಚಗಳೊಂದಿಗೆ ಷೆಡ್ಯೂಲ್ ಸಿ ಯಲ್ಲಿ ಉಲ್ಲೇಖಿಸಲಾದ ದರದಲ್ಲಿ ಭವಿಷ್ಯದ ಬಡ್ಡಿಯನ್ನು ಪಾವತಿಸಲು ನೀವು ಹೊಣೆಗಾರರಾಗಿದ್ದೀರಿ ಎಂಬುದನ್ನು ನಿಮ್ಮ ಗಮನಕ್ಕೆ ತರಲಾಗುತ್ತಿದೆ.

ದಯವಿಟ್ಟು ಗಮನಿಸಿ, ನೀವು ಬ್ಯಾಂಕಿಗೆ ಮರುಪಾವತಿಸಲು ವಿಫಲವಾದರೆ, ಮೇಲೆ ತಿಳಿಸಿದ **ರೂ. 3,49,92,743.42 (ರೂಪಾಯಿ ಮೂರು ಕೋಟಿ ನಲವತ್ತೊಂಭತ್ತು ಲಕ್ಷದ ತೊಂಭತ್ತೆರಡು ಸಾವಿರದ ಏಳುನೂರ ನಲವತ್ತಮೂರು ಮತ್ತು ನಲವತ್ತೆರಡು ಪೈಸೆ ಮಾತ್ರ)** ಜೊತೆಗೆ ಮತ್ತಷ್ಟು ಬಡ್ಡಿ (ಷೆಡ್ಯೂಲ್ ಸಿ – ರಲ್ಲಿ ನೀಡಲಾಗಿದೆ) ಈ ನೋಟೀಸ್‌ನಲ್ಲಿ ಮೇಲೆ ತಿಳಿಸಿದಂತೆ ಸೆಕ್ಷನ್ 13(2) ಕಾಯ್ದೆಯ ಅನ್ವಯ ಬಡ್ಡಿ, ಪ್ರಾಸಂಗಿಕ . ವೆಚ್ಚಗಳು, ಖರ್ಚಿನ ಮೊತ್ತ ಪಾವತಿ ಮಾಡದಿದ್ದಲ್ಲಿ ಬ್ಯಾಂಕ್ ನಿಮ್ಮ ಹೊಣೆಗಾರಿಕೆ ಮತ್ತು ವೆಚ್ಚದಲ್ಲಿ ಮೇಲೆ ತಿಳಿಸಿರುವ ಭದ್ರತೆ ಸ್ವತ್ತಿನ ಮೇಲೆ ಸದರಿ ಪ್ರಕರಣದ ವರ್ಗ (4)(ಎ) ಮತ್ತು (ಬಿ) ಸೆಕ್ಷನ್ 13 ಅನ್ವಯ – ಎಲ್ಲಾ ಅಥವಾ ಯಾವುದಾದರು ಅಧಿಕಾರ ಚಲಾಯಿಸಿ ಕ್ರಮವನ್ನು ತೆಗೆದುಕೊಳ್ಳಲಾಗುವುದು. ಈ ಸಮಸ್ಯೆಯ –ಗಂಭೀರತೆಯನ್ನು ತಿಳಿಸಲು ಅದರ ಸಾರವನ್ನು ಕೆಳಗೆ ನೀಡಲಾಗಿದೆ:

13(4)– ಸಾಲಗಾರರು/ಜಾಮೀನುದಾರರು ಸಬ್ ಸೆಕ್ಷನ್(2) ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಹೊಣೆಗಾರಿಕೆಯನ್ನು ಪೂರ್ಣವಾಗಿ ಪೂರೈಸಲು ವಿಫಲವಾದರೆ, ಸುರಕ್ಷಿತ ಸಾಲಗಾರನು ತನ್ನ ಸುರಕ್ಷಿತ ಸಾಲವನ್ನು ವಸೂಲಿ ಮಾಡಲು ಈ ಕೆಳಗಿನ ಒಂದು ಅಥವಾ ಹೆಚ್ಚಿನ ಕ್ರಮಗಳನ್ನು ತೆಗೆದುಕೊಳ್ಳಬಹುದು, ಅವುಗಳೆಂದರೆ;

(ಎ) ಸಾಲಗಾರರು/ಖಾತರಿದಾರರ ಸುರಕ್ಷಿತ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವುದು, ಇದರಲ್ಲಿ ಸುರಕ್ಷಿತ ಆಸ್ತಿಯನ್ನು ಅರಿತುಕೊಳ್ಳಲು ಗುತ್ತಿಗೆ, ನಿಯೋಜನೆ ಅಥವಾ ಮಾರಾಟದ ಮೂಲಕ ವರ್ಗಾವಣೆ ಮಾಡುವ ಹಕ್ಕಿದೆ;

(ಬಿ) ಸುರಕ್ಷಿತ ಆಸ್ತಿಯನ್ನು ಅರಿತುಕೊಳ್ಳಲು ಗುತ್ತಿಗೆ, ನಿಯೋಜನೆ ಅಥವಾ ಮಾರಾಟದ ಮೂಲಕ ವರ್ಗಾವಣೆ । ಮಾಡುವ ಹಕ್ಕನ್ನು ಒಳಗೊಂಡಂತೆ ಸಾಲಗಾರನ ವ್ಯವಹಾರದ ನಿರ್ವಹಣೆಯನ್ನು ವಹಿಸಿಕೊಳ್ಳುವುದು; ಪರಂತು, ಗುತ್ತಿಗೆ, ನಿಯೋಜನೆ ಅಥವಾ ಮಾರಾಟದ ಮೂಲಕ ವರ್ಗಾವಣೆ ಮಾಡುವ ಹಕ್ಕನ್ನು ಮಾತ್ರ ಚಲಾಯಿಸಬೇಕು.

ಸಾಲಗಾರನ ವ್ಯವಹಾರದ ಗಣನೀಯ ಭಾಗವನ್ನು ಸಾಲಕ್ಕೆ ಭದ್ರತೆಯಾಗಿ ಇರಿಸಲಾಗಿರುವಲ್ಲಿ;

ಇದಲ್ಲದೆ, ಇಡೀ ವ್ಯವಹಾರದ ಅಥವಾ ವ್ಯವಹಾರದ ಒಂದು ಭಾಗದ ನಿರ್ವಹಣೆಯನ್ನು ಬೇರ್ಪಡಿಸಬಹುದಾದರೆ, ಸುರಕ್ಷಿತ ಸಾಲದಾತನು ಸಾಲದ ಭದ್ರತೆಗೆ ಮತ್ತು ಸದರಿ ಕಾಯಿದೆಯ ಇತರ ಅನ್ವಯವಾಗುವ ನಿಬಂಧನೆಗಳ ಅಡಿಯಲ್ಲಿ ಸಾಲಗಾರನ ವ್ಯವಹಾರದ ನಿರ್ವಹಣೆಯನ್ನು ವಹಿಸಿಕೊಳ್ಳುತ್ತಾನೆ. ಸುರಕ್ಷಿತ ಸ್ವತ್ತುಗಳನ್ನು ಮರುಪಡೆದು ಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ, ಕಾಯಿದೆಯ ಸೆಕ್ಷನ್ 13 ರ ಉಪ–ಸೆಕ್ಷನ್ (8) ರ ನಿಬಂಧನೆಗಳಿಗೆ ನಿಮ್ಮ ಗಮನವನ್ನು ಆಹ್ವಾನಿಸಲಾಗಿದೆ. ಸೆಕ್ಷನ್ 13(13) ರ ಪ್ರಕಾರ ಸಾಲಗಾರರು/ಖಾತರಿದಾರರು ಸುರಕ್ಷಿತ ಸಾಲಗಾರರ ಲಿಖಿತ ಒಪ್ಪಿಗೆಯನ್ನು ಪಡೆಯದೆ ಇಲ್ಲಿ ಪಟ್ಟಿ ಮಾಡಲಾದ ಬಿ ಯಲ್ಲಿ ವಿವರಿಸಲಾದ ಸದರಿ ಸುರಕ್ಷಿತ ಸ್ವತ್ತುಗಳನ್ನು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು ಎಂದು ನಿಮಗೆ ತಿಳಿಸಲಾಗಿದೆ. ಈ ಕಾಯ್ದೆಯಡಿಯಲ್ಲಿ ಒದಗಿಸಲಾದ ಈ ಶಾಸನಬದ್ಧ ತಡೆಯಾಜ್ಞೆ/ನಿರ್ಬಂಧದ ಯಾವುದೇ ಉಲ್ಲಂಘನೆಯು ಅಪರಾಧವಾಗಿದೆ ಮತ್ತು ಯಾವುದೇ ಕಾರಣಕ್ಕಾಗಿ, ಸುರಕ್ಷಿತ ಸ್ವತ್ತುಗಳನ್ನು, ಸಾಮಾನ್ಯ ವ್ಯವಹಾರದ ಸಂದರ್ಭದಲ್ಲಿ ಮಾರಾಟ ಮಾಡಿದರೆ ಅಥವಾ ಗುತ್ತಿಗೆಗೆ ನೀಡಿದರೆ, ಮಾರಾಟದ ಆದಾಯ ಅಥವಾ ಗಳಿಸಿದ ಆದಾಯವನ್ನು ಸುರಕ್ಷಿತ ಸಾಲಗಾರರಿಗೆ ಠೇವಣಿ ಮಾಡಲಾಗುತ್ತದೆ ಎಂದು ನಿಮ್ಮ ಗಮನಕ್ಕೆ ತರಲಾಗಿದೆ. ಈ ನಿಟ್ಟಿನಲ್ಲಿ ನೀವು ಅಂತಹ ಪೂರ್ತಿ ಪಾವತಿಯವರೆಗೆ/ಆದಾಯಕ್ಕೆ ಸರಿಯಾದ ಖಾತೆಗಳನ್ನು ಸಲ್ಲಿಸಬೇಕು. ಈ ಡಿಮ್ಯಾಂಡ್ ನೋಟೀಸನ್ನು ಯಾವುದೇ ಪೂರ್ವಾಗ್ರಹವಿಲ್ಲದೆ ಇದೆ ಮತ್ತು ಸುರಕ್ಷಿತ ಸಾಲದಾತರು ನೀವು ಕಂಡುಕೊಂಡ ಮತ್ತು ಪಾವತಿಸಬೇಕಾದ ಮೊತ್ತಗಳಿಗೆ ಹೆಚ್ಚಿನ ಬೇಡಿಕೆಗಳನ್ನು ಒಳಗೊಂಡಂತೆ ಹೊಂದಿರಬಹುದಾದ ಯಾವುದೇ ಇತರ ಹಕ್ಕುಗಳು ಅಥವಾ ಪರಿಹಾರಗಳ ಮನ್ನಾ ಎಂದು ಅರ್ಥೈಸಿ ಕೊಳ್ಳಲಾಗುವುದಿಲ್ಲ.

ಇದು ಕಾಯ್ದೆ ಮತ್ತು/ಅಥವಾ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಅಡಿಯಲ್ಲಿ ಸುರಕ್ಷಿತ ಸಾಲಗಾರರಿಗೆ ಲಭ್ಯವಿರುವ ಯಾವುದೇ ಇತರ ಹಕ್ಕುಗಳಿಗೆ ಯಾವುದೇ ಪೂರ್ವಾಗ್ರಹವಿಲ್ಲ.

ದಯವಿಟ್ಟು ಈ ಸೂಚನೆಯ ಅಡಿಯಲ್ಲಿರುವ ಬೇಡಿಕೆಯನ್ನು ಪಾಲಿಸಿ ಮತ್ತು ಎಲ್ಲಾ ಅಹಿತಕರ ಘಟನೆಗಳನ್ನು ತಪ್ಪಿಸಿ. ಪಾಲಿಸದಿದ್ದಲ್ಲಿ, ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಮತ್ತು ಎಲ್ಲಾ ವೆಚ್ಚಗಳು ಮತ್ತು ಪರಿಣಾಮಗಳಿಗೆ ನಿಮ್ಮನ್ನು ಹೊಣೆಗಾರರನ್ನಾಗಿ ಮಾಡಲಾಗುತ್ತದೆ.

ಷೆಡ್ಯೂಲ್ – ಎ
ಸಾಲಗಾರರು ಪಡೆದುಕೊಂಡಿರುವ ಸಾಲ ಸೌಲಭ್ಯ / ಸೌಲಭ್ಯಗಳ ವಿವರಗಳು

ಕ್ರ. ಸಂ.	ಸಾಲ ಸಂಖ್ಯೆ	ಸಾಲ/ಮಿತಿಯ ಸ್ವರೂಪ	ಮಂಜೂರಾತಿ ದಿನಾಂಕ	ಮೊತ್ತ	ಎನ್‌ಪಿಎ ದಿನಾಂಕ	ಸಾಲಗಾರರ ಹೆಸರು
1	0404261009112	MSME OD/OCC	28.12.2021	Rs.220.00 Lakh	14.02.2026	M/s Chandana Electricals Represented by Prop Mr. Suresh K L
2	170001616173	GECL-1.0	08.11.2021	Rs.17.18 Lakh	14.02.2026	M/s Chandana Electricals Represented by Prop Mr. Suresh K L
3	0404605000018	Mortgage	26.06.2020	Rs.60.00 Lakh	02.05.2026	Mr. Suresh K L
4	160001104817	Housing Finance	23.09.2022	Rs.87.00 Lakh	02.05.2026	Mr. Suresh K L

ಷೆಡ್ಯೂಲ್ : ಬಿ
[ಭದ್ರತಾ ಆಸ್ತಿಗಳ ವಿವರಗಳು]

ಸ್ವತ್ತಿನ ಶೀರ್ಷಿಕೆದಾರರು : ಮೆ. ಚಂದನ ಎಲೆಕ್ಟ್ರಿಕಲ್ಸ್.
ಚರಾಸ್ತಿ : ಷೇರುಗಳು ಮತ್ತು ಪುಸ್ತಕ ಸಾಲಗಳ ಹೈಪೋಥಿಕೇಶನ್.
ಸ್ವತ್ತಿನ ಶೀರ್ಷಿಕೆದಾರರು : ಶ್ರೀ. ಸುರೇಶ್. ಕೆ.ಎಲ್
ರಾಜ್ಯದ ಸರ್ಕಾರಿ, ಅರೆ ಸರ್ಕಾರಿ ಕಚೇರಿಗಳು ಹಾಗೂ ಈ ಶಾಲಾ-ಕಾಲೇಜುಗಳಲ್ಲಿ ಅಂಬೇಡ್ಕರ್ ಚಿತ್ರ ಹಾಕುವುದನ್ನು ಕಡ್ಡಾಯ ಮಾಡಿ ಆದೇಶಿಸಿದರು.

ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ನಿಲಯ

ಕಿತ್ತೂರು ರಾಣಿ ಚೆನ್ನಮ್ಮ ಹೆಸರಿನಲ್ಲಿ ಹೆಣ್ಣು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗಾಗಿ ರಾಜ್ಯಾದ್ಯಂತ ಪ್ರತ್ಯೇಕ ವಸತಿ ನಿಲಯಗಳನ್ನು ಸ್ಥಾಪಿಸಿದರು. ಮೊರಾರ್ಜಿ ದೇಸಾಯಿ ಹೆಸರಿನಲ್ಲಿ ಪರಿಶಿಷ್ಟರಿಗಾಗಿ ಸ್ಥಾಪಿಸಲಾಗಿದ್ದ ವಸತಿ ನಿಲಯಗಳ ಸಂಖ್ಯೆಯನ್ನು ಹೆಚ್ಚಿಸಿದರು.

ಹೋರಾಟದ ಛಲ ಕಲಿಸಿದ, ಆತ್ಮವಿಶ್ವಾಸ ತುಂಬಿದ ಮಹಾನ್ ನಾಯಕ ಬಿಎಸ್‌ವೈ

ಚಿತ್ರದುರ್ಗದಲ್ಲಿ ಅಭಿಮಾನೋತ್ಸವ, ಆದರೆ, ನನ್ನ ಮಟ್ಟಿಗೆ ಇದು ನಾವೆಲ್ಲರೂ ಸೇರಿ ಯಡಿಯೂರಪ್ಪನವರಿಗೆ ಸಲ್ಲಿಸುವ 'ಕೃತಜ್ಞತಾ ಉತ್ಸವ'





• ಬಿ. ಸುರೇಶಗೌಡ
ತುಮಕೂರು ಗ್ರಾಮಾಂತರ ಬಿಜೆಪಿ ಶಾಸಕರು

2003 ರ ಆಗಸ್ಟ್ 15ನೇ ತಾರೀಖು ನಾನು ಯಡಿಯೂರಪ್ಪ ಮತ್ತು ಅನಂತಕುಮಾರ್ ಅವರ ಸಮ್ಮುಖದಲ್ಲಿ ಒಂದು ಅದ್ದೂರಿ ಸಮಾರಂಭದಲ್ಲಿ ಬಿಜೆಪಿ ಸೇರಿದೆ. ಆಗಿನಿಂದ ಈಗಿನವರೆಗೆ ಯಡಿಯೂರಪ್ಪನವರು ನನ್ನ ಬಗ್ಗೆ ತೋರಿದ ಪ್ರೀತಿ ಮತ್ತು ವಿಶ್ವಾಸದಲ್ಲಿ ನನಗೆ ಎಳ್ಳು ಕಾಳಿನಷ್ಟೂ ಕೊರತೆ ಕಂಡಿಲ್ಲ. ಅವರ ಪ್ರೀತಿ ಅಷ್ಟು ಅವಿಚ್ಛಿನ್ನವಾದುದು.

ಕರ್ನಾಟಕ ಕಂಡ ಅತ್ಯಂತ ಜನಪ್ರಿಯ ಮುಖ್ಯಮಂತ್ರಿ ಮತ್ತು ರೈತ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಮತ್ತು ನನ್ನ ನಡುವಿನ ಒಡನಾಟ ಎರಡು ದಶಕಗಳಿಗೂ ಮೀರಿದ್ದು. ನನ್ನನ್ನು ರಾಜಕೀಯಕ್ಕೆ ತಂದವರು ಯಡಿಯೂರಪ್ಪನವರು ಮತ್ತು ಅನಂತಕುಮಾರ್ ಅವರು. ವಿದ್ಯಾರ್ಥಿ ನಾಯಕನಾಗಿದ್ದ ನನ್ನನ್ನು ಎಬಿವಿಪಿಗೆ ಸೇರಿಸಿ ರಾಜಕೀಯ ಸೇರಲು ಕಾರಣರಾದವರು ನನಗೆ ಗುರು ಸಮಾನರಾದ ಪ್ರೊ.ಎಂ.ಕೆ. ಶ್ರೀಧರ್ ಅವರು.

2003 ರ ಆಗಸ್ಟ್ 15 ನೇ ತಾರೀಖು ನಾನು ಯಡಿಯೂರಪ್ಪ ಮತ್ತು ಅನಂತಕುಮಾರ್ ಅವರ ಸಮ್ಮುಖದಲ್ಲಿ ಒಂದು ಅದ್ದೂರಿ ಸಮಾರಂಭದಲ್ಲಿ ಬಿಜೆಪಿ ಸೇರಿದೆ. ಆಗಿನಿಂದ ಈಗಿನವರೆಗೆ ಯಡಿಯೂರಪ್ಪನವರು ನನ್ನ ಬಗ್ಗೆ ತೋರಿದ ಪ್ರೀತಿ ಮತ್ತು ವಿಶ್ವಾಸದಲ್ಲಿ ನನಗೆ ಎಳ್ಳು ಕಾಳಿನಷ್ಟೂ ಕೊರತೆ ಕಂಡಿಲ್ಲ. ಅವರ ಪ್ರೀತಿ ಅಷ್ಟು ಅವಿಚ್ಛಿನ್ನವಾದುದು.

ನಾನು ಬಿಜೆಪಿಗೆ ಸೇರಿದಾಗಲಿನ್ನೂ ತುಮಕೂರು ಗ್ರಾಮಾಂತರ ವಿಧಾನಸಭಾ ಕ್ಷೇತ್ರ ರೂಪುಗೊಂಡಿರಲಿಲ್ಲ. ಆಗ ಅದು ಕುಣಿಗಲ್ ವಿಧಾನಸಭಾ ಕ್ಷೇತ್ರ ಆಗಿತ್ತು. ನಾನು ಬಿಜೆಪಿ ಸೇರಿದ ಕೂಡಲೇ 2004 ರ ವಿಧಾನಸಭಾ ಚುನಾವಣೆ ಘೋಷಣೆಯಾದುವು. ಯಡಿಯೂರಪ್ಪನವರು ನನಗೆ ಕುಣಿಗಲ್‌ನಿಂದ ಟಿಕೆಟ್ ಕೊಟ್ಟರು. ನಮ್ಮ ಭಾಗದಲ್ಲಿ ಜನಪ್ರಿಯ ನಾಯಕರಾಗಿದ್ದ ವೈ.ಕೆ. ರಾಮಯ್ಯ ಅವರ ಪತ್ನಿ ಅನಸೂಯಮ್ಮ ಅವರನ್ನು ನಾನೇ ಮುಂದೆ ನಿಂತು ಬಿಜೆಪಿಗೆ ಸೇರಿಸಿದೆ. ಅವರಿಗೆ ಹುಲಿಯೂರು ದುರ್ಗದಿಂದ ಟಿಕೆಟ್ ಸಿಕ್ಕಿತು. ಆಗಲೇ ನಮಗೆ ಯಡಿಯೂರಪ್ಪ ಅವರ ಕುರಿತು ಎಂಥ ಅಭಿಮಾನ ಬೆಳೆದಿತ್ತು ಎಂದರೆ ವರನಟ ರಾಜ್‌ಕುಮಾರ್ ಅವರ ಕಟೌಟ್ ಹಾಕಿದಷ್ಟು ಎತ್ತರ ಯಡಿಯೂರಪ್ಪ ಅವರ ಕಟೌಟ್‌ಗಳನ್ನು ಕ್ಷೇತ್ರದಲ್ಲೆಲ್ಲ ಹಾಕಿಸಿ ನಾವು ಸಂಭ್ರಮ ಪಟ್ಟಿದ್ದೆವು. ಆ ಚುನಾವಣೆಯಲ್ಲಿ ನಾನೂ ಸೋತೆ. ಮತ್ತು ಅನಸೂಯಮ್ಮ ಅವರೂ ಸೋತರು. ಆದರೆ, ತುಮಕೂರು ಲೋಕಸಭಾ ಕ್ಷೇತ್ರದಿಂದ ಹಿರಿಯರಾದ ಎಸ್. ಮಲ್ಲಿಕಾರ್ಜುನಯ್ಯ ಅವರು ಕೇವಲ 1,700 ಮತಗಳ ಅಂತರದಿಂದ ಗೆಲುವು ಸಾಧಿಸಿದರು.

ಎಂಪಿಎ ಅಧ್ಯಕ್ಷ ಹುದ್ದೆ ಕರೆದು ಕೊಟ್ಟರು

ಮುಂದೆ 2006 ರಲ್ಲಿ ಜೆ.ಡಿ.ಎಸ್ ಸಹಭಾಗಿತ್ವದಲ್ಲಿ 20-20 ತಿಂಗಳ ಸಮ್ಮಿಶ್ರ ಸರ್ಕಾರ ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂತು. ಯಡಿಯೂರಪ್ಪನವರು ಉಪ ಮುಖ್ಯಮಂತ್ರಿಯಾಗಿದ್ದರು. ಅವರು ನನ್ನನ್ನು ಕರೆದು ಮೈಸೂರು ಪೇಪರ್ ಮಿಲ್ಸ್‌ನ ಅಧ್ಯಕ್ಷ ಹುದ್ದೆಗೆ ನೇಮಿಸಿದರು. ಇದು ನಾನು ಕನಸು ಮನಸಿನಲ್ಲಿ ಕೂಡ ನೆನಪಿಸಿಕೊಳ್ಳದ ಹುದ್ದೆಯಾಗಿತ್ತು.




ಹೇಮಾವತಿ ನೀರಿಗಾಗಿ ನಮ್ಮ ಭಾಗದಲ್ಲಿ ನಿರಂತರ ಹೋರಾಟ

2007ರಲ್ಲಿ ಕೊತ್ತಿಗೆರೆ ಕೆರೆ ಒಡೆದ ಪ್ರಕರಣದಲ್ಲಿ ನಾನು ಹೋರಾಟ ಮಾಡಿ 15 ದಿನ ಸೆರೆವಾಸ ಅನುಭವಿಸಿದೆ. ಆಗ ಯಡಿಯೂರಪ್ಪನವರು ನನ್ನ ಬೆಂಬಲಕ್ಕೆ ನಿಂತು ನನಗೆ ಧೈರ್ಯ ತುಂಬಿದ್ದುದನ್ನು ನಾನು ಎಂದಿಗೂ ಮರೆಯಲಾರೆ. 2008 ರಲ್ಲಿ ಕ್ಷೇತ್ರ ಪುನರ್ ವಿಂಗಡಣೆಯಾಗಿ ತುಮಕೂರು ಗ್ರಾಮಾಂತರ ಕ್ಷೇತ್ರ ರಚನೆಯಾಯಿತು. ನನಗೆ ಟಿಕೆಟ್ ಸಿಕ್ಕು 27,000 ಮತಗಳ ಭರ್ಜರಿ ಅಂತರದಿಂದ ಗೆದ್ದೆ. ಅದು ನಾನು ಮೊದಲ ಬಾರಿ ಶಾಸಕನಾದ ಸಂದರ್ಭ.

ಕೇವಲ ಒಂದೂವರೆ ವರ್ಷದಲ್ಲಿ ಜಾರಿಗೊಂಡ ಏತ ನೀರಾವರಿ ಯೋಜನೆ

ಮುಂದೆ ಸಂಪುಟದಲ್ಲಿ ಅನುಮೋದನೆ ಸಿಕ್ಕ 68 ಕೋಟಿ ರೂಪಾಯಿಗಳ ಹೆಬ್ಬೂರು-ಗೂಳೂರು ಏತ ನೀರಾವರಿ ಬೃಹತ್ ಯೋಜನೆಗೆ ಯಡಿಯೂರಪ್ಪನವರೇ ಬಂದು ಗುದ್ದಲಿ ಪೂಜೆ ನೆರವೇರಿಸಿದರು. ಅವರು ಹೇಳಿದಂತೆ ಕೇವಲ ಒಂದೂವರೆ ವರ್ಷದಲ್ಲಿ ಯೋಜನೆ ಪೂರ್ಣಗೊಂಡಿತು. ಕರ್ನಾಟಕದ ಇತಿಹಾಸದಲ್ಲಿ ಹೀಗೆ ಕೇವಲ ಒಂದೂವರೆ ವರ್ಷದಲ್ಲಿ ಇಷ್ಟು ದೊಡ್ಡ ಯೋಜನೆ ಪೂರ್ಣಗೊಂಡುದು ಅದೇ ಮೊದಲು ಎಂದು ಜನಜನಿತವಾಯಿತು.

200 ಗ್ರಾಮಗಳಿಗೆ ಬಹು ಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಯಡಿ ಹೇಮಾವತಿ ನದಿಯಿಂದ ನೀರು ಪೂರೈಸಬೇಕು ಎಂದು ಕೋರಿಕೊಂಡಾಗ ಅದಕ್ಕೆ ಅವರು ತಕ್ಷಣ ಒಪ್ಪಿದರು. ಅದಕ್ಕಾಗಿ 100 ಕೋಟಿ ರೂಪಾಯಿ ಬಿಡುಗಡೆ ಮಾಡಿದರು. ಆ ಎಲ್ಲ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಆಯಿತು. ನನ್ನ ಕ್ಷೇತ್ರದಲ್ಲಿ ಬಸವ ವಸತಿ ಯೋಜನೆಯಡಿ 15,000 ಮನೆಗಳನ್ನು ನಿರ್ಮಿಸಿದೆವು. ಸುವರ್ಣ ಗ್ರಾಮ ಯೋಜನೆಯಡಿ ಎಲ್ಲ ಗ್ರಾಮಗಳಿಗೆ ಸಿಮೆಂಟ್ ರಸ್ತೆಯೂ ಸೇರಿದಂತೆ ಸಕಲ ಸೌಲಭ್ಯಗಳನ್ನು ಒದಿಸಿದೆವು. ನನ್ನ ಕ್ಷೇತ್ರಕ್ಕೆ ಅವರು ಸುಮಾರು 2,000ಕೋಟಿ ರೂಪಾಯಿಗಳ ಅನುದಾನ ಬಿಡುಗಡೆ ಮಾಡಿದರು ಆಗಲೇ ನಾನು ನನ್ನ ಕ್ಷೇತ್ರದಲ್ಲಿ ಆಗಬೇಕಿದ್ದ ಮೂಲ ಸೌಕರ್ಯಗಳನ್ನೆಲ್ಲ ಮಾಡಿಸಲು ಸಾಧ್ಯವಾಯಿತು.



ಕಣ್ಣಂಚಿನಲ್ಲಿ ನೀರು ತರಿಸುವ ಪ್ರೇಮ

ಯಡಿಯೂರಪ್ಪ ಅವರ ಮಾನವೀಯ ಗುಣ ಎಷ್ಟು ದೊಡ್ಡದು ಎಂದರೆ ಅವರು ನಾನು ಮೊದಲ ಸಾರಿ ಶಾಸಕನಾದವನು ಎಂದು ಯಾವ ಭೇದ ಭಾವವನ್ನೂ ಮಾಡಲಿಲ್ಲ. ಮನೆಗೆ ಹೋದರೆ ತಮ್ಮ ಪಕ್ಕದಲ್ಲಿಯೇ ಕೂರಿಸಿಕೊಂಡು ತಿಂಡಿ ತಿನ್ನಲು ಹೇಳುತ್ತಿದ್ದರು. ಊಟದ ಸಮಯವಾಗಿದ್ದರೆ ಜತೆಯಲ್ಲಿಯೇ ಊಟ ಮಾಡಲು ಹೇಳುತ್ತಿದ್ದರು. ಇದನ್ನೆಲ್ಲ ನೆನಪಿಸಿಕೊಂಡಾಗ ನನ್ನ ಕಣ್ಣಿನಲ್ಲಿ ನೀರು ಬರುತ್ತದೆ. ನನ್ನ ತಂದೆ ಮತ್ತು ತಾಯಿ ತೀರಿಕೊಂಡಾಗ ಯಡಿಯೂರಪ್ಪನವರು ಮುಖ್ಯಮಂತ್ರಿಯ ಬಿಡುವಿಲ್ಲದ ಕೆಲಸದ ನಡುವೆಯೂ ಬಂದು ನನಗೆ ಸಾಂತ್ವನ ಹೇಳಿದ್ದನ್ನು ನಾನು ಎಂದಿಗೂ ಮರೆಯಲಾರೆ.

ಇದು ಅಭಿಮಾನೋತ್ಸವವಲ್ಲ, ಕೃತಜ್ಞತಾ ಸಮರ್ಪಣಾ ಉತ್ಸವ

ಅವರು ನನ್ನ ಮೇಲೆ ತೋರಿಸಿದ ಪ್ರೀತಿಯನ್ನು ಭರಿಸಲು ನನ್ನ ಪುಟ್ಟ ಹೃದಯದಲ್ಲಿ ಜಾಗ ಸಾಲದು ಎಂದು ನನಗೆ ಯಾವಾಗಲೂ ಅನಿಸುತ್ತದೆ. ಅವರನ್ನು ಕಂಡಾಗಲೆಲ್ಲ, ಭೇಟಿಯಾದಾಗಲೆಲ್ಲ ಅವರು ನನ್ನ ಕುರಿತು ತೋರಿಸಿದ ಪ್ರೀತಿ ಅಗಾಧವಾದುದು ಮತ್ತು ಅನುಪಮವಾದುದು. ಒಬ್ಬ ತಂದೆ ತನ್ನ ಮಕ್ಕಳಿಗೆ ತೋರಿಸುವಂಥ ಪ್ರೀತಿಯನ್ನು ಅವರು ನನ್ನ ಕುರಿತು ತೋರಿಸಿದ್ದಾರೆ. ನನ್ನ ಮಗಳ ಮದುವೆಯ ಸಮಾರಂಭದಲ್ಲಿ ಅವರು ನಡೆದುಕೊಂಡ ರೀತಿ ಇದಕ್ಕೆ ಒಂದು ನಿದರ್ಶನ. ಆಗ ನಾನೇನು ಶಾಸಕ ಆಗಿರಲಿಲ್ಲ. ಯಡಿಯೂರಪ್ಪನವರು ಬಂದು ಮದುವೆ ಮಂಟಪದಲ್ಲಿ ಗಂಟೆ ಗಟ್ಟಲೆ ಕುಳಿತಿದ್ದರು. ನಮ್ಮ ಅತಿಥಿಯಾಗಿದ್ದ ಅವರು ತಾವೇ ಆತಿಥೇಯರ ಹಾಗೆ ಬಂದವರ ಜತೆಗೆಲ್ಲ ನಗು ನಗುತ್ತ ಮಾತನಾಡುತ್ತ ಸಮಯ ಕಳೆದರು. ಮರುದಿನವೂ ಅಕ್ಷತೆಗೆ ಬಂದು ಮಂಟಪದ ಮುಂದೆ ಮೂರು ಗಂಟೆ ಕುಳಿತಿದ್ದರು.ನನಗೇಆಶ್ಚರ್ಯ. ಏನುಇವರು. ಇಷ್ಟು ಹೊತ್ತು ಕುಳಿತಿದ್ದಾರಲ್ಲ ಎಂದು.ಈ ಪ್ರೀತಿಗೆ, ವಿಶ್ವಾಸಕ್ಕೆ ಬೆಲೆ ಕಟ್ಟುವುದು ಹೇಗೆ? ಇದಕ್ಕೆಲ್ಲ ಶಬ್ದಗಳು ಸಾಲವು ಎಂದು ನನಗೆ ಅನಿಸುತ್ತದೆ.

ಒಬ್ಬ ವ್ಯಕ್ತಿಯ ಜೀವನದಲ್ಲಿ ಅನೇಕ ಋಣಗಳು ಇರುತ್ತವೆ. ಅವುಗಳನ್ನೆಲ್ಲ ತೀರಿಸುವುದು ಬಹಳ ಕಷ್ಟ. ಯಡಿಯೂರಪ್ಪ ಅವರು ನನ್ನಲ್ಲಿ ಅಚಲವಾದ ಆತ್ಮ ವಿಶ್ವಾಸವನ್ನು ತುಂಬಿದ್ದಾರೆ. ಹೋರಾಟದ ಮನೋಭಾವವನ್ನು ಕಲಿಸಿದ್ದಾರೆ. ಇವತ್ತು ತುಮಕೂರು ಗ್ರಾಮಾಂತರ ಕ್ಷೇತ್ರ ಇಡೀ ಜಗತ್ತಿನ ಗಮನ ಸೆಳೆಯುವಂತೆ ಆಗಿದ್ದರೆ ಅದಕ್ಕೆ ಯಡಿಯೂರಪ್ಪನವರು ಕಾರಣ.


ಯಡಿಯೂರಪ್ಪನವರು ಸಂಸದೀಯ ರಾಜಕೀಯ ಪ್ರವೇಶಿಸಿ 50 ವರ್ಷ ತುಂಬಿದ ನಿಮಿತ್ತ ಈ ತಿಂಗಳು 9 ನೇ ತಾರೀಖು ಚಿತ್ರದುರ್ಗದಲ್ಲಿ ಅಭಿಮಾನೋತ್ಸವ ನಡೆಯಲಿದೆ. ಆದರೆ, ನನ್ನ ಮಟ್ಟಿಗೆ ಇದು ನಾವೆಲ್ಲರೂ ಸೇರಿ ಯಡಿಯೂರಪ್ಪನವರಿಗೆ ಸಲ್ಲಿಸುವ 'ಕೃತಜ್ಞತಾ ಉತ್ಸವ' ಎಂದು ನಾನು ತಿಳಿದುಕೊಂಡಿದ್ದೇನೆ.

ಕರ್ನಾಟಕ ಹಿಂದೆ ಇಂಥ ಒಬ್ಬ ನಾಯಕನನ್ನು ಕಂಡಿತ್ತೋ ಇಲ್ಲವೋ ತಿಳಿಯೆ. ಮುಂದೆ ಕಾಣುತ್ತದೆಯೋ ಇಲ್ಲವೋ ಎಂದೂ ಹೇಳಲಾರೆ. ಅದಕ್ಕಾಗಿ ನಾವು ಈ ಸಮಾರಂಭವನ್ನು ನ ಭೂತೋ ನ ಭವಿಷ್ಯತಿ ಎನ್ನುವ ಹಾಗೆ ರೂಪಿಸಬೇಕಾಗಿದೆ. ಅದು ಒಬ್ಬ ನಾಯಕನಿಗೆ ಅವನ ಅನುಯಾಯಿಗಳು. ಅಭಿಮಾನಿಗಳು ಸಲ್ಲಿಸುವ ಋಣ ಸಂದಾಯ ಎಂದು ನಾನು ಭಾವಿಸಿದ್ದೇನೆ.

ಯಡಿಯೂರಪ್ಪನವರು ನಮ್ಮ ನಡುವೆ ಇನ್ನೂ ನೂರ್ಕಾಲ ಆರೋಗ್ಯವಾಗಿ ಇರಬೇಕು. ಮತ್ತು ಅವರು ನಮಗೆ ಮಾರ್ಗದರ್ಶನ ಮಾಡುತ್ತ ಇರಬೇಕು. ಅದಕ್ಕಾಗಿ ನನ್ನ ಆಯುಷ್ಯವನ್ನು ಅವರಿಗೆ ಧಾರೆ ಎರೆದು ಕೊಡು ಎಂದು ಆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ರಾಜಕೀಯದ ಎಲ್ಲಾ ಏಳುಬೀಳುಗಳನ್ನು ಮೆಟ್ಟಿನಿಂತು ಬೆಳೆದ ಧೀಮಂತ ನಾಯಕ

ಬಹುಜನ ನಾಯಕ ಯಡಿಯೂರಪ್ಪ



• ಡಿ. ಎಸ್. ವೀರಯ್ಯ
ಲೇಖಕ, ಪತ್ರಕರ್ತ ಮಾಜಿ ವಿಧಾನಸಭಾ ಸದಸ್ಯರು

ಯಡಿಯೂರಪ್ಪನವರು ಮುಖ್ಯಮಂತ್ರಿಯಾದಾಗ ತಂದ ವಿಶೇಷ ಕಾರ್ಯಕ್ರಮಗಳು ಪರಿಶಿಷ್ಟರ ಬಗ್ಗೆ ಇರುವ ಬದ್ಧತೆ, ಇಚ್ಛಾಶಕ್ತಿ, ದೂರದೃಷ್ಟಿಗೆ ಸಾಕ್ಷಿಯಾಗಿವೆ. ಕಾರ್ಯಕ್ರಮಗಳು ಪರಿಶಿಷ್ಟರ ಖಾಯಂ ಪುನಶ್ಚೇತನಕ್ಕೆ, ಈ ವರ್ಗದ ಆರ್ಥಿಕ ಸಬಲೀಕರಣಕ್ಕೆ, ಸಮಾಜದ ಮುಖ್ಯವಾಹಿನಿಗೆ ತರುವ ಉದ್ದೇಶಕ್ಕಾಗಿ ತಂದಂತಹವು. ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಸಮಾನತೆ, ಬಸವಣ್ಣನವರ ಜಾತ್ಯತೀತ ಸಮಾಜ ನಿರ್ಮಾಣ, ಬುದ್ಧನ ಕರುಣೆ ಮತ್ತು ಕಣ್ಣೀರು ಒರೆಸುವ ಆದರ್ಶಗಳಿಗೆ ಪೂರಕವಾಗಿವೆ. ಸಮಾಜದಲ್ಲಿ ಜಾತಿ/ವರ್ಗಗಳ ನಾಯಕರನ್ನು ಗುರುತಿಸಿ ಬೆಳೆಸಿದ ಮತ್ತು ಸರ್ವ ಜನಾಂಗದ ಅಭಿವೃದ್ಧಿಗಾಗಿ ಶ್ರಮಿಸಿದ ಅವರ ಆದರ್ಶ, ಪರಿಶ್ರಮ, ಬದ್ಧತೆ ಮುಂದಿನ ಪೀಳಿಗೆಗೆ ನಾಂದಿಯಾಗಲಿ ಎನ್ನುತ್ತಾ ಅಭಿಮಾನೋತ್ಸವಕ್ಕೆ ಶುಭ ಕೋರುತ್ತೇನೆ.

ಬಿ.ಎಸ್. ಯಡಿಯೂರಪ್ಪನವರು ಕೇವಲ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ ಅವರೊಂದು ಅಸಾಮಾನ್ಯ ಶಕ್ತಿ. ಅವರು ಜೀರೋದಿಂದ ಹೀರೋ ಆದಂತಹ, ಕುಗ್ರಾಮದಲ್ಲಿ ಜನಿಸಿ ಬೃಹತ್ ನಗರದವರೆಗೂ ಬೆಳೆದು ನಿಂತ ಶಕ್ತಿ. ಅವರು ಬೆಳೆದು ಬಂದ ಹಾದಿ ದುರ್ಗಮವಾದದ್ದು. ಅವರು ಬೆಳ್ಳಿ ಚಮಚದಲ್ಲಿ ಉಂಡು ಬಂದವರಲ್ಲ, ಜೀವನದುದ್ದಕ್ಕೂ ಮುಳ್ಳು ಹಾದಿಯನ್ನು ತುಳಿದು ಬಂದವರು. ಕಷ್ಟಗಳನ್ನೆಲ್ಲಾ ನುಂಗಿ ಅಧಿಕಾರದ ಮೆಟ್ಟಿಲೇರಿದವರು. ಹಳ್ಳಿಯಲ್ಲಿ ಓದಿ, ಹಳ್ಳಿಯವರ ಮಧ್ಯೆ ಬೆಳೆದು, ಅವರ ಸಮಸ್ಯೆಗಳನ್ನು ಸ್ವತಃ ಕಂಡವರು. ನಗರ ಸಭೆಯ ಸದಸ್ಯತ್ವದಿಂದ ಆರಂಭಿಸಿ ರಾಜ್ಯದ ಮುಖ್ಯಮಂತ್ರಿಯ ಗದ್ದುಗೆ ಏರಿದರು. ನಿರಂತರ ಹೋರಾಟ, ನಿರಂತರ ಏಳುಬೀಳುಗಳು, ಕಷ್ಟ ದುಃಖಗಳೆಲ್ಲವನ್ನು ವಿಷಕಂಠನಂತೆ ಕುಡಿದು ಅರಗಿಸಿಕೊಂಡ ದೈತ್ಯ ಶಕ್ತಿ.


ಪರಿಶ್ರಮ, ಪ್ರಮಾಣಿಕತೆ ಅವರ ವಿಶೇಷ ಗುಣಗಳು

ಮಂಡ್ಯ ಜಿಲ್ಲೆ ಕೆ.ಆರ್. ಪೇಟೆಯ ಬೂಕನಕೆರೆಯಲ್ಲಿ ಸಾಮಾನ್ಯ ರೈತ ಕುಟುಂಬದಲ್ಲಿ ಹುಟ್ಟಿ, ಸರ್ಕಾರಿ ಶಾಲಾ ಕಾಲೇಜಿನಲ್ಲಿ ಶಿಕ್ಷಣ ಪಡೆದು, ದಣಿವಿಲ್ಲದೆ ಬದುಕಿನ ದುರ್ಗಮ ಹಾದಿತುಳಿದು ಮೇಲೆ ಬಂದವರು ಯಡಿಯೂರಪ್ಪನವರು. ದುಡಿಮೆಯೇ ದೇವರೆಂದು, ಪರಿಶ್ರಮವೇ ಬದುಕಿನ ಮೆಟ್ಟಿಲುಗಳೆಂದು, ಪ್ರಾಮಾಣಿಕತೆಯೇ ಬದುಕಿನ ಸುಗಮ ಹಾದಿಯೆಂದು ಭಾವಿಸಿ ಜೀವನವನ್ನು ಸವೆಸಿದವರು. ಜೀವನದಲ್ಲಿ ಒಬ್ಬ ವ್ಯಕ್ತಿ ಮೇಲೆ ಬರಬೇಕಾದರೆ ಪರಿಶ್ರಮ ಬಹಳ ಮುಖ್ಯ. ಜೀವನದಲ್ಲಿ ಮೇಲ್ಮಟ್ಟಕ್ಕೆ ಏರಬೇಕಾದರೆ ಶ್ರದ್ಧೆಯ ದುಡಿಮೆ ಅಗತ್ಯ. ಸಾಮಾನ್ಯ ರೈತ ಕುಟುಂಬದಿಂದ ಬಂದು ಮುಖ್ಯಮಂತ್ರಿ ಆಗುವವರೆಗೂ ಬೆಳೆದ ಯಾವುದೇ ವ್ಯಕ್ತಿಯ ಹಿಂದೆ ಪ್ರಾಮಾಣಿಕತೆಯ ಹಾದಿ, ಪರಿಶ್ರಮದ ಬದುಕು, ವೃತ್ತಿ ಬದ್ಧತೆಗಳು ಇರುವುದೇ ಕಾರಣ ಎಂಬುದು ಸ್ಪಷ್ಟ. ಇದಕ್ಕೆ ಸಾಕ್ಷಿ ಬಿ.ಎಸ್. ವೈ.

ಹೋರಾಟ ಅವರ ಹುಟ್ಟುಗುಣ

ಮಂಡ್ಯ ಜಿಲ್ಲೆಯ ಮಣ್ಣಿನ ಗುಣವೋ, ವಿಶ್ವೇಶ್ವರಯ್ಯ ನಾಲೆಯ ನೀರಿನ ಗುಣವೋ ಏನೋ ಅಲ್ಲಿ ಹುಟ್ಟಿದವರು ಹೋರಾಟವನ್ನು ಮೈಗೂಡಿಸಿಕೊಳ್ಳುತ್ತಾರೆ. ನೇರ ನುಡಿ ನೇರ ನಡೆ ಮಂಡ್ಯ ಜಿಲ್ಲೆಯಲ್ಲಿ ಹುಟ್ಟಿ ಬೆಳೆದವರ ಗುಣ. ಮೋಸ, ವಂಚನೆ, ಸುಳ್ಳು ಅವರ ಹತ್ತಿರವೂ ಸುಳಿಯದು. ಸ್ವಾಭಿಮಾನಕ್ಕೆ ಮತ್ತೊಂದು ಹೆಸರು ಮಂಡ್ಯದ ಜನ. ಅವರು ಅಪಮಾನವನ್ನು ಸಹಿಸುವುದಿಲ್ಲ. ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಸೆಟೆದು ನಿಲ್ಲುತ್ತಾರೆ. ಜೀವನದಲ್ಲಿ ಎದುರಾಗುವ ಯಾವುದೇ ಸಮಸ್ಯೆಯನ್ನು ಸವಾಲಾಗಿ ಸ್ವೀಕರಿಸುವ ಗುಣ ಅವರದು. ಯಡಿಯೂರಪ್ಪನವರೂ ಈ ಗುಣಗಳಿಗೆ ಹೊರತಲ್ಲ. ದೇಶದ ಯಾವುದೇ ಭಾಗದಲ್ಲಿದ್ದರೂ ತವರನ್ನು ಮರೆಯುವುದಿಲ್ಲ ಮಂಡ್ಯದ ಜನ. ಮಂಡ್ಯ ಯಡಿಯೂರಪ್ಪನವರಿಗೆ ಜನ್ಮ ಕೊಟ್ಟ ಜಿಲ್ಲೆಯಾದರೂ ಶಿವಮೊಗ್ಗ ಅವರ ಕರ್ಮ ಭೂಮಿ. ಯಡಿಯೂರಪ್ಪನವರಿಗೆ ರಾಜಕೀಯವಾಗಿ ಜನ್ಮ ಕೊಟ್ಟ ಜಿಲ್ಲೆ ಶಿವಮೊಗ್ಗ.

ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಿಂದ ತಮ್ಮ ರಾಜಕೀಯ ಬದುಕನ್ನು ಆರಂಭಿಸಿದ ಯಡಿಯೂರಪ್ಪನವರದು ಹೋರಾಟದ ಜೀವನ. ನಗರ ಸಭೆಯ ಸದಸ್ಯರಾಗಿ, ಶಿಕಾರಿಪುರದ ವಿಧಾನಸಭೆಯ ಸದಸ್ಯರಾಗಿ, ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿ, ವಿರೋಧ ಪಕ್ಷದ ನಾಯಕರಾಗಿ, ಉಪಮುಖ್ಯಮಂತ್ರಿಯಾಗಿ, ರಾಜ್ಯದ ಮುಖ್ಯಮಂತ್ರಿಯಾಗುವವರೆಗೂ ಅವರು ತುಳಿದ ಹಾದಿ ಗುಲಾಬಿಯ ಹಾಸಿಗೆಯಲ್ಲ ಬದಲಾಗಿ ಮುಳ್ಳಿನ ಹಾಸಿಗೆ. ರಾಜಕೀಯದ ಎಲ್ಲಾ ಏಳುಬೀಳುಗಳನ್ನು ಮೆಟ್ಟಿನಿಂತು ಬೆಳೆದವರು ಅವರು.



ಪ್ರತಿಭಟನೆ–ಮುಷ್ಕರವೇ ಜೀವನದ ಅಂಗ

ಪ್ರತಿಭಟನೆ–ಮುಷ್ಕರಕ್ಕೆ ಮತ್ತೊಂದು ಹೆಸರು ಯಡಿಯೂರಪ್ಪ. ಅವರ ಜೀವನದುದ್ದಕ್ಕೂ ಕ್ರಮಿಸಿದ ದಾರಿ ಪ್ರತಿಭಟನೆ, ಮುಷ್ಕರದ್ದು. ಅದು ಅವರ ಹೋರಾಟದ ಕೇಂದ್ರಬಿಂದು. ರೈತರ ಸಮಸ್ಯೆ, ದೀನದಲಿತರ ಸಮಸ್ಯೆ, ಮಹಿಳೆಯರ ಸಮಸ್ಯೆ,ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ಮಾಡಬೇಕು ಎನ್ನುವ ಚಿಂತನೆಯನ್ನು ಮೈಗೂಡಿಸಿಕೊಂಡು ಜೀವನದುದ್ದಕ್ಕೂ ರೈತರ ಬೆನ್ನಿಗೆ ನಿಂತು ಅನೇಕ ಹೋರಾಟಗಳನ್ನು ಕೈಗೆತ್ತಿಕೊಂಡು ಹೋರಾಡಿ ರೈತ ನಾಯಕ ಎಂದೇ ಪ್ರಖ್ಯಾತರಾದವರು ಯಡಿಯೂರಪ್ಪನವರು. ಅವರು ಮುಖ್ಯಮಂತ್ರಿಯಾದಾಗ ಹಸಿರು ಶಾಲನ್ನು ಹೆಗಲಿಗೇರಿಸಿ ರೈತರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಅಷ್ಟೇ ಅಲ್ಲ ಮೊದಲ ಹಂತದಲ್ಲೇ ಸಹಕಾರಿ ಸಂಘಗಳಲ್ಲಿ ರೈತರು ಪಡೆದ ಸಾಲ ಮನ್ನಾ, ಬ್ಯಾಂಕುಗಳಿಂದ ಶೇಕಡ ಒಂದು ರೂಪಾಯಿ ಬಡ್ಡಿಯಲ್ಲಿ ಸಾಲ, ಸಬ್ಸಿಡಿ ಹೆಚ್ಚಳ, ಬೆಂಬಲ ಬೆಲೆ ಘೋಷಣೆ, ಕಾಲಕಾಲಕ್ಕೆ ಬೀಜ ಗೊಬ್ಬರ ಹಂಚಿಕೆ ಮುಂತಾದ ಹತ್ತು ಹಲವು ಕಾರ್ಯಕ್ರಮಗಳನ್ನು ರೈತರ ಪರವಾಗಿ ಜಾರಿಗೆ ತಂದವರು.


ಹೋರಾಟ ಅವರ ಜೀವನದ ಮೈಲಿಗಲ್ಲುಗಳು

1 **ಬಗರ್ ಹಕ್ಕು ಜಮೀನು ಸಕ್ರಮಕ್ಕಾಗಿ ಹೋರಾಟ:** ರಾಜ್ಯದಲ್ಲಿ ಅನೇಕ ರೈತರು ಸರ್ಕಾರಿ ಜಮೀನಿನ ಗೋಮಾಳ, ಅರಣ್ಯ ಭೂಮಿ, ಗುಂಡು ತೋಪುಗಳನ್ನು ತಮ್ಮ ಜೀವನೋಪಾಯಕ್ಕಾಗಿ ಉಳುಮೆ ಮಾಡಿ ಬದುಕುತ್ತಿದ್ದರು. ಅನೇಕ ವರ್ಷಗಳಿಂದ ಹೀಗೆ ಅಕ್ರಮವಾಗಿ ಸರ್ಕಾರಿ ಜಮೀನಿನಲ್ಲಿ ಬೆಳೆತೆಗೆಯುತ್ತಿದ್ದರು. ಅವರೆಲ್ಲ ಭೂರಹಿತರು, ಹಿಂದುಳಿದ ವರ್ಗಕ್ಕೆ ಸೇರಿದವರು, ಪರಿಶಿಷ್ಟ ಜಾತಿಗೆ ಹಾಗು ಪರಿಶಿಷ್ಟ ವರ್ಗಕ್ಕೆ ಸೇರಿದ ಸಣ್ಣ ರೈತರು. ಈ ರೀತಿಯ ಅಕ್ರಮ ಸಾಗುವಳಿ ಜಮೀನನ್ನು ಸಕ್ರಮಗೊಳಿಸಿದರೆ ಅವರ ಜೀವನಕ್ಕೊಂದು ಖಾಯಂ ಪುನಶ್ಚೇತನ ಮಾಡಿಕೊಟ್ಟಂತಾಗುತ್ತದೆ ಎಂದು ಮನಗಂಡವರು ಯಡಿಯೂರಪ್ಪನವರು. ಸರಣಿ ಹೋರಾಟವನ್ನು ಕೈಗೆತ್ತಿಕೊಂಡರು. ರೈತರನ್ನು ಒಗ್ಗೂಡಿಸಿದರು. ಛಲದಂಕ ಮಲ್ಲನಂತೆ ಹೋರಾಟದ ದಾರಿ ತುಳಿದರು. ವಿಧಾನಸಭೆಯಲ್ಲಿ, ವಿಧಾನ ಪರಿಷತ್ತಿನಲ್ಲಿ ಶಾಸಕರಾಗಿ, ವಿರೋಧ ಪಕ್ಷದ ನಾಯಕರಾಗಿ ಸದನದ ಒಳಗೆ ಪ್ರತಿಭಟನೆ ಧರಣಿ, ಸಭಾತ್ಯಾಗ, ವಿಧಾನಸೌಧದವರೆಗೆ ಪಾದಯಾತ್ರೆ ನಡೆಸಿದರು. ಕೊನೆಗೆ ಇವರ ಹೋರಾಟಕ್ಕೆ ಫಲ ಸಿಕ್ಕಿತ್ತು. ಅಕ್ರಮವಾಗಿ ಅನುಭವಿಸುತ್ತಿದ್ದ ಬಗರ್ ಹಕ್ಕು ಜಮೀನನ್ನು ಸಕ್ರಮಗೊಳಿಸುವ ನಿರ್ಧಾರ ತೆಗೆದುಕೊಂಡಿತು ಸರ್ಕಾರ. ಯಡಿಯೂರಪ್ಪನವರ ಹೋರಾಟಕ್ಕೆ ಸಿಕ್ಕ ಮೊದಲ ಯಶಸ್ಸು ಇದಾಗಿತ್ತು. ರೈತರ ಪರ ಹೋರಾಟದಲ್ಲಿ ಇದೊಂದು ಮೈಲಿಗಲ್ಲು.

2 **ಜೀತ ಮುಕ್ತರಿಗೆ ಖಾಯಂ ಪುನಃ ಚೇತನಕ್ಕಾಗಿ ಹೋರಾಟ:** ಯಡಿಯೂರಪ್ಪನವರು ಸ್ವತಃ ಹಳ್ಳಿಯ ಬದುಕನ್ನು, ಬಡತನದ ಬೇಗೆಯನ್ನು ಕಣ್ಣಾರೆ ಕಂಡು ಅವರ ಮಧ್ಯೆ ಬೆಳೆದು ಬಂದವರು. ಹಳ್ಳಿಗಳಲ್ಲಿ ಜೀವಂತವಾಗಿದ್ದ ಜೀತಪದ್ಧತಿ ಎಂಬ ಅಮಾನುಶ ಪದ್ಧತಿಯನ್ನು ಕಣ್ಣಾರೆ ಕಂಡ ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಅವರು 1975ರಲ್ಲಿ ಒಂದು ಕಾನೂನನ್ನು ತರುವ ಮುಖಾಂತರ ಜೀತ ಪದ್ಧತಿಯನ್ನು ಖಾಯಂ ಆಗಿ ರದ್ದುಗೊಳಿಸಿದರು. ಆದರೆ ಜೀತ ಮುಕ್ತರಾಗಿ ಹೊರಬಂದವರಿಗೆ ಅವರ ಪುನಶ್ಚೇತನಕ್ಕಾಗಿ, ಜೀವನೋಪಾಯಕ್ಕಾಗಿ, ದುಡಿಯುವ ಕೈಗೆ ಕೆಲಸ ಕೊಡುವಂತಹ ಯಾವುದೇ ಖಾಯಂ ಪರಿಹಾರವನ್ನು ಸರ್ಕಾರ ನೀಡಿರಲಿಲ್ಲ. ಸಹಸ್ರಾರು ಜೀತಮುಕ್ತರು ವಾಸಿಸಲು ಸೂರಿಲ್ಲದೆ, ದುಡಿಯುವ ಕೈಗೆ ಕೆಲಸವಿಲ್ಲದೆ ಎರಡು ಹೊತ್ತು ಕೂಳಿಗೂ ತಿಣುಕಾಡುವಂತಾದರು. ಅಂಥವರಿಗೆ ಬದುಕಲು ಒಂದು ನೆಲೆ ಕಲ್ಪಿಸಿ ಕೊಡಬೇಕೆಂಬ ತುಡಿತ ಯಡಿಯೂರಪ್ಪನವರನ್ನು ಕಾಡತೊಡಗಿತು. ಶಾಸಕರಾಗಿ, ವಿರೋಧ ಪಕ್ಷದ ನಾಯಕರಾಗಿ ಸದನದ ಒಳಗೆ ಜೀತ ಮುಕ್ತರ ಬೆನ್ನಿಗೆ ನಿಂತ ಯಡಿಯೂರಪ್ಪನವರು ಸದನದ ಹೊರಗೂ ಮತ್ತು ಒಳಗೂ ಪ್ರತಿಭಟನೆ, ಧರಣಿ, ಸದನ ಬಹಿಷ್ಕಾರ, ಸದನದ ಬಾವಿಗಿಳಿದು ಮುಷ್ಕರ ಹಾಗೂ ಉಪವಾಸ ಮುಷ್ಕರದಿಂದ ಕಠಿಣ ಹೋರಾಟ ನಡೆಸಿದರು. ಶಿಕಾರಿಪುರದಿಂದ ಶಿವಮೊಗ್ಗದವರೆಗೆ ಕಾಲುನಡಿಗೆ ಜಾಥಾ ಮಾಡಿಸಿದರು. ಈ ನಿರಾಶ್ರಿತರ ಪರವಾಗಿ ಹೋರಾಡಿ ಸರ್ಕಾರದ ಕಣ್ತೆರೆಸಿ ಜೀತ ಮುಕ್ತರ ಖಾಯಂ ಪುನಶ್ಚೇತನಕ್ಕೆ ಬೆನ್ನೆಲುಬಾದರು ಯಡಿಯೂರಪ್ಪ. ಇದು ಕೂಡ ಇವರ ಹೋರಾಟದ ಹೆಜ್ಜೆಗಳಲ್ಲಿ ಒಂದು ಸಾಧನೆಯ ಮೈಲಿಗಲ್ಲು.

3 **ಪರಿಶಿಷ್ಟರಿಗೆ ವಿಶೇಷ ಘಟಕ ಯೋಜನೆಗೆ ಮೀಸಲಿಟ್ಟ ಹಣ ಸಂಪೂರ್ಣವಾಗಿ ಖರ್ಚಾಗಬೇಕೆಂದು ಹೋರಾಟ:** ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಅಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಂತಮ್ಮ ಬಜೆಟ್ಟಿನಲ್ಲಿ ಸಾವಿರಾರು ಕೋಟಿ ಹಣವನ್ನು ಪ್ರತಿ ವರ್ಷ ಮೀಸಲಿಡುತ್ತವೆ. ಈ ಹಣ ಪ್ರತಿಯೊಂದು ಇಲಾಖೆಗಳಿಗೂ ಹಂಚಿಕೆಯಾಗಿ ಇಲಾಖೆಯ ಕಾರ್ಯಕ್ರಮದಲ್ಲಿ ಅನುಷ್ಠಾನಕ್ಕಾಗಿ ವಿಶೇಷ ಯೋಜನೆಯನ್ನು ರೂಪಿಸಿ ಆ ಕಾರ್ಯಕ್ರಮಗಳಿಗೆ ಖರ್ಚು ಮಾಡಬೇಕು. ಸಾಮಾನ್ಯ ಯೋಜನೆಗಳಿಗೆ ಖರ್ಚು ಮಾಡಬಾರದು ಎಂಬ ನಿಯಮವಿತ್ತು. ಇಷ್ಟೆಲ್ಲಾ ಕಾನೂನುಗಳಿದ್ದರೂ ರಾಜಕಾರಣಿಗಳ ಹಸ್ತಕ್ಷೇಪದಿಂದ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಹಣ ಬೇರೆ ಬೇರೆ ಯೋಜನೆಗಳಿಗೆ ವಿನಿಯೋಗಿಸಲಾಗುತ್ತಿತ್ತು. ಇದನ್ನು ಮನಗಂಡ ಯಡಿಯೂರಪ್ಪನವರು ಸದನದಲ್ಲಿ ಶೋಷಿತರ ಪರ ಧ್ವನಿ ಎತ್ತಿದರು. ಈ ಯೋಜನೆಗೆ ಮೀಸಲಿಟ್ಟ ಹಣ ಸಂಪೂರ್ಣವಾಗಿ ಖರ್ಚಾಗಲೇಬೇಕೆಂದು ಸರ್ಕಾರವನ್ನು ಆಗ್ರಹಿಸಿದರು. ಯಡಿಯೂರಪ್ಪನವರ ಒತ್ತಾಯಕ್ಕೆ ಮಣಿದ ಸರ್ಕಾರ ವಿಶೇಷ ಯೋಜನೆಯ ಅಡಿಯಲ್ಲಿ ಮೀಸಲಿಟ್ಟ ಹಣವನ್ನು ಬಳಸಲು ಪರಿಶಿಷ್ಟರ ಪುನಶ್ಚೇತನಕ್ಕಾಗಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿತು. ಸಂಪೂರ್ಣ ಹಣವನ್ನು ಬಿಡುಗಡೆ ಮಾಡಲು ಹಾಗೂ ಬಿಡುಗಡೆಯಾದ ಹಣ ಆಯಾ ವರ್ಷವೇ ಖರ್ಚಾಗುವಂತೆ ಮಾಡಲು ಸರ್ಕಾರವನ್ನು ಮಣಿಸುವಲ್ಲಿ ಯಡಿಯೂರಪ್ಪ ಯಶಸ್ವಿಯಾದರು. ಶೋಷಿತರ ಪರ ಈ ಹೋರಾಟವು ಅವರ ಜೀವನದ ಐತಿಹಾಸಿಕ ಸಾಧನೆಗಳಲ್ಲಿ ಒಂದು ಮೈಲಿಗಲ್ಲು.



ನಡೆದ ರಾಜಕಾರಣದ ಸುವರ್ಣ ಪಥ ಚಿತ್ರ



- **1965** ಆರ್‌ಎಸ್‌ಎಸ್‌ನ ಸಾಮಾನ್ಯ ಕಾರ್ಯಕರ್ತ
- **1970-72** ಶಿಕಾರಿಪುರ ತಾಲೂಕು ಕಾರ್ಯವಾಹ
- **1972** ಜನಸಂಘದ ತಾಲೂಕಿನ ಅಧ್ಯಕ್ಷ
- **1975** ಶಿಕಾರಿಪುರ ಪುರಸಭೆ ಸದಸ್ಯ
- **1977** ಜನತಾಪಕ್ಷದ ತಾಲೂಕಿನ ಕಾರ್ಯದರ್ಶಿ
- **1977-81** ಶಿಕಾರಿಪುರ ಪುರಸಭೆ ಅಧ್ಯಕ್ಷ
- **1980** ಬಿಜೆಪಿಯ ತಾಲೂಕು ಅಧ್ಯಕ್ಷ
- **1983** ಮೊದಲ ಬಾರಿ ಶಾಸಕರಾಗಿ ಆಯ್ಕೆ, ಮುಂದೆ ಐದು ಬಾರಿ ಶಿಕಾರಿಪುರ ಕ್ಷೇತ್ರದ ಶಾಸಕ
- **1985** ಬಿಜೆಪಿಯ ಶಿವಮೊಗ್ಗ ಜಿಲ್ಲಾಧ್ಯಕ್ಷ
- **1988-91** ಬಿಜೆಪಿಯ ರಾಜ್ಯಾಧ್ಯಕ್ಷ
- **1992** ಬಿಜೆಪಿಯ ರಾಷ್ಟ್ರೀಯ ಕಾರ್ಯದರ್ಶಿ
- **1994** ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ
- **1995-2000** ಬಿಜೆಪಿಯ ಪ್ರಚಾರ ಸಮಿತಿ ಅಧ್ಯಕ್ಷ
- **2004** ಕರ್ನಾಟಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ
- **2006** ಉಪಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವ
- **2006-2007** ರಾಜ್ಯದ ಉಪಮುಖ್ಯಮಂತ್ರಿ ಹಾಗೂ ಹಣಕಾಸು ಮತ್ತು ಸಣ್ಣ ನೀರಾವರಿ ಸಚಿವರಾಗಿ ಎರಡು ಅತ್ಯುತ್ತಮ ಅಭಿವೃದ್ಧಿ ಪರ ಮತ್ತು ಜನಕಲ್ಯಾಣ ಕೇಂದ್ರಿತ ಬಜೆಟ್ ಮಂಡಿಸಿದ ಕೀರ್ತಿ
- **12.11.2007** ಮೊದಲ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ
- **30.05.2008** ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ
- **31-07-2011** ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ
- **31-01-2012** ಶಾಸಕ ಸ್ಥಾನ ಮತ್ತು ಬಿಜೆಪಿ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ
- **17-5-2012** ಮೂರನೇ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ (15ದಿನ ಮಾತ್ರ)
- **9-12-2012** ಕೆಜೆಪಿ ಎಂಬ ನೂತನ ಪಕ್ಷ ಸ್ಥಾಪನೆ
- **2013** ಕೆಜೆಪಿ ಪಕ್ಷದಿಂದ ಶಿಕಾರಿಪುರದಲ್ಲಿ ನಡೆದ ಚುನಾವಣೆಯಲ್ಲಿ ಗೆಲುವು
- **2013** ರ ನವೆಂಬರ್ ಮರಳಿ ಬಿಜೆಪಿಗೆ
- **2014** ಲೋಕಸಭಾ ಚುನಾವಣೆಯಲ್ಲಿ ಭಾರೀ ಅಂತರದ ಗೆಲುವು
- **2016** ರಾಜ್ಯ ಬಿಜೆಪಿ ಅಧ್ಯಕ್ಷರಾಗಿ ಆಯ್ಕೆ
- **2018** ವಿಧಾನಸಭಾ ಚುನಾವಣೆಯಲ್ಲಿ ಶಿಕಾರಿಪುರ ಕ್ಷೇತ್ರದಿಂದ ಆಯ್ಕೆ
- **26.7.2019:** ನಾಲ್ಕನೆಯ ಬಾರಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕಾರ






ಜೈಲಿನಲ್ಲಿಯೂ ಹೋರಾಟ

ಶಿಕಾರಿಪುರ ಪುರಸಭೆ ಸದಸ್ಯರಾಗಿದ್ದಾಗಲೇ ತುರ್ತುಪರಿಸ್ಥಿತಿ ಹೇರಲ್ಪಟ್ಟಿತು. ಆಗ ತುರ್ತು ಪರಿಸ್ಥಿತಿ ವಿರುದ್ಧ ಭೂಗತರಾಗಿದ್ದುಕೊಂಡು ಹೋರಾಡುತ್ತಾ ಪೊಲೀಸರಿಗೆ ಸಿಕ್ಕುಬಿದ್ದರು. ಸಾಗರ ಮತ್ತು ಬಳ್ಳಾರಿ ಜೈಲುಗಳಲ್ಲಿ ಬಂಧಿಸಲ್ಪಟ್ಟರು. ಆಗ, ಜೈಲಿನೊಳಗಿನ ಸಮಸ್ಯೆಗಳನ್ನು ನೋಡಿ ಅಲ್ಲಿಯೂ ಕೈದಿಗಳ ಪರವಾಗಿ ಹೋರಾಟ ನಡೆಸಿ ನ್ಯಾಯ ಒದಗಿಸಿದವರು ಯಡಿಯೂರಪ್ಪ.

ಬಿಎಸ್‌ವೈ ಸಫಾರಿ ಗುಟ್ಟು

ಯಡಿಯೂರಪ್ಪನವರು ಹೆಚ್ಚಾಗಿ ಸಫಾರಿ ಬಟ್ಟೆ ಧರಿಸುತ್ತಾರೆ. ಅದರಲ್ಲೂ ಬಿಳಿ ಬಣ್ಣದ್ದೇ ಸಫಾರಿ ಉಡುಗೆ ತೊಡುವುದು ಸಾಮಾನ್ಯ. ಮೊದಲೆಲ್ಲ ಯಡಿಯೂರಪ್ಪನವರು ಕಪ್ಪು ಪ್ಯಾಂಟು, ಶರ್ಟು ಧರಿಸುತ್ತಿದ್ದರಂತೆ. ಒಮ್ಮೆ ಉದ್ಯಮಿ ಖೋಡೆ ಅವರನ್ನು ಭೇಟಿಯಾದಾಗ ಅವರು ತೊಟ್ಟ ಸಫಾರಿ ಬಟ್ಟೆ ಇಷ್ಟವಾಗಿ ತಮ್ಮ ಉಡುಗೆಯ ಸ್ಟೈಲ್ ಅನ್ನು ಸಫಾರಿಗೆ ಬದಲಿಸಿಕೊಂಡರಂತೆ ಬಿಎಸ್‌ವೈ.

ದೋಸೆ, ನಿಪ್ಪಟ್ಟು-ಉಪ್ಪಿಟ್ಟು

ಆಹಾರ ಪ್ರಿಯರೂ ಆಗಿರುವ ಬಿಎಸ್ವೈ ಅವರಿಗೆ ಮಗಳು ಅರುಣಾ ದೇವಿ ಮಾಡುವ ನಿಪ್ಪಟ್ಟು, ಮಸಾಲೆ ರೊಟ್ಟಿ ಅಂದ್ರೆ ತುಂಬಾ ಇಷ್ಟವಂತೆ. ಉಳಿದಂತೆ ದೋಸೆ, ಉಪ್ಪಿಟ್ಟು ತಿನ್ನಲು ಹೋಟೆಲ್‌ಗಳಿಗೆ ಹುಡುಕಿ ಹೋಗುವ ಪರಿಪಾಠ ಇಟ್ಟುಕೊಂಡಿದ್ದಾರೆ ಬಿಎಸ್ವೈ, ಶಿವಮೊಗ್ಗದ ಮೀನಾಕ್ಷಿ ಭವನ, ಬೆಂಗಳೂರಿನ ಜನಾರ್ಧನ, ಸನ್ಮಾನ್, ಎಂಟಿಆರ್ ಹೋಟೆಲ್ನ ದೋಸೆಗಳು ಅಂದ್ರೆ ಅತಿಪ್ರಿಯ. ಬಿಡುವು ಸಿಕ್ಕಾಗೆಲ್ಲ ಗೆಳೆಯರೊಡನೆ ಇಲ್ಲವೇ ಮೊಮ್ಮಕ್ಕಳೊಂದಿಗೆ ಈಗಲೂ ದೋಸೆ ಸವಿಯಲು ಹೋಟೆಲ್ಗಳಿಗೆ ಯಡಿಯೂರಪ್ಪ ಹೋಗುತ್ತಾರೆ.

ಒಡವೆ ಮಾರಿ ಸಮಾವೇಶ..!

ಒಮ್ಮೆ ಬಿಜೆಪಿ ಸಮಾವೇಶ ಮಾಡಲು ಚಂದಾ ಹಣ ಸಾಲಲಿಲ್ಲ. ಬೇರೆಕಡೆ ಎಲ್ಲೂ ದುಡ್ಡು ಹುಟ್ಟಲಿಲ್ಲ. ಆಗ ಸೀದಾ ಶಿಕಾರಿಪುರಕ್ಕೆ ಬಂದವರೇ ಪತ್ನಿ ಮೈತ್ರಾದೇವಿ ಅವರ ಒಡವೆ ತೆಗೆದುಕೊಂಡು ಮಾರಿ ಬಿಜೆಪಿ ಸಮಾವೇಶವನ್ನು ನಡೆಸಿದ್ದರು ಯಡಿಯೂರಪ್ಪ. ಬಿಜೆಪಿ ಸಂಘಟನೆಗಾಗಿ ತನು,ಮನ,ಧನ ಅರ್ಪಿಸಿದವರು ಬಿ.ಎಸ್ .ಯಡಿಯೂರಪ್ಪ.

ಅಭಿವೃದ್ಧಿಯ ಸಾಕಾರಮೂರ್ತಿ ಬಿ.ಎಸ್.ಯಡಿಯೂರಪ್ಪ

ಶೈಕ್ಷಣಿಕ, ಬಡ ವರ್ಗಕ್ಕೆ ಭದ್ರತೆ, ಆರೋಗ್ಯ ನೀರಾವರಿ ಯೋಜನೆ, ನಾನಾ ಅಭಿವೃದ್ಧಿ ಯಡಿಯೂರಪ್ಪನವರ ಬಜೆಟ್ ಜೋಳಿಗೆ, ಯೋಜನೆಗಳ ಹೋಳಿಗೆ ಖ್ಯಾತಿಗೆ ಪಾತ್ರ

ಬಿ.ಎಸ್. ಯಡಿಯೂರಪ್ಪ ಅವರಿಂದ ಇಂದು ರಾಜ್ಯ ಸುವರ್ಣಯುಗದ ಕರ್ನಾಟಕ ಆಗಿದೆ. ರಾಜ್ಯದ ಅಭಿವೃದ್ಧಿಗೆ ತಮ್ಮನ್ನು ಅರ್ಪಿಸಿಕೊಂಡ ಧೀಮಂತ ನಾಯಕ ಬಿ.ಎಸ್. ಯಡಿಯೂರಪ್ಪ ಆಗಿದ್ದಾರೆ. ಅಭಿವೃದ್ಧಿಯ ಮುನ್ನೋಟದಿಂದ ರಾಜ್ಯ ಸುವರ್ಣ ಕರ್ನಾಟಕ ಆಗಿದೆ. ಅವರ ಅಭಿಮಾನೋತ್ಸವ ರಾಜ್ಯದ ಜನತೆಯಲ್ಲಿ ಹರ್ಷ ಇಮ್ಮಡಿಗೊಳಿಸಿದೆ.

ಬಿ.ಎಸ್. ಯಡಿಯೂರಪ್ಪನವರ 50 ವರ್ಷಗಳ ರಾಜಕೀಯ ಪಯಣ ಸಂಕಷ್ಟ, ಸಮರ್ಪಣೆ ಮತ್ತು ಸಾಧನೆಯ ಸಂಗಮ. ದಕ್ಷಿಣ ಭಾರತದಲ್ಲಿ ಬಿಜೆಪಿಯ ಬೇರು ಗಟ್ಟಿಗೊಳಿಸಿ ಹಿಂದುತ್ವ ಮತ್ತು ವಿಕಾಸ ಒಟ್ಟಿಗೆ ಕೊಂಡೊಯ್ದವರು. ಕರ್ನಾಟಕದ ಜನಮಾನಸದ ಕೇಸರಿ ಪಡೆಯ ಜನನಾಯಕ.

ಯಡಿಯೂರಪ್ಪ ಪ್ರತಿಯೊಂದು ಹೆಜ್ಜೆಯಲ್ಲೂ ನಮಗೆ ಪರಿಶ್ರಮದ ಸುಗಂಧ ಅನುಭವಿಸಲು ಸಾಧ್ಯ. ಏಕೆಂದರೆ ಅವರು ತಳಮಟ್ಟದಿಂದ ಬೆಳೆದು ಬಂದವರು. ಶಿಕಾರಿಪುರ ಪುರಸಭೆಯ ಸದಸ್ಯನಿಂದ ಆರಂಭಿಸಿ ರಾಜ್ಯದ ಮುಖ್ಯಮಂತ್ರಿ ಗಾದಿಯವರೆಗೆ ಕರೆದುಕೊಂಡು ಬಂದಿದೆ.

ಸಾಮಾಜಿಕ ಬದುಕಿನ ಪರಿಶ್ರಮ

ಸಮರ್ಪಣೆ, ಎಲ್ಲರೊಂದಿಗೆ ಬೆರೆಯುವ ರೀತಿ, ಪಕ್ಷದ ಬಗೆಗಿನ ಕಾಳಜಿ, ದೇಶಭಕ್ತಿ ಇಂದಿನ ಪೀಳಿಗೆಗೆ ಅನುಕರಣೀಯ. ಬಿಜೆಪಿಯ ಅಧ್ಯಕ್ಷರಾಗಿ ಪಕ್ಷ ಬಲ ಪಡಿಸಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಜನಸಂಘ ಕಾಲದಿಂದ ಇಂದಿನವರೆಗೆ ಪಕ್ಷದ ಬೆಳವಣಿಗೆಗೆ ಭಾರೀ ದೊಡ್ಡ ಕೊಡುಗೆ ನೀಡಿದ್ದಾರೆ. ದಕ್ಷಿಣ ಭಾರತದ ಬಿಜೆಪಿಯ ಹೆಬ್ಬಾಗಿಲು ಎಂದು ಕರ್ನಾಟಕ ಕರೆಸಿಕೊಳ್ಳುವಲ್ಲಿ ಯಡಿಯೂರಪ್ಪನವರ ಕೊಡುಗೆ ಮಹತ್ವದ್ದಾಗಿದೆ.

ನವೆಂಬರ್ 12,2007ರಂದು, ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಈ ಮೂಲಕ ದಕ್ಷಿಣ ಭಾರತ ರಾಜ್ಯಗಳಲ್ಲಿ, ಬಿಜೆಪಿ ಮೊದಲ ಮುಖ್ಯಮಂತ್ರಿಯೆನಿಸಿದರು. ದಕ್ಷಿಣ ಭಾರತದ ಮೊಟ್ಟ ಮೊದಲ ಬಿಜೆಪಿ ಸರ್ಕಾರ ಕರ್ನಾಟಕದಲ್ಲಿ ರಚನೆಗೊಂಡಿತು. ಮೇ 30, 2008ರಂದು ಮುಖ್ಯಮಂತ್ರಿಯಾಗಿ ಯಡಿಯೂರಪ್ಪನವರು ಎರಡನೇ ಬಾರಿ ಅಧಿಕಾರ ಸ್ವೀಕರಿಸಿದರು.



ದಕ್ಷಿಣ ಭಾರತದ ಬಿಜೆಪಿಯ ಹೆಬ್ಬಾಗಿಲು ತೆರೆದ ಯಜಮಾನ

ಬಿ.ಎಸ್. ಯಡಿಯೂರಪ್ಪ ಅಧಿಕಾರ ಅವಧಿಯಲ್ಲಿ ಕೊಪ್ಪಳ ಜಿಲ್ಲೆಗೆ ಅಪಾರ ಕೊಡುಗೆ ನೀಡಿದ್ದಾರೆ. ಕೊಪ್ಪಳ ಏತ ನೀರಾವರಿ ಯೋಜನೆಯ ಮೊದಲ ಹಂತದ ಯೋಜನೆಗೆ ಅವರ ಅವಧಿಯಲ್ಲಿಯೇ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅವರ ಮಾರ್ಗದರ್ಶದಂತೆ ಆಗಿನ ಸಿಎಂ ಜಗದೀಶ ಶೆಟ್ಟರ್ ನೀರಾವರಿ ಯೋಜನೆಗೆ ಅಡಿಗಲ್ಲು ಹಾಕಿದರು. ಆಗ ಬಸವರಾಜ ಬೊಮ್ಮಾಯಿ ನೀರಾವರಿ ಸಚಿವರಾಗಿದ್ದರು. ನಂತರ ಕೊಪ್ಪಳ ಏತ ನೀರಾವರಿ ಯೋಜನೆಗೆ 2ನೇ ಹಂತದ ಕಾಮಗಾರಿಗೆ ಬಿ.ಎಸ್. ಯಡಿಯೂರಪ್ಪ ಅವರು ₹1750 ಕೋಟಿ ಅನುದಾನ ನೀಡಿದರು. 2ನೇ ಹಂತದ ಯೋಜನೆಗೆ ಟೆಂಡರ್ ಸಹ ಆಯಿತು.

ಯಲಬುರ್ಗಾ ಕ್ಷೇತ್ರದ ಕೆರೆಗಳ ತುಂಬಿಸುವ ಯೋಜನೆಗೆ ಅವರ ಸಹಕಾರ ಸಹ ಅಮೂಲ್ಯವಾದದ್ದು. ಅಲ್ಲದೆ ಭಾನಾಪೂರ ಬಳಿಯ ಏಕಸ್ ಗೊಂಬೆ ಫ್ಯಾಕ್ಟರಿ ಮಂಜೂರು ಮಾಡಿಸಿ ಅದನ್ನು ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಿದರು.

ವಿವಿ ಮಂಜೂರು

ಜಿಲ್ಲೆಗೆ ವಿಶ್ವವಿದ್ಯಾಲಯ ಬೇಕು ಎಂದು ನಾನು ಮನವಿ ಸಲ್ಲಿಸಿದಾಗ ಕೊಪ್ಪಳ ಜಿಲ್ಲೆಗೆ ಬಿ.ಎಸ್. ಯಡಿಯೂರಪ್ಪ ವಿವಿ ಮಂಜೂರು ಮಾಡಿಸಿದರು ಎಂದು ಹಾಲಪ್ಪ ಆಚರ್ ಸ್ಮರಿಸುತ್ತಾರೆ. ಕೊಪ್ಪಳ ಜಿಲ್ಲೆಗೆ ಮೆಡಿಕಲ್ ಕಾಲೇಜು ಮಂಜೂರು ಮಾಡಿದರು. ಹಿರೇಸಿಂಧೋಗಿ, ಚಿಕ್ಕಸಿಂಧೋಗಿ ಗ್ರಾಮಗಳಲ್ಲಿ ಬಡ ವರ್ಗಕ್ಕೆ ಮನೆಗಳ ಮಂಜೂರಾತಿ ಮಾಡಿಸಿದರು.

ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ರೈತ ಬಜೆಟ್ ಮಂಡಿಸಿದ ಕೀರ್ತಿ ಯಡಿಯೂರಪ್ಪ ಅವರಿಗೆ ಸಲ್ಲುತ್ತದೆ. ಗರಿಷ್ಠ ಸಂಖ್ಯೆಯ ಹಳ್ಳಿಗಳಿಗೆ ಭೇಟಿ ನೀಡಿರುವ ಏಕೈಕ ರಾಜಕಾರಣಿ ನಮ್ಮ ಯಡಿಯೂರಪ್ಪ. ಯಡಿಯೂರಪ್ಪಬರುತ್ತಾರೆಂದರೆ ಹಳ್ಳಿ ಹಳ್ಳಿಗಳಲ್ಲಿ ಮಧ್ಯರಾತ್ರಿಯವರೆಗೂ ರೈತರು ಮಹಿಳೆಯರಾದಿಯಾಗಿ ಕಾಯುತ್ತಿದ್ದಿದ್ದನ್ನು ಸ್ವತಃ ನಾನೇ ನೋಡಿದ್ದೇನೆ ಎನ್ನುತ್ತಾರೆ ಹಾಲಪ್ಪ ಆಚರ್.

ಬಜೆಟ್ ಜನರಿಗೆ ಹೊರೆ ಎಂಬ ರೀತಿಯ ವಾತಾವರಣವಿತ್ತು. ಅದನ್ನು ಸಂಪೂರ್ಣವಾಗಿ ಬದಲಾಯಿಸಿದ್ದೇ ಬಿಎಸ್‌ವೈ. ಯಡಿಯೂರಪ್ಪ ಅವರು ನೀಡಿದ ಬಜೆಟ್ ಜನಸಮಾನ್ಯರಲ್ಲಿ ಜೀವನದ ಭರವಸೆ ಹೆಚ್ಚಿಸಿತು. ಗರ್ಭಿಣಿ ಹೆಣ್ಣು ಮಗಳಿಗೆ ತವರಿನ ಆತಿಥ್ಯ ನೆನಪು ಮಾಡಿಸುವಂತಹ ಮಡಿಲು ಯೋಜನೆ ಜಾರಿಗೊಳಿಸಿದರು. ಮಡಿಲು ಯೋಜನೆ ಮೂಲಕ ತವರು ಮನೆಯಲ್ಲಿ ನೀಡುವ ವಸ್ತು ಸರ್ಕಾರವೇ ಮಡಿಲು ಕಿಟ್ ಮಾದರಿ ನೀಡಲಾಗುತ್ತಿತ್ತು. ಗರ್ಭಿಣಿಯ ಹೊಟ್ಟೆಯಿಂದ ಮಗು ಹೆಣ್ಣಾಗಿ ಹೊರಬಂದರೆ ಆ ಮಗುವನ್ನು ಭಾಗ್ಯಲಕ್ಷ್ಮಿ ಮೂಲಕ ಸ್ವಾಗತಿಸಲು ಭಾಗ್ಯಲಕ್ಷ್ಮಿ ಯೋಜನೆ ಜಾರಿಗೊಳಿಸಿದರು. ಆ ಯೋಜನೆ ಇಂದು ಲಕ್ಷಾಂತರ ಹೆಣ್ಣು ಮಕ್ಕಳ ಶಿಕ್ಷಣ, ವೈವಾಹಿಕ ಜೀವನಕ್ಕೆ ನೆರವಾಗಿದೆ. ಅಲ್ಲದೆ ಭಾಗ್ಯಲಕ್ಷ್ಮಿ ಫಲಾನುಭವಿಗೆ ಉಚಿತ ಆರೋಗ್ಯ ತಪಾಸಣೆ ರೂಪಿಸಿದ್ದರು. ಹೆಣ್ಣು ಮಕ್ಕಳು ಸುಶಿಕ್ಷಿತರಾಗಬೇಕು, ಶಾಲೆಯಿಂದ ದೂರ ಇರಬಾರದು, ಹೈಸ್ಕೂಲ್ ಹಂತವನ್ನು ದಾಟಬೇಕು ಎಂದು ಹೆಣ್ಣುಮಕ್ಕಳಿಗೆ ಸೈಕಲ್ ವಿತರಿಸಿದರು, ಅದನ್ನು ಗಂಡು ಮಕ್ಕಳಿಗೂ ವಿಸ್ತರಿಸಿದರು.

ರೈತರ ಸಾಲ ಮನ್ನಾ ಮಾಡುವ ಮೂಲಕ ರೈತರಿಗೆ ನೆರವಾಗಿದ್ದಾರೆ. ಜನಮನದಲ್ಲಿ ಒಂದು ಮಾತಿದೆ, ಯಡಿಯೂರಪ್ಪನವರ ಬಜೆಟ್ ಜೋಳಿಗೆ, ಯೋಜನೆಗಳ ಹೋಳಿಗೆ. ಇದರ ಹಿಂದೆ ಎಲ್ಲರಿಗೂ ಸಮಾಧಾನ ಪಡಿಸುವಂತಹ ಬಜೆಟ್ ನೀಡಿರುವ ಕಾರಣವಿದೆ.

ಯಡಿಯೂರಪ್ಪ ಯಾರಿಗೂ ನಿರಾಸೆ ಮಾಡುತ್ತಿರಲಿಲ್ಲ ಎಂದು ಹಾಲಪ್ಪ ಆಚರ್ ಪ್ರಸಂಶೆ ವ್ಯಕ್ತಪಡಿಸುತ್ತಾರೆ.





ಯಡಿಯೂರಪ್ಪ ಹಾದಿಯಲ್ಲಿ ಪಕ್ಷ ಕಟ್ಟಿದ ಹಾಲಪ್ಪ ಆಚಾರ್

ಶಾಸಕರಾದ ಮೊದಲ ಅವಧಿಯಲ್ಲಿಯೇ ಮೂರು ಖಾತೆಯ ಸಚಿವರಾದ ಹೆಮ್ಮೆ ಸರಳ ಸಜ್ಜನಿಕೆಯ ಮಾತೃ ಹೃದಯಿ ಎಂದೇ ಖ್ಯಾತರಾದ ರಾಜಕಾರಣಿ ಮಾಜಿ ಸಚಿವ ಹಾಲಪ್ಪ ಆಚಾರ್ ಅವರು. ಸಾಮಾನ್ಯ ಕಾರ್ಯಕರ್ತರಾಗಿ ಬಿಜೆಪಿಯಲ್ಲಿ ಕೆಲಸ ಮಾಡುತ್ತಿದ್ದಾಗ ಹಾಲಪ್ಪ ಆಚಾರ್ ಕ್ರೀಯಾಶೀಲ ಚಟುವಟಿಕೆ ಹಾಗೂ ಸಂಘಟನೆ ಗುರುತಿಸಿ ಅವರನ್ನು 2007–08ರಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರನ್ನಾಗಿ ಬಿ.ಎಸ್. ಯಡಿಯೂರಪ್ಪ ಮಾಡುತ್ತಾರೆ.

ಇವರ ಅವಧಿಯಲ್ಲಿ ಬಿಜೆಪಿ ಜಿಲ್ಲೆಯಲ್ಲಿ ಹೆಚ್ಚು ಬಲಿಷ್ಠ ಆಗುತ್ತದೆ. ಯಲಬುರ್ಗಾ ಕ್ಷೇತ್ರದಲ್ಲಿ 80 ಸಾವಿರ ಬಿಜೆಪಿ ಸದಸ್ಯರನ್ನಾಗಿ ಮಾಡಿದ ಹೆಮ್ಮೆ ಹಾಲಪ್ಪ ಆಚಾರ್ ಅವರದು. ಇದು ಆಗ ರಾಷ್ಟ್ರದಲ್ಲಿಯೇ ಅತೀ ಹೆಚ್ಚು ಸದಸ್ಯರಾದ ಕ್ಷೇತ್ರವಾಗಿತ್ತು ಎಂದು ಬಿಜೆಪಿ ನಾಯಕರು ಮತ್ತು ಕಾರ್ಯಕರ್ತರು ಕೊಂಡಾಡುತ್ತಾರೆ. ಮೊದಲ ಸಲ 2014ರಲ್ಲಿ ಎಂಎಲ್ಸಿ ಆಗಿ ಯಲಬುರ್ಗಾ ಕ್ಷೇತ್ರದಲ್ಲಿ ಅಪಾರ ಅಭಿವೃದ್ಧಿ ಕಾರ್ಯ ಮಾಡಿದರು.

ಬೇವೂರಿನಲ್ಲಿ ಕೃಷ್ಣ ಬೀ ಸ್ಕಿಂಗೆ ಆಗಿನ ಸಿಎಂ ಜಗದೀಶ ಶೆಟ್ಟರ್ ಅವರನ್ನು ಕರೆಯಿಸಿ ಅಡಿಗಲ್ಲು ಹಾಕಿಸಿದ್ದರು. ತಾಲೂಕಿನ ಅರಕೇರಿ, ವೀರಾಪೂರ, ಶಿರೂರು, ಮುತ್ತಾಳ, ಮುದ್ದಾಪೂರ ಗ್ರಾಮಗಳ ಹಿರೇಹಳ್ಳ ಜಲಾಶಯದ ಹಿನ್ನೀರಿನಿಂದ ಮುಳುಗಡೆ ಆದಾಗ ಪರಿಹಾರ ಹಣ ಆಗಿನ ಸಿಎಂ ಸದಾನಂದಗೌಡರನ್ನು ಕರೆಯಿಸಿ ಮನೆ ಮನೆಗೆ ತಲುಪಿಸಿದರು. ನಂತರ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ವಲ್ಪ ಅಂತರದ ಮತಗಳಲ್ಲಿ ಸೋತರು. 2018ರ ಚುನಾವಣೆಯಲ್ಲಿ ಶಾಸಕರಾಗಿ ಆಯ್ಕೆಯಾದರು. ಇಡೀ ರಾಜ್ಯದಲ್ಲಿಯೇ ಯಲಬುರ್ಗಾ ಬಿಜೆಪಿ ಪಕ್ಷದಲ್ಲಿ ಅತ್ಯುತ್ತಮ ಸಂಘಟನೆ ಹೊಂದಿದೆ ಎಂದು ಗುರುತಿಸಿಕೊಂಡರು. ಮೊದಲ ಸಲ ಶಾಸಕರಾದಾಗ ಹಾಲಪ್ಪ ಆಚಾರ್ ಅವರು ಕ್ಷೇತ್ರದ ಅಭಿವೃದ್ಧಿಗೆ ಅವಿರತ ಶ್ರಮಿಸುತ್ತಾ ನಡೆದರು. ಅವರ ಅಭಿವೃದ್ಧಿ ಕಾರ್ಯ ಕಂಡು ಬಿಜೆಪಿ ಸರ್ಕಾರ ಅವರಿಗೆ ರಾಜ್ಯದ ಉನ್ನತ ಖಾತೆಗಳ ಮಂತ್ರಿ ಸ್ಥಾನ ನೀಡಿತು. ವಿಶೇಷವೆಂದರೆ ಮೊದಲ ಸಲ ಶಾಸಕರಾಗಿ ಮೂರು, ಮೂರು ಖಾತೆಗಳ ಸಚಿವ ಸ್ಥಾನ ಪಡೆದ ಮುತ್ಸದ್ಧಿ ರಾಜಕಾರಣಿ ಇವರೆಂದರೂ ತಪ್ಪಾಗಲಾರದು. ಮಾತೃ ಹೃದಯಿ ಹಾಲಪ್ಪ ಆಚಾರ ಸಚಿವರಾದರೂ ಸಹ ರಾಜ್ಯದ ಸಚಿವರೂ ಎಂಬ ಭಾವನೆ ತೋರದೆ ತಾವೊಬ್ಬ ಸಾಮಾನ್ಯ ಕಾರ್ಯಕರ್ತ ಎಂಬ ರೀತಿಯಲ್ಲಿ ಕೆಲಸ ಮಾಡಿದರು.

ಪ್ರಾಮಾಣಿಕತೆ ಒಲಿದು ಬಂದ ಮೂರು ಖಾತೆಗಳು: ಮಾಜಿ ಸಚಿವ ಹಾಲಪ್ಪ ಆಚಾರ್ ಅವರು ಶಾಸಕರಾದ ಮೊದಲ ಸಲವೇ ಮೂರು ಖಾತೆಗಳು ಅವರ ಪ್ರಾಮಾಣಿಕ ಕಾರ್ಯದಿಂದ ಒಲಿದು ಬಂದವು. ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರಾಗಿ ಹಲವಾರು ಜನಪರ ಕಾರ್ಯ ಮಾಡಿದ್ದಾರೆ.

ಗ್ರಾಮೀಣ ಒಳಭಾಗದ ರಸ್ತೆ ನಿರ್ಮಾಣ: ಸಚಿವ ಹಾಲಪ್ಪ ಆಚಾರ್ ಅವರು ತಮ್ಮ ವಿಶೇಷ ಅನುದಾನದಲ್ಲಿ 66.20 ಕಿಮೀ ಗ್ರಾಮೀಣ ಒಳಭಾಗದ ರಸ್ತೆಗಳನ್ನು 3394 ಲಕ್ಷದಲ್ಲಿ ಹಾಗೂ ಕೆಕೆಆರ್‌ಡಿಬಿಯಿಂದ ₹3121 ಲಕ್ಷದಲ್ಲಿ 60.65 ಕಿಮೀ ಗ್ರಾಮೀಣ ಭಾಗದ ಒಳರಸ್ತೆ ನಿರ್ಮಿಸಿದ್ದಾರೆ.



> **“ ಬಿ.ಎಸ್ ಯಡಿಯೂರಪ್ಪ ಅಸಾಮಾನ್ಯ ನಾಯಕ. ಛಲದಂಕ ಮಲ್ಲ. ಗುರಿ ಇಟ್ಟರೆ ಸಾಧಿಸುವವರು. ಅವರ ಈ ಗುಣಗಳು ಬಿಜೆಪಿ ಪಕ್ಷ ಬಹು ಎತ್ತರಕ್ಕೆ ಹೋಗುವಂತೆ ಮಾಡಿತು. ಅವರಿಂದ ಪಕ್ಷ ಗಟ್ಟಿಯಾಗಿ ಬೆಳೆಯಿತು. ನನ್ನನ್ನು ಸಹ ಅಂತ್ಯಂತ ಪ್ರೀತಿಯಿಂದ ಕಂಡು ಮೊದಲಿಗೆ ಬಿಜೆಪಿ ಜಿಲ್ಲಾಧ್ಯಕ್ಷನನ್ನಾಗಿ ಹಾಗೂ ನಂತರ ವಿಪ ಸದಸ್ಯನಾಗಿ ನಂತರ ಶಾಸಕನಾಗಿ, ರಾಜ್ಯದ ಮೂರು ಖಾತೆ ಸಚಿವನ್ನಾಗಿ ಮಾಡಿದ ಶ್ರೇಯಸ್ಸು ಬಿ.ಎಸ್ ಯಡಿಯೂರಪ್ಪ ಅವರಿಗೂ ಸಲ್ಲುತ್ತದೆ. ಅವರ ಪ್ರೀತಿ, ವಿಶ್ವಾಸ ನಿಜಕ್ಕೂ ಅವಿಸ್ಮರಣೀಯ.**
>
> • **ಹಾಲಪ್ಪ ಆಚಾರ್**
> ಮಾಜಿ ಸಚಿವರು ಯಲಬುರ್ಗಾ ಕ್ಷೇತ್ರ

ಕೆರೆಗಳ ಸಾಕಾರ: ಕುಕನೂರು ಮತ್ತು ಯಲಬುರ್ಗಾ ಅವಳಿ ತಾಲೂಕಿನಲ್ಲಿ 2018 ರಿಂದ 2023ರವರೆಗೆ ಹಾಲಪ್ಪ ಆರ್ಚಾ ಸಚಿವರಾಗಿದ್ದ ಅವಧಿಯಲ್ಲಿ ಕೆರೆಗಳನ್ನು ಪುನಶ್ಚೇತನಗೊಳಿಸಿದರು. ನಿರ್ವಹಣೆ ಕೊರತೆಯಿಂದಬಹುತೇಕಕೆರೆಗಳುಹೂಳುತುಂಬಿಕೊಂಡಿದ್ದವು. ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿ, ಯಲಬುರ್ಗಾ, ತರಲಕಟ್ಟಿ ಬಳೂಟಗಿ, ಬಸಾಪೂರ, ಕುದರಿಮೋತಿ, ಬೆಣಕಲ್, ಚಿಕ್ಕಬಿಡನಾಳ, ತೊಂಡಿಹಾಳ, ಬಂಡಿಹಾಳ, ಕರಮುಡಿ, ಮುಧೋಳ, ಸಂಕನೂರು, ತಳಕಲ್, ಚಿಕ್ಕಮನ್ನಾಪೂರ, ನೆಲಜೇರಿ, ಬಿನ್ನಾಳ ಕೆರೆ ಅಭಿವೃದ್ಧಿಗೊಳಿಸಿದ್ದಾರೆ.

ಶಾಸಕರಾಗುವ ಮುನ್ನ ತಮ್ಮ ವೈಯಕ್ತಿಕ ಹಣದಿಂದ ಲಿಂಗನಬಂಡಿ, ಮಂಡಲಗೇರಿ, ಕರಮುಡಿ, ಬೇವೂರು, ಮಂಡಲಮರಿ, ಕಲ್ಲಭಾವಿ ಕೆರೆಗಳ ಜೀರ್ಣೋದ್ಧಾರ ಕಾಮಗಾರಿ ಕೈಗೊಂಡಿದ್ದರು.

ನೀರಾವರಿ ಅನುಷ್ಠಾನಕ್ಕೆ ದಿಟ್ಟ ಹೆಜ್ಜೆ: ಕೃಷ್ಣ ನದಿಯಿಂದ ಯಲಬುರ್ಗಾ ಕ್ಷೇತ್ರಕ್ಕೆ ನೀರು ತರುವಲ್ಲಿ ಮಾಜಿ ಸಚಿವ ಹಾಲಪ್ಪ ಆಚಾರ್ ಶ್ರಮ ಅನನ್ಯ. ಬೇವೂರಿನಲ್ಲಿ ಕೃಷ್ಣಾ ಬೀ ಸ್ಕಿಂಗೆ ಅಡಿಗಲ್ಲು ಹಾಕಿಸಿದ ಅವರು ಕ್ಷೇತ್ರಕ್ಕೆ ನೀರು ತರಲೇಬೇಕು ಎಂದು ಸಂಕಲ್ಪ ತೊಟ್ಟರು. ತಾವು ಶಾಸಕರಾದಾಗ ₹1750 ಕೋಟಿ ನೀರಾವರಿ ಯೋಜನೆಗೆ ಅನುದಾನ ಬಿಡುಗಡೆಗೊಳಿಸಿದರು. ಕೃಷ್ಣಾ ನದಿಯಿಂದ ಯಲಬುರ್ಗಾ ಕ್ಷೇತ್ರದ ಕೆರೆಗಳಿಗೆ ನೀರು ತರುವಲ್ಲಿ ಸ್ವತಃ ತಾವೇ ಮುಂದೆ ನಿಂತು ಪೈಪ್ ಲೈನ್ ಸಹ ರೈತರ ಮನವೊಲಿಸಿ ಮಾಡಿಸಿದರು. ಸದ್ಯ ಕ್ಷೇತ್ರದ ಕೆರೆಗಳು ಕೃಷ್ಣೆ ನೀರಿನಿಂದ ತುಂಬಿವೆ. ಇದರಿಂದ ಅಂತರ್ಜಲ ಮಟ್ಟ ಸಹ ಹೆಚ್ಚಾಗಿದೆ. ನೀರಿನ ಸಮಸ್ಯೆ ಸಹ ನೀಗಿದೆ.


ಜನ ಸೇವೆಯಲ್ಲಿ
ಸಾರ್ಥಕ 50 ವರುಷ
BSY
ಅಭಿಮಾನೋತ್ಸವ
ದಿನಾಂಕ: 9 ಮೇ 2026, ಶನಿವಾರ | ಸ್ಥಳ: ಚಿತ್ರದುರ್ಗ
ಜನಸೇವೆಯಲ್ಲಿ
ಸಾರ್ಥಕ 50 ವರ್ಷಗಳನ್ನು ಪೂರೈಸಿರುವ
ರಾಜ್ಯ ಕಂಡ ಧೀಮಂತ ಜನನಾಯಕ, ಲಕ್ಷಾಂತರ ಸಾಗುವಳಿದಾರರ ಬದುಕಿನಲ್ಲಿ
ಹೊಸ ಭರವಸೆ ಮೂಡಿಸಿದ ರೈತ ಬಂಧು, ಸರ್ವರ ಏಳಿಗೆಗೆ ಅಹರ್ನಿಶಿ ಶ್ರಮಿಸಿದ
ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪನವರಿಗೆ
ಹೃತ್ಪೂರ್ವಕ ಅಭಿನಂದನೆಗಳು.
ಬನ್ನಿ ಜನನಾಯಕನನ್ನು
ಅಭಿನಂದಿಸೋಣ... ಸನ್ಮಾನಿಸೋಣ...
ಶುಭಕೋರುವವರು
ಸೀಕಲ್ ರಾಮಚಂದ್ರಗೌಡ
ಚಿಕ್ಕಬಳ್ಳಾಪುರ ಜಿಲ್ಲಾ ಅಧ್ಯಕ್ಷರು ಹಾಗೂ ಬಿಜೆಪಿ ಮುಖಂಡರು, ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರ
ಮುಖ್ಯಸ್ಥರು, ಟ್ರಿಲೈಫ್ ಆಸ್ಪತ್ರೆ, ಬೆಂಗಳೂರು.

ಸಂಕಷ್ಟಕ್ಕೂ ಜೈ | ಸವಾಲಿಗೂ ಸೈ

ಬಿಎಸ್‌ವೈ

ಮಂಡ್ಯ ಮಣ್ಣಿನಿಂದ ಶಿಕಾರಿಪುರ ನೆಲದವರೆಗೆ ಬಿ.ಎಸ್.ಯಡಿಯೂರಪ್ಪ ಅವರ ಹಾದಿ...

ಹಠ, ಆತ್ಮವಿಶ್ವಾಸಕ್ಕೆ ಮತ್ತೊಂದು ಹೆಸರೇ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ. ಅಂದುಕೊಂಡಿದ್ದನ್ನು ಸಾಧಿಸಿಯೇ ತೀರುವ ಛಲಗಾರ. ಹೋರಾಟ ಮೂಲಕ ರಾಜಕೀಯ ನಾಯಕನಾಗಿ ಬೆಳೆದುಬಂದು ದೊರೆಯ ಪಟ್ಟ ಅಲಂಕರಿಸಿದ್ದು ಒಂದು ದಾಖಲೆಯಾದರೆ, ಮಂಡ್ಯ ಮಣ್ಣಿನಿಂದ ಶಿಕಾರಿಪುರದ ನೆಲದವರೆಗೆ ಅವರು ನಡೆದುಬಂದ ಹಾದಿಯೇ ಒಂದು ರೋಚಕ.

ಗಂಡು ಮೆಟ್ಟಿನ ನೆಲ ಮಂಡ್ಯದಲ್ಲಿ ಹುಟ್ಟಿದ ಬಿ.ಎಸ್.ಯಡಿಯೂರಪ್ಪ ಅವರಿಗೆ ತವರು ನೆಲದ ಬಗ್ಗೆ ಅದೇ ಪ್ರೀತಿ, ವಿಶ್ವಾಸ, ಕಾಳಜಿಯನ್ನು ಇಟ್ಟುಕೊಂಡಿದ್ದಾರೆ. ಹುಟ್ಟೂರಿಗೆ ಆಗಾಗ ಭೇಟಿ ನೀಡುತ್ತಾ ತಾವು ನೆಲೆಸಿದ್ದ ಮನೆ, ಓಡಾಡಿದ ಬೀದಿ, ಕಲಿತ ಶಾಲೆ, ಬಾಲ್ಯ ಸ್ನೇಹಿತರನ್ನು ನೆನೆಯುತ್ತಾ ಹಳೆಯ ದಿನಗಳನ್ನು ಮೆಲುಕು ಹಾಕುವುದೂ ಉಂಟು.

ಬಿ.ಎಸ್.ಯಡಿಯೂರಪ್ಪ ಅವರು ಕಡು ಬಡತನದ ಕುಟುಂಬದಿಂದ ಬಂದವರು. ಬಾಲ್ಯದಲ್ಲೇ ಸಂಕಷ್ಟ-ಸವಾಲುಗಳನ್ನು ಎದುರಿಸುತ್ತಾ ಬೆಳೆದರು. ಚಿಕ್ಕ ವಯಸ್ಸಲ್ಲೇ ನಾಯಕನಾಗಿ ಬೆಳವಣಿಗೆ ಕಾಣುವ ಕನಸು ಕಂಡಿದ್ದರು. ಸ್ನೇಹಿತರ ಗುಂಪಿನ ನಾಯಕನಾಗಿ ಆಟ-ಪಾಠಗಳಲ್ಲೆಲ್ಲಾ ಮುಂಚೂಣಿ ನಾಯಕ ಸ್ಥಾನದಲ್ಲಿದ್ದರು. ಈ ಗುಣಗಳೇ ಅವರನ್ನು ಮುಂದೆ ರಾಜಕೀಯ ಕ್ಷೇತ್ರದಲ್ಲಿ ಬಹುದೊಡ್ಡ ನಾಯಕನಾಗಿ ಬೆಳೆಯುವುದಕ್ಕೆ ಕಾರಣವಾದವು. ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲೂಕಿನ ಬೂಕಿನಕೆರೆ ಬಿ.ಎಸ್.ಯಡಿಯೂರಪ್ಪ ಹುಟ್ಟೂರು. ಸಿದ್ದಲಿಂಗಪ್ಪ-ಪುಟ್ಟತಾಯಮ್ಮ ದಂಪತಿ ಪುತ್ರನಾಗಿ ಫೆ.27 1943ರಲ್ಲಿ ಜನಿಸಿದ ಇವರ ಮೊದಲ ಹೆಸರು ಸಿದ್ದಲಿಂಗೇಶ್ವರ. ಮನೆಯ ದೇವರು ಗವಿಮಠದ ಸ್ವತಂತ್ರ ಸಿದ್ದಲಿಂಗೇಶ್ವರ ಆಗಿದ್ದರಿಂದ ಅದೇ ಹೆಸರನ್ನು ಯಡಿಯೂರಪ್ಪ ಅವರು ಹುಟ್ಟಿದಾಗ ಇಡಲಾಗಿತ್ತು. ಅಕ್ಕಯಮ್ಮ ಇವರ ಮನೆ ಹೆಣ್ಣು ದೇವರು.

ತಂದೆಯನ್ನು ಕಂಡರೆ ಭಯ

ತಂದೆ ಸಿದ್ದಲಿಂಗಪ್ಪ ಅವರು ಬಹಳ ಶಿಸ್ತಿನ ಮನುಷ್ಯ ಹಾಗೂ ಸ್ವಾಭಿಮಾನಿ. ಅವರನ್ನು ಕಂಡರೆ ಎಲ್ಲಿಲ್ಲದ ಅಭಿಮಾನ, ಗೌರವ. ಜೊತೆಗೆ ಯಡಿಯೂರಪ್ಪ ಅವರಿಗೆ ಅಪ್ಪನನ್ನು ಕಂಡರೆ ಭಯವೂ ಇತ್ತು. ಓದಿನ ಕಡೆ ಹೆಚ್ಚು ಆಸಕ್ತಿ. ಹಿಡಿದಿದ್ದನ್ನು ಸಾಧಿಸುವ ಛಲಗಾರಿಕೆ ಚಿಕ್ಕವಯಸ್ಸಿನಲ್ಲೇ ಯಡಿಯೂರಪ್ಪ ಅವರಲ್ಲಿ ಅಂತರ್ಗತವಾಗಿತ್ತು. ಮನೆಯ ಹತ್ತಿರದಲ್ಲೇ ಇದ್ದ ಶಾಲೆಗೆ ನಿತ್ಯವೂ ತಪ್ಪದೇ ಹೋಗುತ್ತಿದ್ದರು. ಗುರುಗಳು ಹೇಳಿಕೊಟ್ಟ ಪಾಠವನ್ನು ಶ್ರದ್ಧೆಯಿಂದ ಕಲಿಯುತ್ತಿದ್ದರು. ಶಾಲೆ ಬಿಟ್ಟ ಕೂಡಲೇ ಮೈದಾನಕ್ಕಿಳಿಯುತ್ತಿದ್ದರು. ವಾಲಿಬಾಲ್, ಫುಟ್ಬಾಲ್, ಕಬಡ್ಡಿ ಅಚ್ಚುಮೆಚ್ಚಿನ ಕ್ರೀಡೆಗಳಾಗಿದ್ದವು. ಎಲ್ಲಾ ಆಟಗಳಿಗೂ ತಂಡದ ತಾನೇ ನಾಯಕನಾಗಬೇಕೆಂಬ ಆಸೆ. ನಾನೇ ಕ್ಯಾಪ್ಟನ್ ಆಗಬೇಕು ಎಂದು ಹಠ ಮಾಡುತ್ತಿದ್ದರು.


ಸ್ನೇಹಿತರಿಗೆಲ್ಲಾ ಗುರು: ಓದಿನಲ್ಲಿ ಮುಂದಿದ್ದ ಯಡಿಯೂರಪ್ಪ ಅವರು ಸ್ನೇಹಿತರೆಲ್ಲರಿಗೂ ಗುರುವಾಗಿದ್ದರು. ಶಾಲೆಯಲ್ಲಿ ಯಾವುದೇ ಸ್ಪರ್ಧೆ ಇರಲಿ ಮೊದಲ ಬಹುಮಾನ ಯಡಿಯೂರಪ್ಪ ಅವರ ಪಾಲಾಗುತ್ತಿತ್ತು. ಯಡಿಯೂರಪ್ಪ ಅವರಿಗೆ ಚಿಕ್ಕ ವಯಸ್ಸಿನಿಂದಲೂ ಮುಂಗೋಪ ಜಾಸ್ತಿ. ಆ ಕೋಪ- ತಾಪವೆಲ್ಲಾ ಕೇವಲ ಕ್ಷಣಕ್ಕಷ್ಟೇ. ಎದುರಿಗಿರುವವರ ಮೇಲೆ ರೇಗಾಡಿದರೂ ಮತ್ತೆ ಶಾಂತವಾಗಿ ಎಲ್ಲರನ್ನೂ ಸಮಾಧಾನದಿಂದ ಮಾತನಾಡಿಸುತ್ತಿದ್ದ ಹೃದಯವಂತಿಕೆಯನ್ನು ತೋರುತ್ತಿದ್ದರು.

ಬಲಗಣ್ಣಿನ ಪಕ್ಕ ಗಾಯದ ಗುರುತು: ಸೈಕಲ್ ಮೇಲೆ ಕುಳಿತು ಸವಾರಿ ಮಾಡುವುದೆಂದರೆ ಯಡಿಯೂರಪ್ಪನವರಿಗೆ ಎಲ್ಲಿಲ್ಲದ ಪ್ರೀತಿ. ಸ್ನೇಹಿತರಿಂದ ಸೈಕಲ್ ಪಡೆದುಕೊಂಡು ಸವಾರಿಗೆ ಹೊರಟುಬಿಡುತ್ತಿದ್ದರು. ಊರಿನ ದೊಡ್ಡಕೇರಿಯ ಏರಿ ಎತ್ತರವಾಗಿತ್ತು. ಅದನ್ನು ಹತ್ತಿಸುವುದಾಗಿ ಹಠ ಮಾಡಿದರು. ಸೈಕಲ್ ಏರಿ ಹೊರಟವರು ಏರಿಯನ್ನು ಹತ್ತಿಸಲಾಗದೆ ಆಯತಪ್ಪಿ ಬಿದ್ದರು. ಆ ಗಾಯದ ಗುರುತು ಈಗಲೂ ಅವರ ಮುಖದ ಮೇಲೆ ಹಾಗೆಯೇ ಉಳಿದುಕೊಂಡಿದೆ. ಸೈಕಲ್ ಹೊಡೆಯಲು ಹೋಗಿ ಬಿದ್ದು ಗಾಯ ಮಾಡಿಕೊಂಡ ವಿಷಯ ತಿಳಿದು ತಂದೆ ಸಿದ್ದಲಿಂಗಪ್ಪ ರೇಗಾಡಿದರು. ಕೊನೆಗೆ ಮಗನ ಗಾಯಕ್ಕೆ ಔಷಧ ಹಚ್ಚಿ ಆರೈಕೆ ಮಾಡಿ ಇನ್ನೊಮ್ಮೆ ಇಂತಹ ಸಾಹಸಕ್ಕೆ ಮುಂದಾಗಬಾರದು ಎಂದು ಬುದ್ಧಿ ಹೇಳಿದ್ದರು.

• ಮಂಡ್ಯ ಮಂಜುನಾಥ್

ಬಿಎಸ್‌ವೈ ಒಗ್ಗಟ್ಟಿನ ಪಾಠ

ಅಪಾರ ಸ್ನೇಹಿತ ವರ್ಗವನ್ನು ಹೊಂದಿದ್ದ ಯಡಿಯೂರಪ್ಪ ಅವರು ಎಲ್ಲರೂ ಒಗ್ಗಟ್ಟಾಗಿರಬೇಕು ಎಂದು ಹೇಳುತ್ತಿದ್ದರು. ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕು, ಸಮಾಜಕ್ಕೆ ನೆರವಾಗುವಂತ ಬದುಕಬೇಕು ತುಡಿತ ಅವರಲ್ಲಿ ಬಹಳವಾಗಿತ್ತು. ಅಂತಹದೊಂದು ಮಹತ್ವಾಕಾಂಕ್ಷೆ ಬಾಲ್ಯದಲ್ಲೇ ಅವರಲ್ಲಿದ್ದ ಕಾರಣದಿಂದ ಯಡಿಯೂರಪ್ಪ ಅವರು ಒಬ್ಬ ಹೋರಾಟಗಾರನಾಗಿ ಪ್ರಸಿದ್ಧಿ ಪಡೆದರಲ್ಲದೆ, ರಾಜ್ಯದ ಅತ್ಯುನ್ನತ ಹುದ್ದೆ ಮುಖ್ಯಮಂತ್ರಿ ಪಟ್ಟ ಅಲಂಕರಿಸುವಲ್ಲೂ ಯಶಸ್ವಿಯಾದರು. ಕಲಿಕೆಯಲ್ಲಿ ಸದಾ ಮುಂದಿದ್ದ ಯಡಿಯೂರಪ್ಪ ಅವರು ಶಿಕ್ಷಕರ ಅಚ್ಚುಮೆಚ್ಚಿನ ವಿದ್ಯಾರ್ಥಿಯಾಗಿದ್ದರು. ಲೆಕ್ಕದಲ್ಲಿ ಇವರನ್ನು ಮೀರಿಸುವವರು ಇರಲಿಲ್ಲ. ಅಪ್ಪನಂತೆ ಬಾಲ್ಯದಲ್ಲೇ ಶಿಸ್ತಿನ ಸಿಪಾಯಿಯಾಗಿ ಸಾಧಿಸುವ ಹಂಬಲ ಅವರ ವ್ಯಕ್ತಿತ್ವದಲ್ಲಿ ಕಂಡಬರುತ್ತಿತ್ತು.



ಹುಟ್ಟೂರು ಬೂಕನಕೆರೆಗೆ ಬಿಎಸ್‌ವೈ ನೀಡಿದ ಕೊಡುಗೆ

ಕುಡಿವ ನೀರು, ರಸ್ತೆ, ಏತ ನೀರಾವರಿ ಯೋಜನೆಗಳ ಜಾರಿ ಶಿಕ್ಷಣ, ಆರೋಗ್ಯ ಹಾಗೂ ಸಾಮಾಜಿಕ ಅಭಿವೃದ್ಧಿಗೂ ಒತ್ತು



ರಾಜ್ಯ ರಾಜಕೀಯದಲ್ಲಿ ಅಪರೂಪದ ರಾಜಕಾರಣಿಗಳಲ್ಲಿ ಒಬ್ಬರಾಗಿರುವ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ರಾಜಕೀಯವಾಗಿ ಎಷ್ಟೇ ಎತ್ತರಕ್ಕೇರಿದರೂ ಹುಟ್ಟೂರಿನ ನಂಟನ್ನು ಬಿಟ್ಟಿಲ್ಲ. ರಾಜಕೀಯವಾಗಿ ಬೆಳೆಯಲು ಕೆ.ಆರ್.ಪೇಟೆ ತಾಲೂಕಿನ ಮತದಾರರ ಹಂಗಿಲ್ಲದಿದ್ದರೂ ಹುಟ್ಟೂರಿನ ಅಭಿಮಾನ ಬಿಟ್ಟವರಲ್ಲ. ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ ಎನ್ನುವ ಹೆಸರಿನಿಂದಲೇ ಗುರುತಿಸಿಕೊಳ್ಳುವ ಯಡಿಯೂರಪ್ಪ ಅವರು ಮುಖ್ಯಮಂತ್ರಿ ಅಧಿಕಾರ ಬಳಸಿ ಹುಟ್ಟೂರಿನ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಬೂಕಿನಕೆರೆ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಅಭಿವೃದ್ಧಿಪಡಿಸುವ ಕನಸು ಹೊತ್ತಿರುವ ಯಡಿಯೂರಪ್ಪ ಅವರು ಸದ್ದಿಲ್ಲದೆ ಅಭಿವೃದ್ಧಿ ಕಾಮಗಾರಿಗಳನ್ನು ಊರಿನಲ್ಲಿ ಜಾರಿಗೊಳಿಸುತ್ತಿದ್ದಾರೆ. ರಸ್ತೆಗಳ ಅಭಿವೃದ್ಧಿ, ಸಮುದಾಯ ಆರೋಗ್ಯ ಕೇಂದ್ರ, ಶಿಕ್ಷಣಕ್ಕೆ ಪ್ರಾಧಾನ್ಯತೆ, ಸಮುದಾಯ ಭವನ ನಿರ್ಮಾಣ, ಬೂಕಿನಕೆರೆ ಹಾಗೂ 25 ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಸೇರಿದಂತೆ ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುವುದರೊಂದಿಗೆ ಬೂಕಿನಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವುದಕ್ಕೆ ಟೊಂಕ ಕಟ್ಟಿ ನಿಂತಿದ್ದಾರೆ.

ಆರೋಗ್ಯಕ್ಕೆ ಪ್ರಾಧಾನ್ಯತೆ

ಬೂಕನಕೆರೆ ಗ್ರಾಮದ ಜನರ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಸುಮಾರು 8 ಕೋಟಿ ರು. ವೆಚ್ಚದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಉನ್ನತೀಕರಣಗೊಳಿಸಿದರು. 30 ಹಾಸಿಗೆಗಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತಿಸಿದರು. ಇದರಿಂದ ಹೆರಿಗೆ, ತುರ್ತು ಚಿಕಿತ್ಸೆಗೆ ಅನುಕೂಲ ಮಾಡಿಕೊಟ್ಟರು. ಬೂಕನಕೆರೆಯಲ್ಲಿ ವೈದ್ಯರ ವಸತಿ ಗೃಹಗಳ ನಿರ್ಮಾಣಕ್ಕಾಗಿ ಯಡಿಯೂರಪ್ಪ ಇದೀಗ 6 ಕೋಟಿ ರು. ಅನುದಾನ ಬಿಡುಗಡೆ ಮಾಡಿದ್ದು ಕಾಮಗಾರಿ ಆರಂಭಗೊಳ್ಳಬೇಕಿದೆ.

ವಿದ್ಯಾರ್ಥಿಗಳ ಶಿಕ್ಷಣಕ್ಕೆ ಒತ್ತು

ತವರೂರಿನ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಅನುಕೂಲವಾಗುವಂತೆ 1.5 ಕೋಟಿ ರು. ವೆಚ್ಚದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಸ್ವಂತ ಕಟ್ಟಡ ನಿರ್ಮಿಸಿಕೊಟ್ಟರು. ಬಿಸಿಎಂ ವಿದ್ಯಾರ್ಥಿ ನಿಲಯವನ್ನು ನಿರ್ಮಾಣ ಮಾಡಿದರು. ಇದರಿಂದ ಕಾಲೇಜು ವಿದ್ಯಾಭ್ಯಾಸಕ್ಕೆ ದೂರದ ಕೆ.ಆರ್.ಪೇಟೆಗೆ ತೆರಳದೆ ಊರಿನಲ್ಲೇ ಶಿಕ್ಷಣಕ್ಕಾಗಿ ಅನುವು ಮಾಡಿಕೊಟ್ಟರು. ಗ್ರಾಮಸ್ಥರಿಗಾ ಸಮುದಾಯ ಭವನ ನಿರ್ಮಿಸಿ ಕೊಟ್ಟಿದ್ದಾರೆ. ಗ್ರಾಮದಲ್ಲಿನ ಚಿಕ್ಕಕೆರೆಯನ್ನು ಮುಚ್ಚಿಸಿ, ಜನರ ಅವಶ್ಯಕತೆಗೆ ಆ ಜಾಗ ಮೀಸಲಿರಿಸಿದ್ದಾರೆ.

ಯಡಿಯೂರಪ್ಪ ನನ್ನ ರಾಜಕೀಯ ಗುರು!



ಬಿಎಸ್‌ವೈ ಬೆನ್ನು ತಟ್ಟಿ, ಪ್ರೋತ್ಸಾಹಿಸಿದ್ದರಿಂದಲೇ ನಾಯಕನಾಗಿ ಬೆಳೆದೆ: ಅಶೋಕ ಕಾಟವೆ

ನಾನು ಒಬ್ಬ ಜನಪ್ರತಿನಿಧಿಯಾಗಲು, ನಾಯಕನಾಗಿ ಬೆಳೆಯುವಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಪಾತ್ರ ಬಹುದೊಡ್ಡದು. ನನಗೆ ಯಡಿಯೂರಪ್ಪ ರಾಜಕೀಯ ಗುರು ಇದ್ದಂತೆ..!

ಇದು ಮಾಜಿ ಶಾಸಕ, ಬಿಜೆಪಿ ಹಿರಿಯ ಮುಖಂಡ ಅಶೋಕ ಕಾಟವೆ ನುಡಿಯುವ ಮಾತಿದು.

ಯಡಿಯೂರಪ್ಪ ರಾಜಕಾರಣಕ್ಕೆ ಬಂದು 50 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಬಿಎಸ್‌ವೈ ಅವರೊಂದಿಗೆ ತಮಗಿದ್ದ ಒಡನಾಟ, ಹುರಿದುಂಬಿಸುತ್ತಿದ್ದ ಬಗೆಯನ್ನು ಪತ್ರಿಕೆಯೊಂದಿಗೆ ಮನ ಬಿಚ್ಚಿ ಹಂಚಿಕೊಂಡಿದ್ದಾರೆ.

ಯಡಿಯೂರಪ್ಪ ಎಂದರೆ ಅಗಾಧ ಶಕ್ತಿ. ಅವರ ಬಗ್ಗೆ ಎಷ್ಟು ಹೇಳಿದರೂ ಕಮ್ಮಿನೇ. ನಾನಷ್ಟೇ ಅಲ್ಲ. ನನ್ನಂತಹ ಹತ್ತು ಹಲವು ನಾಯಕರನ್ನು ಬೆಳೆಸಿದವರು ಯಡಿಯೂರಪ್ಪ. ಹೋರಾಟದಿಂದಲೇ ಅವರ ರಾಜಕೀಯ ಜೀವನ ಶುರುವಾಗಿದ್ದು ಎಂದು ಅಶೋಕ ಕಾಟವೆ ಹೇಳಿಕೊಳ್ಳುತ್ತಾರೆ.

1983ರಲ್ಲಿ ಪಾಲಿಕೆ ಸದಸ್ಯನಾಗಿದ್ದೆ. ಆ ಬಳಿಕ ಉಪಮೇಯರ್ ಕೂಡ ಆದೆ. ಪಾಲಿಕೆ ಸದಸ್ಯನಾಗುವ ಮುಂಚೆಯಿಂದಲೇ ಹುಬ್ಬಳ್ಳಿ ಅಥವಾ ಉತ್ತರ ಕರ್ನಾಟಕ ಯಾವುದೇ ಜಿಲ್ಲೆಗೆ ಬಿಎಸ್‌ವೈ ಬಂದರೂ ಅವರೊಂದಿಗೆ ಹೋಗುತ್ತಿದ್ದೆ.

ಬರೀ ಹೋರಾಟದಿಂದ ಬಿಜೆಪಿಯನ್ನು ಕಟ್ಟಿದವರು ಯಡಿಯೂರಪ್ಪ. ತುರ್ತು ಪರಿಸ್ಥಿತಿಯಲ್ಲೂ ನಾವಿನ್ನು ವಿದ್ಯಾರ್ಥಿಗಳು. ಆಗಿಂದಲೇ ನಮಗೆ ಸಂಘ ಪರಿವಾರದ ಒಡನಾಟ ಬಂದಿದ್ದು. ಆಗ ತುರ್ತು ಪರಿಸ್ಥಿತಿ ವಿರುದ್ಧ ಹೋರಾಟದಲ್ಲೂ ಪಾಲ್ಗೊಂಡಿದ್ದವು. ಬಳಿಕ ರೈತ ಹೋರಾಟ, ರಾಮಜನ್ಮಭೂಮಿ, ಕಾಶ್ಮೀರದಲ್ಲಿ ರಾಷ್ಟ್ರಧ್ವಜ ಹಾರಿಸುವಾಗಿನ ಹೋರಾಟ, ಈದ್ಗಾ ಹೋರಾಟ ಹೀಗೆ ಒಂದಿಲ್ಲ ಒಂದು ಹೋರಾಟ ನಡೆಯುತ್ತಲೇ ಇರುತ್ತಿತ್ತು. ಆಗೆಲ್ಲ ಯಡಿಯೂರಪ್ಪ, ಅನಂತಕುಮಾರ ನಮಗೆಲ್ಲ ಹುರಿದುಂಬಿಸುತ್ತಿದ್ದರು. ಬೆನ್ನುತಟ್ಟಿ ಪ್ರೋತ್ಸಾಹಿಸುತ್ತಿದ್ದರು.

ಈ ಕಾರಣದಿಂದಾಗಿಯೇ ರಾಜ್ಯದಲ್ಲಿ ಬರೀ ಎರಡು ಸ್ಥಾನಗಳಲ್ಲಿದ್ದ ಎಂಎಲ್ಎ, ಬರಬರುತ್ತಾ ಆಡಳಿತ ಪಕ್ಷವಾಗುವಷ್ಟು ಮಟ್ಟಿಗೆ ಬೆಳೆಯಿತು.




- ಯಡಿಯೂರಪ್ಪ ಎಂದರೆ ಅಗಾಧ ಶಕ್ತಿ. ಅವರ ಬಗ್ಗೆ ಎಷ್ಟು ಹೇಳಿದರೂ ಕಮ್ಮಿನೇ
- ನನ್ನಂತಹ ಹತ್ತು ಹಲವು ನಾಯಕರನ್ನು ಬೆಳೆಸಿದವರು ಯಡಿಯೂರಪ್ಪ
- ಅವರಿಂದಲೇ ನಾನು ನಾಯಕನಾಗಿ ಬೆಳೆದಿರುವುದು ಎಂದು ಹೇಳಲು ಹೆಮ್ಮೆ ಎನಿಸುತ್ತದೆ
- ಇನ್ನೂ ನೂರಾರು ಕಾಲ ಹೀಗೆ ಅವರು ಬದುಕು ಸಾಗಿಸಲಿ
- ಯುವಕರಿಗೆ ಮಾರ್ಗದರ್ಶನ ಮಾಡಲಿ ಎಂದು ಆಶಿಸುತ್ತೇನೆ

ರಾಮ ಜನ್ಮಭೂಮಿಯ ಹೋರಾಟದ ವೇಳೆ ಅಯೋಧ್ಯೆಗೆ ಹೋದಾಗ ಕರ್ನಾಟಕದ ತಂಡ ಇರುತ್ತಿದ್ದ ಪ್ರತಿ ಕ್ಯಾಂಪ್ ಬಳಿಯೂ ಯಡಿಯೂರಪ್ಪ ತೆರಳಿ ಮಾತನಾಡಿ ಕುಶಲೋಪರಿ ವಿಚಾರಿಸುತ್ತಿದ್ದರು. ಧೈರ್ಯ ತುಂಬುತ್ತಿದ್ದರು. ಈದ್ಗಾ ಮೈದಾನದ ಹೋರಾಟದ ವೇಳೆ ಒಂದೆರಡು ಬಾರಿ ಅವರೊಂದಿಗೆ ಜೈಲಿಗೆ ಹೋಗಿದ್ದೆ ಎಂದು ನೆನಪಿಸಿಕೊಳ್ಳುತ್ತಾರೆ.

ಹೋರಾಟದ್ದು ಒಂದು ಬಗೆಯಾದರೆ, 1994ರಲ್ಲಿ ಶಾಸಕನಾದೆ. ಸದನದಲ್ಲಿ ಹೇಗೆ ಚರ್ಚೆ ಮಾಡಬೇಕು. ಯಾವ ರೀತಿ ವಾದಿಸಬೇಕು. ಹೇಗೆಲ್ಲ ನಮ್ಮ ಅಭಿಪ್ರಾಯ ಮಂಡಿಸಬೇಕು ಎಂಬುದನ್ನು ಆಗಾಗ ನಮಗೆ ಯಡಿಯೂರಪ್ಪ ತಿಳಿಸುತ್ತಲೇ ಮಾರ್ಗದರ್ಶನ ಮಾಡುತ್ತಿದ್ದರು. ಅವರಿಂದಲೇ ನಾನು ನಾಯಕನಾಗಿ ಬೆಳೆದಿರುವುದು ಎಂದು ಹೇಳಲು ಹೆಮ್ಮೆ ಎನಿಸುತ್ತದೆ.

ನಾನಷ್ಟೇ ಅಲ್ಲ ನನ್ನಂತಹ ಹತ್ತಾರು ಜನರನ್ನು ಬೆಳೆಸಿದವರು ಯಡಿಯೂರಪ್ಪ. ಇನ್ನೂ ನೂರಾರು ಕಾಲ ಹೀಗೆ ಅವರು ಬದುಕು ಸಾಗಿಸಲಿ. ಯುವಕರಿಗೆ ಮಾರ್ಗದರ್ಶನ ಮಾಡಲಿ ಎಂದು ಆಶಿಸುತ್ತೇನೆ ಎಂದು ನುಡಿಯುತ್ತಾರೆ ಅಶೋಕ ಕಾಟವೆ.



ಬಿಎಸ್‌ವೈ ಸುವರ್ಣೋತ್ಸವ



ಸೇವೆಯನ್ನೇ ಏಕೈಕ ಕೈಂಕರ್ಯವನ್ನಾಗಿಸಿ ಕೊಂಡಿರುವ ನಾಯಕನಿಗೆ ಅಭಿಮಾನೋತ್ಸವ

ದಕ್ಷಿಣ ಭಾರತದ ಹೆಬ್ಬಾಗಿಲು ತೆರೆದ ಸಾಹಸಿ



• ಎನ್ . ಭೃಂಗೀಶ್
ನಿವೃತ್ತ ನಿರ್ದೇಶಕರು,
ವಾರ್ತಾ ಇಲಾಖೆ

ಉತ್ತರ ಕರ್ನಾಟಕದ ಬಡತನ ಮತ್ತು ಅಸಮತೋಲನ ನಿವಾರಣೆಗೆ ತಮ್ಮ ರಾಜಕೀಯ ಪ್ರವೇಶದ ದಿನಗಳಿಂದಲೂ ಆಸಕ್ತಿ ವಹಿಸುತ್ತಾ ಬಂದಿದ್ದ ಬಿಎಸ್‌ವೈ ಆ ಪ್ರದೇಶದ ಕೃಷಿ, ನೀರಾವರಿ, ಉದ್ಯೋಗ ಸೃಜನೆ ಹಾಗೂ ಕುಡಿಯುವ ನೀರಿನ ಸಮರ್ಪಕ ವಿತರಣೆಯತ್ತ ಗಮನ ಹರಿಸಿದ್ದರು. ಬಿಎಸ್‌ವೈ ಮೊಟ್ಟ ಮೊದಲಿಗೆ ಅಧಿಕಾರ ದೊರೆತಾಗ ತಮ್ಮ ಎಲ್ಲಾ ಶಕ್ತಿಯನ್ನು ವ್ಯಯಿಸಿದ್ದು ಇದೇ ದಿಕ್ಕಿನಲ್ಲಿ. ಬೆಳಗಾವಿ ಅಧಿವೇಶನದಲ್ಲಿ ಸುವರ್ಣ ವಿಧಾನಸೌಧ ನಿರ್ಮಿಸುವ ನಿರ್ಧಾರ ಪ್ರಕಟಿಸಿ ಅದರಂತೆ ನಡೆದುಕೊಂಡರು. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಭರವಸೆ ನೀಡಿದ್ದಂತೆ ಕ್ರಮಕ್ಕೈಗೊಂಡರು . ಆ ಮೂಲಕ ನುಡಿದಂತೆ ನಡೆಯುವ ನಾಯಕನೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಅರ್ಧ ಶತಮಾನದ ಅವಿರತ ಸೇವೆ. ಜನಮಾನಸದಲ್ಲಿ ಅವಿಚ್ಛಿನ್ನ ಸ್ಥಾನ. ಅದರ ಫಲಶ್ರುತಿಯೇ ಇಂದು ಬಿಎಸ್‌ವೈಗೆ ಅಭಿಮಾನೋತ್ಸವದ ಮೂಲಕ ಅಭಿನಂದನೆ.ಬಿಎಸ್‌ವೈ(ಬೂಕನಕೆರೆ ಸಿದ್ದಲಿಂಗಪ್ಪ ಯಡಿಯೂರಪ್ಪ) ಸಾರ್ವಜನಿಕ ಜೀವನ ಪ್ರವೇಶಿಸಿ 5 ದಶಕಗಳಾದ ಸಂಧರ್ಭದಲ್ಲಿ ಅವರ ಅಭಿಮಾನಿಗಳಿಂದ ಸ್ಮರಣೀಯ ಗೌರವಾರ್ಪಣೆ ಇಂದು (09.05.2026) ಗಂಡು ಮೆಟ್ಟಿದ ನಾಡು ಚಿತ್ರದುರ್ಗದಲ್ಲಿ. ನಾಡಿನಾದ್ಯಂತ ಬಂದಿರುವ ಸುಮಾರು 10 ಲಕ್ಷ ಅಭಿಮಾನಿಗಳು ಒಂದೆಡೆ ಸೇರುವ ಮತ್ತು ತಮ್ಮ ನಾಯಕನ ಗುಣಗಾನ ಮಾಡುವ ಸಾರ್ಥಕ್ಯದ ಸಂದರ್ಭವೂ ಇದು ಹೌದು. ಸೇವೆಯನ್ನೇ ಏಕೈಕ ಕೈಂಕರ್ಯವನ್ನಾಗಿಸಿ ಕೊಂಡಿರುವ ನಾಯಕನಿಗೆ ಸಾರ್ವಜನಿಕರು ಗೌರವಿಸುವ ಅಪರೂಪದ ಪರಿ ಇದು. ಕನ್ನಡಿಗರು ವಿಶಾಲ ಹೃದಯಿಗಳು ಎಂಬುದಕ್ಕೆ ಇದು ಮತ್ತೊಂದು ಸಾಕ್ಷಿ.

ದಕ್ಷಿಣ ಭಾರತದ ಹೆಬ್ಬಾಗಿಲನ್ನು ತಮ್ಮ ಪಕ್ಷಕ್ಕೆ ತೆರೆದ ಅಪರೂಪದ ಸಾಹಸಿ ಬಿಎಸ್‌ವೈ. ಇದು ಸಾಹಸವೂ ಹೌದು ಮತ್ತು ತಂತ್ರಗಾರಿಕೆಯೂ ಹೌದು. ಈ ಸಾಹಸ ಮತ್ತು ತಂತ್ರಗಾರಿಕೆ ಫಲಿಸದೆ ಹೋಗಿದ್ದರೆ ಬಿಜೆಪಿ ಇಂದಿಗೂ ವಿಂಧ್ಯ ಪರ್ವತದ ಆಚೆಗೇ ಸೀಮಿತವಾಗಿ ಉಳಿಯುತ್ತಿತ್ತು. 4 ಬಾರಿರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಿಎಸ್‌ವೈ ಅವರಿಗೆ ತಮ್ಮ ಧ್ಯೆಯೋದ್ದೇಶಗಳನ್ನು ಈಡೇರಿಸಲು ಪೂರ್ಣ ಅವಧಿ ಅವಕಾಶ ದೊರೆಯಲೇ ಇಲ್ಲ. ಆದರೆ ಛಲ ಬಿಡದ ತ್ರಿವಿಕ್ರಮನಂತೆ ತಮ್ಮ ಧ್ಯೇಯೋದ್ದೇಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಬಿಎಸ್‌ವೈ ಯಶಸ್ವಿಯಾಗಿದ್ದಾರೆ. ನಾಡಿನ ರೈತರ ಬೆನ್ನೆಲುಬನ್ನು ಭದ್ರ ಪಡಿಸುವ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ ಹೆಗ್ಗಳಿಕೆ ಅವರದು. ಸಹಕಾರಿ ಕೃಷಿ ಸಾಲದ ಮೇಲಿನ ಬಡ್ಡಿಯ ಹಿಡಿಕೆ ಮೂಲಕ ರೈತರಿಗೆ ನೆರವಾದ ಬಿಎಸ್‌ವೈ ಕೃಷಿ ಮತ್ತು ನೀರಾವರಿ ಕ್ಷೇತ್ರಗಳ ವಿಸ್ತರಣೆ ಮತ್ತು ಬಲಪಡಿಸುವಿಕೆಗೆ ನೀಡಿರುವ ಕೊಡುಗೆ ದಾಖಲಾರ್ಹ. ನಿಜವಾದ ಅರ್ಥದಲ್ಲಿ ಅವರು ಮಣ್ಣಿನ ಮಗ ಎಂಬುದನ್ನು ನಾಡು ಒಪ್ಪಿದೆ. ಸಮಕಾಲೀನ ರಾಜಕೀಯ ಸನ್ನಿವೇಶದಲ್ಲಿರಾಜ್ಯಕಂಡ ಮೂವರು ಸಮೂಹ ನಾಯಕರಲ್ಲಿ(ಮಾಸ್ ಲೀಡರ್) ಬಿಎಸ್‌ವೈ ಒಬ್ಬರು ಇನ್ನಿಬ್ಬರೆಂದರೆ ಎಚ್.ಡಿ. ದೇವೇಗೌಡರು ಮತ್ತು ಸಿದ್ದರಾಮಯ್ಯ. ಈ ನಾಯಕರು ಮಾತ್ರ ತಾವು ರಾಜಕೀಯವಾಗಿ ಯಾವ ನಡೆ ಅನುಸರಿಸುತ್ತಾರೋ ಅದೇ ಮಾರ್ಗದಲ್ಲಿ ತಮ್ಮ ಅನುಯಾಯಿಗಳನ್ನು ಸೆಳೆಯುವ ಸಾಮರ್ಥ್ಯವಿರುವವರು. ನಾಡಿನ ಗಣನೀಯ ಮತದಾರರ ಪೈಕಿ ಅಧಿಕ ಸಂಖ್ಯೆಯಲ್ಲಿ ತಮ್ಮ ರಾಜಕೀಯ ನಡೆಗೆ ಹೊಂದಿಸುವಲ್ಲಿ ಈ 3 ನಾಯಕರು ಸಿದ್ಧಹಸ್ತರು.

ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದಲ್ಲಿ ಬಿಎಸ್‌ವೈ ಮನೆ ಮನೆ ಹೆಸರು. ಕಾರಣ ಎಲ್ಲಾ ವಿರೋಧಗಳನ್ನು ಲೆಕ್ಕಿಸದೆ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಅವರುಕೈಗೊಂಡ ಡಾ. ಡಿ.ಎಂ. ನಂಜುಂಡಪ್ಪ ಉನ್ನತಾಧಿಕಾರ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನ ಮಾಡಿದ್ದು. ಈ ಸಮಿತಿಎಸ್ ಎಂ ಕೃಷ್ಣ ಸರ್ಕಾರದ ಕೂಸು. ಮಧ್ಯಂತರ ಮತ್ತು ಅಂತಿಮ ವರದಿ ಕೂಡ ಸಲ್ಲಿಕೆಯಾಗಿದ್ದು ಎಸ್.ಎಂ. ಕೃಷ್ಣ ಸರ್ಕಾರದ ಅವಧಿಯಲ್ಲೇ. ಆದರೆ ಆ ಶಿಫಾರಸ್ಸುಗಳ ಜಾರಿಗೆ ದಿಟ್ಟ ನಿರ್ಧಾರ ಕೈಗೊಂಡಿದ್ದು ಮಾತ್ರ ಬಿ. ಎಸ್. ಯಡಿಯೂರಪ್ಪ. ನಂಜುಂಡಪ್ಪ ವರದಿಯ ಶಿಫಾರಸ್ಸುಗಳು ಬಹುತೇಕ ಉತ್ತರ ಕರ್ನಾಟಕಕ್ಕೆ ಅನ್ವಯವಾದರೂ ಇಡೀ ರಾಜ್ಯಕ್ಕೆ ಅದರ ಲಾಭವಾಗಿದೆ.

ಬೆಳಗಾವಿಯಲ್ಲಿ ನಡೆದ ವಿಧಾನಮಂಡಲದ ಮೊಟ್ಟ ಮೊದಲ ಅಧಿವೇಶನದಲ್ಲಿ ಹಣಕಾಸು ಇಲಾಖೆ ಉನ್ನತಾಧಿಕಾರಿಗಳ ವಿರೋಧದ ನಡುವೆಯೂ ಈ ವರದಿ ಜಾರಿಯ ಬಗ್ಗೆ ಘೋಷಿಸಿದ್ದು ಬಿಎಸ್‌ವೈ. ಅವರಕ್ರಮದ ಫಲವಾಗಿ ಅಸಮಾನತೆ ನಿವಾರಣೆ ದಿಕ್ಕಿನಲ್ಲಿ ಈವರೆಗೆ 30,000 ಕೋಟಿ ರೂ. ಗೂ ಅಧಿಕ ಹಣ ವೆಚ್ಚವಾಗಿದೆ. ಇದೊಂದು ಐತಿಹಾಸಿನ ನಿಲುವು ಎಂಬುದರಲ್ಲಿ ಎರಡು ಮಾತಿಲ್ಲ. ಇದರ ಬಹುತೇಕ ಲಾಭ ಉತ್ತರ ಕರ್ನಾಟಕ ವಲ್ಲದೇ ಇಡೀ ರಾಜ್ಯಕ್ಕೆ ಆಗಿದೆ.



ಹಾರಿದ್ದು ಒಂದೇ ಹೆಲಿಕಾಪ್ಟರ್

ಕಳಸ ಬಂಡೂರಿ ನಾಲಾ ಯೋಜನೆಗೆ ಅಡಿಗಲ್ಲನ್ನು ಇಟ್ಟಿದ್ದು 2007 ರಲ್ಲಿ. ಆಗ ಹೆಚ್. ಡಿ. ಕುಮಾರಸ್ವಾಮಿ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ, ಬಿಎಸ್‌ವೈ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರು. ಉತ್ತರಕರ್ನಾಟಕದ ಬಡತನ ಮತ್ತುಅಸಮತೋಲನ ನಿವಾರಣೆಗೆ ತಮ್ಮ ರಾಜಕೀಯ ಪ್ರವೇಶದ ದಿನಗಳಿಂದಲೂ ಆಸಕ್ತಿ ವಹಿಸುತ್ತಾ ಬಂದಿದ್ದ ಬಿಎಸ್‌ವೈ ಆ ಪ್ರದೇಶದ ಕೃಷಿ, ನೀರಾವರಿ, ಉದ್ಯೋಗ ಸೃಜನೆ ಹಾಗೂ ಕುಡಿಯುವ ನೀರಿನ ಸಮರ್ಪಕ ವಿತರಣೆಯತ್ತ ಗಮನ ಹರಿಸಿದ್ದರು. ಬಿಎಸ್‌ವೈ ಮೊಟ್ಟ ಮೊದಲಿಗೆ ಅಧಿಕಾರ ದೊರೆತಾಗ ತಮ್ಮ ಎಲ್ಲಾ ಶಕ್ತಿಯನ್ನು ವ್ಯಯಿಸಿದ್ದು ಇದೇ ದಿಕ್ಕಿನಲ್ಲಿ.

ಕಳಸಾ ಬಂಡೂರಿ ನಾಲಾ ಯೋಜನೆಗೆ ಭೂಮಿ ಪೂಜೆ ಮಾಡಲು ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಜೊತೆಯಾಗಿ ಭಾಗವಹಿಸುವುದು ಅಧಿಕೃತವಾಗಿ ನಿಶ್ಚಯವಾಗಿತ್ತು. ಬೆಂಗಳೂರಿನಿಂದ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕಿನ ಗಡಿಗ್ರಾಮದಲ್ಲಿ ನಿಶ್ಚಯವಾಗಿದ್ದ ಕಾರ್ಯಕ್ರಮಕ್ಕೆ ಈ ಇಬ್ಬರು ನಾಯಕರು ಹೋಗುವುದಿತ್ತು. ಬೆಂಗಳೂರಿನ ಜಕ್ಕೂರು ವಾಯು ನೆಲೆಯಲ್ಲಿ 2 ಹೆಲಿಕಾಪ್ಟರ್‌ಗಳು ಸಿದ್ದವಾಗಿದ್ದವು. ಬೆಳಿಗ್ಗೆ 8.30 ಕ್ಕೆಪ್ರಯಾಣ ಆರಂಭವಾಗಬೇಕಿತ್ತು. ಆದರೆಕಾರ್ಯಕ್ರಮಕ್ಕೆ ಬರಬೇಕಿದ್ದ ಮುಖ್ಯಮಂತ್ರಿಗಳು ಯಾವುದೇ ಮುನ್ಸೂಚನೆ ನೀಡದೆ ತಮ್ಮ ಪ್ರಯಾಣ ರದ್ದುಗೊಳಿಸಿದರು. 9.30 ರ ವರೆಗೆ ಜಕ್ಕೂರು ನಿಲ್ದಾಣದಲ್ಲಿ ಮುಖ್ಯಮಂತ್ರಿಗಳ ಬರುವಿಕೆಗೆ ಕಾದ ಬಿ ಎಸ್‌ಯಡಿಯೂರಪ್ಪ ಕಾರ್ಯಕ್ರಮಕ್ಕೆ ಹೋಗಲೇಬೇಕೆಂಬ ಛಲದಿಂದ ಒಂದು ಹೆಲಿಕಾಪ್ಟರ್ ಏರಿದರು. ಮತ್ತೊಂದು ಹೆಲಿಕಾಪ್ಟರ್ ಅಲ್ಲೇ ಉಳಿಯಿತು. ಮುಖ್ಯಮಂತ್ರಿಗಳ ತಂಡ ಬಾರದೆ ಹೋದರೂ ಏಕಾಂಗಿಯಾಗಿ ಗೋವಾ – ಕರ್ನಾಟಕಗಡಿಗ್ರಾಮದಲ್ಲಿ ನಡೆದ ಕಳಸಾ ಬಂಡೂರಿ ನಾಲಾ ಯೋಜನೆಯ ಶಿಲಾನ್ಯಾಸವನ್ನು ನೆರವೇರಿಸಿದರು. ಸುರಿಯುವ ಮಳೆಯಲ್ಲಿ ನಡೆದ ಈ ಸಮಾರಂಭದಲ್ಲಿಅಂದು ಉಪ ಮುಖ್ಯಮಂತ್ರಿಗಳಿಗೆ ಸಹಯೋಗ ನೀಡಿದವರು ಅಂದಿನ ಜಲಸಂಪನ್ಮೂಲ ಸಚಿವ ಕೆ.ಎಸ್. ಈಶ್ವರಪ್ಪ ಮಾತ್ರ. ಉತ್ತರ ಕರ್ನಾಟಕದ ಅಭಿವೃದ್ಧಿಗೆ ಬದ್ಧರಾಗಿದ್ದ ಯಡಿಯೂರಪ್ಪಖುದ್ದು ಮುಖ್ಯಮಂತ್ರಿ ಸಮಾರಂಭಕ್ಕೆ ಬಾರದಿದ್ದರೂ ಯೋಜನೆ ಅನುಷ್ಠಾನದ ಹೊಣೆ ಹೊತ್ತುತಮ್ಮ ಬದ್ದತೆ ಮೆರೆದರು. ಇಂತಹ ದಿಟ್ಟ ನಿರ್ಧಾರಗಳಿಂದಲೇ ಯಡಿಯೂರಪ್ಪ ಅವರು ಉತ್ತರ ಕರ್ನಾಟಕದ ಜನ ಮಾನಸದಲ್ಲಿ ಶಾಶ್ವತವಾದಸ್ಥಾನಗಳಿಸಿಕೊಂಡಿದ್ದಾರೆ. ಬೆಳಗಾವಿ ಅಧಿವೇಶನದಲ್ಲಿಸುವರ್ಣ ವಿಧಾನಸೌಧ ನಿರ್ಮಿಸುವ ನಿರ್ಧಾರ ಪ್ರಕಟಿಸಿ ಅದರಂತೆ ನಡೆದುಕೊಂಡರು. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಭರವಸೆ ನೀಡಿದ್ದಂತೆ ಕ್ರಮಕೈಗೊಂಡರು ಆ ಮೂಲಕ ನುಡಿದಂತೆ ನಡೆಯುವ ನಾಯಕನೆಂಬ ಹೆಗ್ಗಳಿಕೆಗೆ ಪಾತ್ರರಾದರು.

ಅರ್ಧಶತಮಾನದ ಕಾಲ ಜನಮಾನಸದಲ್ಲಿ ನಿಜ ನಾಯಕನಾಗಿ ಉಳಿಯುವುದು ಅಷ್ಟು ಸುಲಭವಲ್ಲ. ಬಿಎಸ್‌ವೈ ಈ ಅಸಾಧ್ಯವನ್ನು ಸಾಧ್ಯವಾಗಿಸಿದ್ದಾರೆ. ಜನಅದನ್ನು ಮರೆಯದೆ ಸ್ಮರಿಸಿ ಗೌರವಿಸುತ್ತಿದ್ದಾರೆ. 83 ವರ್ಗಗಳ ಸನಿಹವಿರುವಯಡಿಯೂರಪ್ಪ ಈಗ ಸಾರ್ವಜನಿಕ ಜೀವನದಲ್ಲಿ ಗಳಿಸಬೇಕಾದದ್ದು ಏನೂ ಇಲ್ಲ. ಆದರೂಇಂತಹ ಸಮಾರಂಭ ಈ ಸನ್ನಿವೇಶದಲ್ಲಿ ಏಕೆ ಎಂಬುದು ಬಹು ಚರ್ಚಿತ ವಿ?ಯ. ಇದು ಬಿಎಸ್‌ವೈ ಅಭಿಮಾನಿಗಳ ಏಕೈಕ ನಿರ್ಧಾರವೋಅಥವಾಅವರ ಪಕ್ಷದ ನಿರ್ಧಾರವೋ ಎಂಬುದು ಕೂಡ ಚರ್ಚಿತವಾಗುತ್ತಿದೆ. ಈ ಎರಡು ಕಾರಣಗಳು ಇರಬಹುದು. ಏಕೆಂದರೆ 2021 ರಲ್ಲಿ ದಿಢೀರೆಂದು ಅಧಿಕಾರ ತ್ಯಾಗ ಮಾಡಲು ಒತ್ತಾಯಿಸಿದ ಪಕ್ಷದ ನಾಯಕತ್ವ ಇಂದು ಅದೇ ಬಿಎಸ್‌ವೈ ಅವರನ್ನು ಓಲೈಸುತ್ತಿದೆ. ಬೇಕಾದಾಗ ಬಳಸಿಕೊಳ್ಳುವ, ಬೇಡವಾದಾಗ ದೂರ ಸರಿಸುವ ಜಾಯಮಾನ ರಾಜಕಾರಣದಲ್ಲಿ ಸಾಮಾನ್ಯ ಆದರೂ ಕಹಿ ಭಾವನೆ ತೋರದೆ ಬಿಎಸ್‌ವೈ ಉತ್ಸಾಹದಿಂದ ಭಾಗವಹಿಸುತ್ತಿರುವುದು ವಿಶೇಷ

ಬಿಎಸ್‌ವೈ ಅಂದರೆ ನವೀನ ಗುಳಗಣ್ಣವರಿಗೆ ಅಚ್ಚುಮೆಚ್ಚು

ಜನರ ಮಡಿಲಲ್ಲಿ ಸಾರ್ಥಕ 50 ವರುಷ BSY ಅಭಿಮಾನೋತ್ಸವ



ಬಿಎಸ್‌ವೈ ಹಾದಿಯಲ್ಲಿ ದಿಟ್ಟ ಹೆಜ್ಜೆ ಇಟ್ಟಿರುವ ಕೊಪ್ಪಳ ಬಿಜೆಪಿ ಜಿಲ್ಲಾಧ್ಯಕ್ಷ | ಮಾಜಿ ಶಾಸಕ ದಿ. ಈಶಣ್ಣ ಗುಳಗಣ್ಣವರಂತೆ ಜನಾನುರಾಗಿ

ರೈತರನ್ನು ಶ್ರೀಮಂತಗೊಳಿಸಿ | ಮಕ್ಕಳಿಗೆ ಶಿಕ್ಷಣ ಕೊಡಿ | ಯುವಕರಿಗೆ ಉದ್ಯೋಗ ನೀಡಿ | ಮಹಿಳೆಯರಿಗೆ ಅಧಿಕಾರ ನೀಡಿ ಧ್ಯೇಯದಲ್ಲಿ ಕಾರ್ಯ


ಬಿಜೆಪಿ ಜಿಲ್ಲಾಧ್ಯಕ್ಷ ನವಿನ ಗುಳಗಣ್ಣವರ ಮಾಜಿ ಸಿಎಂ ಬಿಎಸ್‌ವೈ ಕುರಿತು ತಮ್ಮ ಮನದಾಳ ವ್ಯಕ್ತಪಡಿಸಿ ಅಭಿಮಾನೋತ್ಸವ ಕಣ್ತುಂಬಿಕೊಳ್ಳಲು ಇಡೀ ರಾಜ್ಯದ ಜನರು ಕಾತರರಾಗಿದ್ದಾರೆ ಎಂದು ಸಂತಸ ಹಂಚಿಕೊಂಡಿದ್ದಾರೆ.

ಬಿ.ಎಸ್. ಯಡಿಯೂರಪ್ಪ ರಾಜಕೀಯ ಉತ್ಸುಕರಿಗೆ ಹಿರಿಯರು. ಅವರ ಬಿಜೆಪಿ ಸಂಘಟನೆ ದೇಶಕ್ಕೆ ಮಾದರಿ. ಅವರು ಬಿಜೆಪಿಯ ದಕ್ಷಿಣ ಭಾರತರ ಭೀಷ್ಮ. ಅವರ ಹಾದಿಯಲ್ಲಿ ನಿಜಕ್ಕೂ ಮಾದರಿಯ ಪ್ರತಿರೂಪ. ಬಿ.ಎಸ್. ಯಡಿಯೂರಪ್ಪ ಅಭಿಮಾನೋತ್ಸವ ಇಡೀ ರಾಜ್ಯದ ಜನತೆಗೆ ಹರ್ಷ ನೀಡುತ್ತಿದೆ. ಪಕ್ಷ ಸಂಘಟನೆ ಚತುರ, ಹುಟ್ಟು ಹೋರಾಟಗಾರ, ಜನನಾಯಕ ಆಗಿರುವ ಯಡಿಯೂರಪ್ಪ ಬಿಜೆಪಿಗೆ ಸದಾ ಮಾರ್ಗದರ್ಶಕರು. ಅವರ ಪುತ್ರ ವಿಜಯೇಂದ್ರ ಸಹ ಎಲ್ಲರನ್ನೂ ಸಹೋದರತ್ವ ಭಾವನೆಯಲ್ಲಿ ಕಾಣುವರು ಎನ್ನುತ್ತಾರೆ ಬಿಜೆಪಿ ಜಿಲ್ಲಾಧ್ಯಕ್ಷ ನವೀನ ಗುಳಗಣ್ಣವರ.

ಯಡಿಯೂರಪ್ಪ 50 ವರ್ಷಗಳ ರಾಜಕೀಯ ಸೇವೆ ಹೋರಾಟ ಮತ್ತು ಸಾಧನೆಗಳಲ್ಲಿ ಕಳೆದ 25 ವರ್ಷಗಳಿಂದ ನನ್ನ ತಂದೆ ದಿ. ಈಶಣ್ಣ ಗುಳಗಣ್ಣವರ್ ಅವರ ಹಾಗೂ ಬಿ.ಎಸ್. ಯಡಿಯೂರಪ್ಪ ಹರ್ಷದ ದಿನಗಳನ್ನು ನೋಡುತ್ತಾ ಬೆಳೆದವನು ನಾನು. ನಮ್ಮ ಜಿಲ್ಲೆಯಲ್ಲಿ ಅವರ ಹೋರಾಟ, ಸೇವೆ ಮತ್ತು ಅಭಿವೃದ್ಧಿಯ ಅನೇಕ ಹೆಜ್ಜೆ ಗುರುತು ಕಳೆದ 40 ವರ್ಷಗಳಿಂದ ನೋಡಬಹುದು. ವಿಜಯೇಂದ್ರ, ಒಬ್ಬ ದೂರದೃಷ್ಟಿ, ಸಹೃದಯಿ ನಾಯಕ. ಯಡಿಯೂರಪ್ಪರಿಗಿಂತ ಹೆಚ್ಚು ಸವಾಲುಗಳು ವಿಜಯೇಂದ್ರ ಅವರಿಗೆ ಇವೆ, ಆ ಸವಾಲುಗಳನ್ನು ಎದುರಿಸುವ ತಾಕತ್ತು ಅವರಲ್ಲಿದೆ. ಕಾರ್ಯಕರ್ತರ ಜತೆ ಅತ್ಯಂತ ಪ್ರೀತಿಯಿಂದ ಮತ್ತು ಮುಗುಳ್ನಗೆಯಿಂದ ಮಾತನಾಡಿಸುವ ಅವರ ಗುಣ ಎಲ್ಲರೂ ಮೆಚ್ಚುವಂತದ್ದು. ಮಹತ್ವಾಕಾಂಕ್ಷೆಯುಳ್ಳವರು, ಹಠಮಾರಿಗಳು ಮತ್ತು ಗ್ರೌಂಡ್ ಲೆವೆಲ್‌ನಲ್ಲಿ ಪಕ್ಷವನ್ನು ಭದ್ರಗೊಳಿಸುವ ಚಾಕಚಕ್ಯತೆ ಅವರಲ್ಲಿದೆ.

ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು ಎನ್ನುವ ಘೋಷಣೆ ನಮಗೆ ಉತ್ಸಾಹ ಹೆಚ್ಚುಸುತ್ತಿತ್ತು.

ಸದ್ಯ ಅವರ ಈ ಅಭಿಮಾನೋತ್ಸವ ಬಿಜೆಪಿ ಪಕ್ಷ ಬಲಿಷ್ಠಗೊಳಿಸುವಲ್ಲಿ ನಮ್ಮಂತ ಕಿರಿಯರಿಗೆ ಶಕ್ತಿ ನೀಡುತ್ತದೆ ಎಂದು ಯಡಿಯೂರಪ್ಪ ಅವರ ಬಗೆಗಿನ ತಮ್ಮ ಮನದಾಳದ ಅಭಿಮಾನವನ್ನು ನವೀನ ಉತ್ಸುಕತೆಯಿಂದ ವ್ಯಕ್ತಪಡಿಸಿದರು.






ಸಂಘಟನಾ ಚತುರ ನವೀನ್ ಗುಳಗಣ್ಣವರ

ನವೀನ ಗುಳಗಣ್ಣವರ ಸದ್ಯ ಕೊಪ್ಪಳ ಜಿಲ್ಲೆಯ ಬಿಜೆಪಿ ಜಿಲ್ಲಾಧ್ಯಕ್ಷರು. ಬೂತ್ ಮಟ್ಟದಿಂದ ಹಿಡಿದು ಬಿಜೆಪಿ ಸಾಧನೆಯ ಕರಪತ್ರ ಹಂಚುವುದರಿಂದ ಯಾವುದೇ ಕಾರ್ಯವಿರಲಿ ಅದು ತನಗೆ ಸಿಕ್ಕ ಸೌಭಾಗ್ಯ ಎಂದು ಸದಾ ಜಿಲ್ಲೆಯಲ್ಲಿ ಪಕ್ಷ ಸಂಘಟನೆ ಮಾಡುತ್ತಾ ಪಕ್ಷದ ಅಭಿವೃದ್ಧಿಯ ಜಪ ಮಾಡುತ್ತಿದ್ದಾರೆ ಎನ್ನುತ್ತಾರೆ ಅವರ ಅಭಿಮಾನಿಗಳು. ಬಿಜೆಪಿ ಜಿಲ್ಲಾಧ್ಯಕ್ಷ ನವೀನ ಗುಳಗಣ್ಣವರ ಮಾಜಿ ಶಾಸಕ ದಿ. ಈಶಣ್ಣ ಗುಳಗಣ್ಣವರ ಹಾಗೂ ಬಿ.ಎಸ್. ಯಡಿಯೂರಪ್ಪ ಹಾದಿಯಲ್ಲಿ ಜನಾನುರಾಗಿಯಾಗಿ ಸಮಾಜಸೇವೆಗೆ ಅರ್ಪಿಸಿಕೊಂಡಿಕೊಂಡಿದ್ದಾರೆ.

1999, 2003ರ ವೇಳೆ ಜಿಲ್ಲೆಯಲ್ಲಿ ಬಿಜೆಪಿ ಪಕ್ಷವನ್ನು ತಳಮಟ್ಟದಿಂದ ಗಟ್ಟಿಗೊಳಿಸಿದ ಹಿರಿಮೆ ಈಶಣ್ಣ ಗುಳಗಣ್ಣವರಿಗೆ ಸಲ್ಲುತ್ತದೆ. 1999ರಲ್ಲೇ ತಂದೆ ಈಶಣ್ಣ ಅವರ ಜತೆಗೆ ಬಿಜೆಪಿಯ ಕಮಲ ಬಾವುಟ ಹಿಡಿದ ನವೀನ, ಅದನ್ನು ಜಿಲ್ಲೆಯಾದ್ಯಂತ ಬಾನೆತ್ತರಕ್ಕೆ ಹಾರಿಸುವಲ್ಲಿ ದಿಟ್ಟ ಹೆಜ್ಜೆಯನ್ನಿಟ್ಟಿದ್ದಾರೆ. 2015 ರಲ್ಲಿ ಬಿಜೆಪಿ ಯುವ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯರಾಗಿ ಸೇವೆ ಸಲ್ಲಿಸಿ, ಬಿಜೆಪಿ ಜನಪರ ಯೋಜನೆ, ಜನ ನಿಲುವು, ರೈತಪರ ಕಾಳಜಿ, ರಾಜ್ಯದ ಅಭಿವೃದ್ಧಿ ಯೋಜನೆ ರಾಜ್ಯದ ಜನತೆಗೆ ಮುಟ್ಟಿಸುವ ಕಾರ್ಯ ಮಾಡಿದರು. ರಾಜ್ಯ, ರಾಷ್ಟ್ರನಾಯಕರ ಗಮನ ಸಹ ಸೆಳೆದರು.

2019ರಲ್ಲಿ ಬಿಜೆಪಿ ಕೊಪ್ಪಳ ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಬಿಜೆಪಿ ಸಂಘಟನೆಗೆ ನವೀನ ಅಣಿಯಾದರು. 2025ರಲ್ಲಿ ಜಿಲ್ಲಾಧ್ಯಕ್ಷರಾಗಿ ಒಂದು ವರ್ಷ ಕಾರ್ಯ ಮಾಡಿದರು. ನಂತರ 2026ರಲ್ಲಿ ಸಹ ಅವರೇ ಬಿಜೆಪಿ ಜಿಲ್ಲಾಧ್ಯಕ್ಷರಾಗಿ ಪಕ್ಷ ಸಂಘಟನೆ ಮಾಡುವ ಯೋಗ ಅವರಿಗೆ ಒಲಿದು ಬಂದಿತು. ಎಂಬಿಎ ಪದವೀಧರಾದ ನವೀನ 2015ರಲ್ಲಿ ಆರ್‌ಎಸ್‌ಎಸ್ ಸಂಘ ಪರಿವಾರದ ಪ್ರಾಥಮಿಕ ಶಿಕ್ಷಣ ಸಹ ಪೂರೈಸಿದರು.





ಬಿಜೆಪಿ ಸಂಘಟನೆಗೆ ತಂದೆಯೇ ಸ್ಫೂರ್ತಿ

ಯಲಬುರ್ಗಾ ಕ್ಷೇತ್ರದಲ್ಲಿ ಬಿಜೆಪಿ ಸಂಘಟನೆ ಚತುರನಾಗಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಗುರುತಿಸಿಕೊಂಡಿದ್ದ ಕ್ಷೇತ್ರದ ರಾಜಕೀಯ ಋಷಿ, ಗ್ರಾಮಾಭಿವೃದ್ಧಿಯ ನಂದಾದೀಪ ಮಾಜಿ ಶಾಸಕ ಈಶಣ್ಣ ಗುಳಗಣ್ಣವರ ಏ. 16, 2022 ಶನಿವಾರ ಅನಾರೋಗ್ಯದಿಂದ ಕೊನೆ ಉಸಿರೆಳೆದಿದ್ದು, ಕ್ಷೇತ್ರದ ಕಿರೀಟವೊಂದು ಕಳಚಿದಂತ್ತಾಯಿತು.

1999ರಲ್ಲಿ ಈಶಣ್ಣ ಗುಳಗಣ್ಣವರ ಬಿಜೆಪಿ ಸೇರ್ಪಡೆ ಆಗಿ ಬಿಜೆಪಿಯಿಂದ ಯಲಬುರ್ಗಾ ವಿಧಾನಸಭಾ ಚುನಾವಣೆಗೆ ಕಣಕ್ಕಿಳಿದರು. ಬಿಜೆಪಿ ಪಕ್ಷ ಸಂಘಟನೆಯಲ್ಲಿ ಭೀಷ್ಮನಂತೆ ಕಾರ್ಯ ಮಾಡಿದ ಅವರಿಗೆ 2001 ರಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಸ್ಥಾನ ಒಲಿದು ಬಂದಿತು. ಆ ವೇಳೆ ಜಿಲ್ಲೆಯ ಪ್ರತಿ ಹಳ್ಳಿಗೂ ತೆರಳಿ ಬಿಜೆಪಿ ಸಂಘಟನೆಯಲ್ಲಿ ಸಕ್ರೀಯರಾಗಿ ಕೆಲಸ ಮಾಡಿದರು. 2001ರಿಂದ 2006ರ ವರೆಗೆ ಎರಡು ಅವಧಿಗೆ ಬಿಜೆಪಿ ಜಿಲ್ಲಾಧ್ಯಕ್ಷರಾಗಿದ್ದರು. 2003ರಲ್ಲಿ ಬಿಜೆಪಿಯಿಂದ ಚೈತನ್ಯ ಯಾತ್ರೆ ಹಮ್ಮಿಕೊಂಡು ಯಲಬುರ್ಗಾ ಕ್ಷೇತ್ರದಲ್ಲಿ ಇಪ್ಪತ್ತೈದು ದಿನ ಜರುಗಿದ ಈ ಚೈತನ್ಯ ಯಾತ್ರೆಯಲ್ಲಿ ಗ್ರಾಮಗಳಲ್ಲಿಯೇ ವಾಸ್ತವ್ಯ ಮಾಡುತ್ತಿದ್ದರು.

ಜಿಲ್ಲೆಯಲ್ಲಿ ಪ್ರಥಮ ಬಾರಿಗೆ ಎಂಬಂತೆ ಕುಷ್ಟಗಿ, ಕನಕಗಿರಿ ಕ್ಷೇತ್ರದಲ್ಲಿ ಬಿಜೆಪಿ ಪಕ್ಷ ಜಯಗಳಿಸಿತು. 2004ರಲ್ಲಿ ತಾವು ಸಹ ಬಿಜೆಪಿಯಿಂದ ಯಲಬುರ್ಗಾ ವಿಧಾನಸಭಾ ಕ್ಷೇತ್ರಕ್ಕೆ ಸ್ಪರ್ಧೆ ಮಾಡಿ ಕೇವಲ ಐದು ಸಾವಿರ ಮತಗಳ ಅಂತರದಲ್ಲಿ ಸೋತರು. ಸೋತರೂ ಸಹ ಪಕ್ಷ ಸಂಘಟನೆ ನಿಲ್ಲಿಸದ ಅವರು ಅವಿರತ ಪಕ್ಷ ಬಲವರ್ಧನೆ ಮಾಡಿದರು.

2008ರಲ್ಲಿ ಜರುಗಿದ ವಿಧಾನಸಭಾ ಚುನಾವಣೆಯಲ್ಲಿ ಸುಮಾರು 30 ಸಾವಿರ ಮತಗಳ ಅಂತರದಿಂದ ವಿಜಯಶಾಲಿ ಆಗಿದ್ದರು. ರಾಜ್ಯದಲ್ಲಿ ಅತೀ ಹೆಚ್ಚು ಮತ ಪಡೆದ ಎರಡನೇ ವಿಜಯಶಾಲಿ ಇವರಾಗಿದ್ದರು.

ಕೊವಿಡ್ ನಲ್ಲಿ ಅನನ್ಯ ಸೇವೆ

ಕೊರೋನಾ ವೈರಸ್ ಭೀಕರತೆ ಹೆಚ್ಚಾದ ವೇಳೆ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ನವೀನ ಯಲಬುರ್ಗಾ ಕ್ಷೇತ್ರಾದ್ಯಂತ ಸ್ಯಾನೀಟೈಸಿಂಗ್ ಕಾರ್ಯ ಕೈಗೊಂಡಿದ್ದರು. ಕೊರೋನಾದಂತ ವೈರಸ್ ಹರಡುವಿಕೆ ತಡೆಗಟ್ಟುವಲ್ಲಿ ಸ್ವಚ್ಚತೆ ಸಹ ಪ್ರಮುಖ ಪಾತ್ರ ವಹಿಸುತ್ತಿದ್ದು, ಗ್ರಾಪಂ, ಪಪಂ, ತಾಪಂಗಳು ಮಾಡುವ ಸ್ಯಾನಿಟೈಸಿಂಗ್ ಕಾರ್ಯ ಜತೆಗೆ ವೈಯಕ್ತಿಕವಾಗಿ ಹಮ್ಮಿಕೊಂಡಿರುವ ಈ ಕಾರ್ಯ ಸಹ ಪ್ರಶಂಸೆಗೆ ಕ್ಷೇತ್ರಾದ್ಯಂತ ಪಾತ್ರವಾಯಿತು.

ಉಪನ್ಯಾಸಕರು ಹೌದು

ನವೀನ ಗುಳಗಣ್ಣವರ ಎಂಬಿಎ ನಂತರ 2006ರಿಂದ 2010ರ ವರೆಗೆ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು. ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಉಪನ್ಯಾಸಕರಾಗಿದ್ದ ಇವರು, ಕಲಿಕೆಗೆ ಅವಶ್ಯಕವಾದ ನಾನಾ ಹೊಸತನ ವಿದ್ಯಾರ್ಥಿಗಳಿಗೆ ನೀಡಿದರು. ಇವರ ಕೈಯಲ್ಲಿ ಕಲಿತ ಅದೇಷ್ಟೋ ವಿದ್ಯಾರ್ಥಿಗಳು ಇಂದು ಉನ್ನತ ಹುದ್ದೆಯಲ್ಲಿದ್ದಾರೆ.

2008ರಲ್ಲಿ ಯಲಬುರ್ಗಾ ಕ್ಷೇತ್ರದ ಶಾಸಕರಾಗಿ ಈಶಣ್ಣ ಗುಳಗಣ್ಣವರ ಆಯ್ಕೆಯಾದಾಗ ನವೀನ ತಂದೆ ಜತೆಗೆ ಜನಸೇವೆಗೆ ಮುಂದಾದರು. ಈಶಣ್ಣ ಅವರು ಅನಾರೋಗ್ಯಕ್ಕೆ ತುತ್ತಾದಾಗ 2010ರಿಂದ 2013ರ ವರೆಗೆ ಕ್ಷೇತ್ರದಲ್ಲಿ ತಂದೆಯ ಸ್ಥಾನದಲ್ಲಿದ್ದುಕೊಂಡು ಕ್ಷೇತ್ರದ ಸೇವೆಗೆ ಮುಂದಾದರು. ಆಡಳಿತಕ್ಕೆ ಚ್ಯುತಿ ಬಾರದಂತೆ ಸರ್ಕಾರದ ಯೋಜನೆ ಜನರ ಮನೆ ಬಾಗಿಲಿಗೆ ಮುಟ್ಟಿಸಿದರು. ತಂದೆಯ ಅನಾರೋಗ್ಯ ಒಂದು ಕಡೆಯಾದರೆ, ಕ್ಷೇತ್ರದ ಅಭಿವೃದ್ಧಿ ಇನ್ನೊಂದು ಕಡೆ. ಅನಾರೋಗ್ಯ ಸ್ಥಿತಿಯಲ್ಲಿದ್ದ ತಂದೆ ಈಶಣ್ಣ ಅವರ ಸಮಾಜ ಸೇವೆ ಹಾಗೂ ಅವರ ಮೇಲೆ ಜನ ಇಟ್ಟಿರುವ ನಂಬಿಕೆಗೆ ಇಮ್ಮಡಿ ಸೇವೆ ನೀಡಿದರು.

ನಾಲ್ಕು ಧ್ಯೇಯ

ಸಮಾಜ ಸೇವೆಗೆ ನಾಲ್ಕು ಧ್ಯೇಯದ ಮೂಲಕ ಪಾದಾರ್ಪಣೆ ಮಾಡಿರುವ ನವೀನ ಗುಳಗಣ್ಣವರ, ರೈತರನ್ನು ಶ್ರೀಮಂತಗೊಳಿಸಿ, ಮಕ್ಕಳಿಗೆ ಶಿಕ್ಷಣ ಕೊಡಿ, ಯುವಕರಿಗೆ ಉದ್ಯೋಗ ನೀಡಿ, ಮಹಿಳೆಯರಿಗೆ ಅಧಿಕಾರ ನೀಡಿ ಧ್ಯೇಯದಲ್ಲಿ ಕಾರ್ಯ ಮಾಡುತ್ತಿದ್ದಾರೆ.

ನೀರಾವರಿಗೆ ಹೋರಾಟ

2016ರ ಅವಧಿಯಲ್ಲಿ ನವೀನ ಗುಳಗಣ್ಣವರ ಬಿಜೆಪಿ ಯುವ ಮೋರ್ಚಾದಿಂದ ಕೃಷ್ಣಾ ಬೀ ಸ್ಕೀಂ ನೀರಾವರಿ ಕಾಮಗಾರಿ ಸ್ಥಗೀತವಾಗಿದ್ದ ಕಾರಣ ಆಗಿನ ಸಿಎಂ ಸಿದ್ದರಾಮಯ್ಯ ಹಾಗು ಕಾಂಗ್ರೆಸ್ ಸರ್ಕಾರ ವಿರುದ್ಧ ಕಲಾಲ ಬಂದಿಯಿಂದ ಕೊಪ್ಪಳದವರೆಗೆ ಜರುಗಿದ ಪಾದಯಾತ್ರೆ ನೇತೃತ್ವ ವಹಿಸಿದ್ದರು. ಅನ್ಯಾಯ, ಸಾಮಾಜಿಕ ಕಾರ್ಯಕ್ಕೆ ಧಕ್ಕೆ ಬಂದಾಗ ಹೋರಾಟಕ್ಕೆ ಧುಮುಕುವ ಗುಣದವರು.

- ನವಿನ ಗುಳಗಣ್ಣವರ ತಾಯಿ ಗಂಗಮ್ಮ ಎರಡು ಸಲ ಜಿಪಂ ಸದಸ್ಯೆಯಾಗಿ ಜನ ಸೇವೆಗೈದಿದ್ದಾರೆ, ಇನ್ನೂ ನವೀನ ಸಹೋದರ ಶಿವಕುಮಾರ ಗುಳಗಣ್ಣವರ ಸಹ ಸದಾ ಜನರೊಟ್ಟಿಗೆ ಬೆರೆಯುವ ಗುಣದವರಾಗಿದ್ದಾರೆ.

ವೀಲ್ ಚೇರಿನಲ್ಲಿ ತೆರಳಿ ಬಿಎಸ್‌ವೈಗೆ ಬೆಂಬಲ

ಮಾಜಿ ಶಾಸಕ ದಿ. ಈಶಣ್ಣ ಗುಳಗಣ್ಣವರ ಅನಾರೋಗ್ಯದಿಂದ ಬಳಲುತ್ತಿದ್ದಾಗ ಬಿ.ಎಸ್. ಯಡಿಯೂರಪ್ಪ 2011ರಲ್ಲಿ ಮುಖ್ಯ ಮಂತ್ರಿ ಆಗುವ ಸಂರ್ಭದಲ್ಲಿ ಅವರು ವ್ಹೀಲ್ ಚೇರಿನಲ್ಲಿ ವಿಧಾನಸೌಧಕ್ಕೆ ತೆರಳಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಬೆಂಬಲ ಸೂಚಿಸಿದ್ದರು.














ಜನ ಸೇವೆಯಲ್ಲಿ ಸಾರ್ಥಕ 50 ವರುಷ BSY
ಅಭಿಮಾನೋತ್ಸವ
ನಾಡು ಕಂಡ ಶ್ರೇಷ್ಠ ಮುಖ್ಯಮಂತ್ರಿ, ಸಾಮಾಜಿಕ ನ್ಯಾಯದ ರೂವಾರಿ ಸನ್ಮಾನ್ಯ ಶ್ರೀ ಬಿ.ಎಸ್. ಯಡಿಯೂರಪ್ಪನವರು ತಮ್ಮ ರಾಜಕೀಯ ಜೀವನದ ಯಶಸ್ವಿ 50 ವರ್ಷಗಳನ್ನು ಪೂರೈಸಿರುವುದು ಅವಿಸ್ಮರಣೀಯವಾಗಿದೆ.
ಅರ್ಧ ಶತಮಾನದ ಕಾಲ ಜನಸೇವೆಯನ್ನೇ ಉಸಿರಾಗಿಸಿಕೊಂಡು, ಪಕ್ಷ ಮತ್ತು ನಾಡಿನ ಏಳಿಗೆಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟ ಅವರ ಬದುಕು ಎಲ್ಲರಿಗೂ ಆದರ್ಶಪ್ರಾಯವಾಗಿದೆ.
ಮೇ 09, 2026, ಶನಿವಾರ ಚಿತ್ರದುರ್ಗ
ಬಿ.ಎಸ್. ಯಡಿಯೂರಪ್ಪರವರ
ಅಭಿಮಾನೋತ್ಸವ
ನಡೆಯಲಿದ್ದು, ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಅಭಿಮಾನಿಗಳು ಪಾಲ್ಗೊಳ್ಳಬೇಕೆಂದು ಮನವಿ ಹಾಗೂ
ಹೃತ್ಪೂರ್ವಕ ಸ್ವಾಗತ....
ಶ್ರೀ ಎಂ. ರುದ್ರೇಶ್
ಉಪಾಧ್ಯಕ್ಷರು, ಬಿಜೆಪಿ ರಾಜ್ಯ ರೈತ ಮೋರ್ಚಾ ಹಾಗೂ ಮಾಜಿ ಅಧ್ಯಕ್ಷರು ಕೆಆರ್‌ಐಡಿಎಲ್
ಶ್ರೀ ಜಿ. ಮರಿಸ್ವಾಮಿ
ಮಾಜಿ ಅಧ್ಯಕ್ಷರು ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ
ಶ್ರೀ ಸಿ. ಮುನಿರಾಜು
ಮಾಜಿ ಅಧ್ಯಕ್ಷರು, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಹಾಗೂ ಮಾಜಿ ಅಧ್ಯಕ್ಷರು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬಿಜೆಪಿ ರಾಜ್ಯ ಕಾರ್ಯದರ್ಶಿ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರ